ಅಪರಂಜಿ

ತಿಳಿನಗೆಯ ಕಾರಂಜಿ



ಏಪ್ರಿಲ್ - 2009



ರಿಸೆಷನ್ ! ರಿಸೆಷನ್ !




ಬಿಡಿ ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್



ಸಂಪುಟ 26
ಸಂಚಿಕೆ - 7
ಏಪ್ರಿಲ್ - 2009

ಈ ಸಂಚಿಕೆಯಲ್ಲಿ.....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇತನ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 808-26688488. email: brmurthy@dataone.in



ಂ ಪ್ರಕಾಶ್

ನಗರಕ್ಕೆ ಮಾನೋ ರೈಲು ಪರಿಣಾಮಕಾರಿ – ಹೇಳಿಕೆ

• ನಮ್ಮ ಮೊಮ್ಮಕ್ಕಳ ಕಾಲಕ್ಕೆ ಬರಬಹುದು !!

★★★

ಗಾಂಧೀಜಿಯವರ ವಸ್ತುಗಳ ಹರಾಜು?? – ಪತ್ರಿಕೆ

• ಅವರ ಸೂತ್ರಗಳೇ ಹರಾಜಾದ ಮೇಲೆ ಇದೇನು ಮಹಾ !?

★★★

ಕುಟುಂಬ ರಾಜಕೀಯ; ಇದೀಗ ಬಿ.ಜೆ.ಪಿ. ಸರದಿ – ಸುದ್ದಿ

• ಇದೂ ಒಂದು ಸಾಂಕ್ರಮಿಕ ರೋಗ !!?

★★★

ರೈತರನ್ನು ವಂಚಿಸಿ ರಾಗಿ ಸರಬರಾಜು – ಪತ್ರಿಕೆ

• ನೀವು 'ಸತ್ಯವಂತ-ರಾಗಿ' ಎಂದು ಅಪರಂಜಿ ಉಪದೇಶಿಸಿದಳಂತೆ !!

★★★

ಚುನಾವಣಾ ಅಭ್ಯರ್ಥಿಗಳ ಕೊರತೆ; 'ಗಾಳ' ಹಾಕಿ ಕಾದಿರುವ ಮೂರೂ ಪಕ್ಷಗಳು–ಶೀರ್ಷಿಕೆ

• "Something fishy!"

★★★

ಎಂಜಿನಿಯರ್ ಮನೆಯಲ್ಲಿ 6 ಕೆ.ಜಿ. ಚಿನ್ನ – ಸುದ್ದಿ

• 'ಅಪರಂಜಿ – ನಿಯರ್' ಅನ್ನಬಹುದೆ ?!

★★★

ಭೂಮಿಯಂತಹ ಗ್ರಹದ ಪತ್ತೆಗೆ ನಭಕ್ಕೆ ಜಿಗಿದ ಟೆಲಿಸ್ಕೋಪ್ – ಅಮೆರಿಕಾ ಸುದ್ದಿ

• ಒಂದು ಸಾಲದು ಅಂತಲೋ !?

★★★


ಹಿಡಕಲ್ ಹಿನ್ನೀರಿನಲ್ಲಿ ವಿದೇಶಿ ಹಕ್ಕಿಗಳ ಕಲರವ – ಪತ್ರಿಕೆ

• Recession ಪ್ರಭಾವ ??!

★★★

ಬೊಪ್ಪೇರ ಬೆಳ್ಳಿಯಪ್ಪ ಪ್ರಸಂಗ

- ವತ್ಸನ



'ಥತ್ ಎಂಥಾ ರಾಮರಾಜ್ಯ ಆಗ್ಹೋಗಿದೆ ನಮ್ಮ ಊರು. ಒಂದು ವಾರದಿಂದ ಕೆಲಸ ಇಲ್ದೆ ನೊಣ ಹೊಡೀತಾ ಇದೀನಿ. ಸಮಸ್ಯೆ ಪರಿಹಾರ ಮಾಡೋಣ ಅಂದ್ರೆ ಒಂದು ಸ್ಕ್ಯಾಮ್ ಇಲ್ಲ, ಒಂದು ಕಳ್ಳತನ ಇಲ್ಲ ಮರ್ಡರ್ಕ್ಷವಲ್ಲಿ ಅಧಿಕಮಾಸ ಅನ್ನೋಹಾಗೆ ಐಪಿಎಲ್ ಕೂಡಾ ದಕ್ಷಿಣ ಆಫ್ರಿಕಾಕ್ಕೆ ವಲಸೆ ಹೊರಟಿದೆ. ಶತಬೋರು' ಅಂತ ಶರಲೇಖಿ ತಪಿಸ್ತಾ ಕೂತಿದ್ದ. 'ಕೇಸ್ ಇಲ್ದೆ ಇದ್ರೆ ಏನ್ ಮಹಾ. ಸುಮ್ನೆ ಹರಿಗಾಳು ಮೆಲ್ಕೊಂಡು ಸೀರಿಯಲ್‌ಗಳನ್ನ ನೋಡ್ಕೊಂಡು ಮಜವಾಗಿ ಇರುಕ್ಕೆ ಆಗುಲ್ವೇ' ಅಂತ ನಾನು ಸಮಜಾಯಿಷಿ ಹೇಳಿದೆ. ಶರಲೇಖಿನ ವ್ಯಕ್ತಿತ್ವಾನೇ ಹಾಗೆ. ಸದಾ ಏನಾದ್ರೊಂದು ಕೆಲಸಾ ಮಾಡ್ತಾನೇ ಇರ್ಬೇಕು. ಇಲ್ಲ ಅಂದ್ರೆ ಚಡಪಡಿಕೆ ಶುರು. ಟಿಪಿಕಲ್ ಟೈಪ್ ಎ ಪರ್ಸನಾಲಿಟಿ. ಅಷ್ಟುಹೊತ್ತಿಗೆ ನನ್ನ ಮೊಬೈಲ್ ಕಿಲಕಿಲ ಅಂತ ನಕ್ಕಿತು. ಈ ಮೊಬೈಲ್‌ಗಳು ಹದಿಹರೆಯದವರಿಗೆ ಸಿಗಲೇಬಾರದು ನೋಡಿ. ನಮ್ಮಕ್ಕನ ಮಗಳು ಶೀಲ ಮೊನ್ನೆ ಮನೆಗೆ ಬಂದಿದ್ದಾಗ ನನ್ನ ಮೊಬೈಲ್‌ನ ಎರವಲು ಪಡೆದಿದ್ದಳು. ಅವಳದನ್ನ ಮರೆತು ಬಂದಿದ್ದಳಂತೆ. ಅವಳ ಕೈಸೇರಿದ್ದೇ ತಡ ಅದರ ಕಾಲ್ ಟೋನು ರಿಂಗ್ ಟೋನು ಎಲ್ಲಾ ಬದಲು. ಈಗ ಅದಕ್ಕೆ ಕಿಲಕಿಲ ಅಂತ ನಕ್ಕು ನನ್ನನ್ನೇ ಅಣಕಿಸುವಷ್ಟು ಧಾರ್ಷ್ಟ್ಯ. ಫೋನಿನ ಆ ತುದಿಯಲ್ಲಿ ನನ್ನ ಕಾಲೇಜ್ ಸಹಪಾಠಿ ಬೆಳ್ಳಿ ಉರುಫ್ ಬೆಳ್ಳಿಯಪ್ಪ ಇದ್ದ. ಅವನ ಧ್ವನಿಯಲ್ಲಿ ಗಾಬರಿ, ಕಾತರ ಎದ್ದು ಕಾಣುತ್ತಿತ್ತು.

'ವತ್ಸನ, ಅತ್ಯಂತ ಸಂಧಿಗ್ಧ ಪರಿಸ್ಥಿತಿ ಬಂದುಬಿಟ್ಟಿದೆ. ಅರ್ಜೆಂಟಾಗಿ ಶರಲೇಖಿನನ್ನ ಇಲ್ಲಿಗೆ ಕರೆತರಲು ಆಗುತ್ತೇ. ಖಂಡಿತ ಬರ್ಲೇಬೇಕು. ನನಗಂತೂ ದಿಕ್ಕೇ ತೋಚ್ತಾ ಇಲ್ಲ' ಅಂತ ಬೆಳ್ಳಿ ಬಡಬಡಿಸ್ದ.

'ಇಲ್ಲಿ ಅಂದ್ರೆ ಎಲ್ಲಿ, ಕಡ್ಯಮಾಡ ಎಸ್ಟೇಟಿಲ್ಲೇ ಇದ್ದೀಯಾ ಈಗ?' ಅಂತ ಕೇಳಿದೆ.

'ಹೌದು. ವಿವರವಾದ ವಿಳಾಸನ ಎಸ್‌ಎಂಎಸ್ ಮಾಡ್ತೇನೆ. ಯಾವಾಗ ಬರ್ತೀರಾ?'

ಶರಲೇಖಿನಿಗೆ ಬೆಳ್ಳಿಯ ಅಹವಾಲನ್ನ ಹೇಳ್ದೆ. 'ನಾಳೇ ಬೆಳಗ್ಗೇನೆ ಹೊರಡ್ತೀವಿ ಅಂತ ಹೇಳು' ಅಂದ ಅವ. ಬೆಳ್ಳಿಗೆ ನಾವು ಬರೋದನ್ನ ಕನ್ಫರ್ಮ್ ಮಾಡ್ದೆ, ಅವ ಮೈಸೂರಿಗೆ ತನ್ನ ಕಾರನ್ನ ಕಳಿಸ್ತೀನಿ ಎಲ್ಲಿ ಮೀಟ್ ಮಾಡೋದು ಅಂತ ಎಸ್‌ಎಂಎಸ್ ಮಾಡು ಅಂತ ಹೇಳಿದ.

ಮಾರನೇದಿನ ಮೈಸೂರು ಸೇರಿದಾಗ ಸಮಯ ಹನ್ನೆರಡಾಗಿತ್ತು. ಸದರ್ನ್ ಸ್ಟಾರಿನಲ್ಲಿ ಬೆಳ್ಳಿಯ ಡ್ರೈವರ್ ಜಹೀರ್ ನಮ್ಮನ್ನ ಪಿಕ್‌ಅಪ್ ಮಾಡಿಕೊಂಡು ಕಾರನ್ನ ವಿರಾಜಪೇಟೆ ಕಡೆ ತಿರುಗಿಸಿದ.

ಬೆಳ್ಳಿ ಇಪ್ಪಪ್ಪು ಕಡ್ಯಮಾಡ ಕಾಡುಮನೆ ತೋಟದಲ್ಲಿ, ವಿರಾಜಪೇಟೆಗೆ ಸುಮಾರು ಇಪ್ಪತ್ತು ಕಿಲೋಮೀಟರ್ ದೂರ. ದಾರಿಯ ಎರಡೂ ಬದಿ ಫಲಭರಿತವಾದ ಕಿತ್ತಳೆಗಿಡಗಳು. ಹಿನ್ನೆಲೆಯಲ್ಲಿ ಕಾಫಿ ಗಿಡಗಳು ಸೊಂಪಾಗಿ ಬೆಳೆದು ನಿಂತಿದ್ದವು. ಕಡ್ಯಮಾಡ ತೋಟ ಸೇರಿದಾಗ ಸಂಜೆಯಾಗುತ್ತಾ ಬಂದಿತ್ತು. ಗೇಟು ತೆಗೆದು ಒಳಕ್ಕೆ ಪ್ರವೇಶ ಮಾಡುತ್ತಿದ್ದಾಗ ಯುವಕನೊಬ್ಬ ನಮ್ಮ ಬಳಿಬಂದು ತನ್ನನ್ನು ಪರಿಚಯಿಸಿಕೊಂಡ. 'ನಾನು ಪೊನ್ನಪ್ಪ. ಬೆಳ್ಳಿ ನನ್ನ ಅಂಕಲ್ ನಿಮ್ಮನ್ನ ಇದಿರುಗೊಂಡು ಕರೆದುಕೊಂಡು ಬಾ ಅಂತ ಅಂಕಲ್ ಹೇಳಿದ್ದಾರೆ' ಅಂದ ಪೊನ್ನಪ್ಪ. 'ಬೆಳ್ಳಿ ಹೇಗಿದ್ದಾನೆ' ಅಂತ ನಾನು ಲೋಕಾಭಿರಾಮವಾಗಿ ಕೇಳಿದೆ. 'ಅಂಕಲ್‌ಗೆ ಬಲಗಾಲು ಫ್ರಾಕ್ಚರ್ ಆಗಿದೆ. ಹಾಸಿಗೆಮೇಲೆ ಇರಬೇಕಂತೆ.' ಅಂತ ಅವ ಉತ್ತರಿಸಿದ. ಅಷ್ಟು ಹೊತ್ತಿಗೆ ದೂರದಿಂದ ಕರುವಿನಷ್ಟು ಎತ್ತರವಿದ್ದ ನಾಯಿಯೊಂದು ಜೋರಾಗಿ ಬೊಗಳುತ್ತಾ ನಮ್ಮತ್ತ ಓಡಿ ಬರತೊಡಗಿತು. ನನಗೋ ಮೊದಲಿನಿಂದ ನಾಯಿಗಳು ಅಂದರೆ ಜೀವಭಯ. ದೇವರದಯೆ. ಪೊನ್ನಪ್ಪ 'ನಿಲ್' ಅಂದ ತಕ್ಷಣ ನಾಯಿ ಮಂತ್ರಿಗಳನ್ನು ಕಂಡ ಮುಖ್ಯ ಕಾರ್ಯದರ್ಶಿಯಂತೆ ಬಾಲವಾಡಿಸುತ್ತಾ ಸುಮ್ಮನಾಯಿತು.

ಸ್ವಲ್ಪ ನಡೆದ ನಂತರ ಬಲಕ್ಕೆ ತೋಟದ ಮನೆ ಕಣ್ಣಿಗೆ ಬಿತ್ತು. ವಿಶಾಲವಾದ ಪೋರ್ಟಿಕೋ. ವೆರಾಂಡಾದಲ್ಲಿ ಬೆತ್ತದಿಂದ ಹೆಣೆದ ಸೋಮಾರಿ ಕುರ್ಚಿಗಳು. ರೆಡ್ ಆಕ್ಸೈಡ್ ನೆಲ. ಮನೆ ಮುಂದೆ ಹೂ ಬಿಟ್ಟ ದಾಸವಾಳದ ಹಾಗೂ ಮಲ್ಲಿಗೆ ಗಿಡಗಳು. ಪೊನ್ನಪ್ಪ ನಮ್ಮನ್ನ ಒಳಕ್ಕೆ ಬೆಳ್ಳಿ ಇದ್ದ ಕೋಣೆಗೆ ಕರೆದೊಯ್ದ. ಬೆಳ್ಳಿಯನ್ನು ಕಂಡ ತಕ್ಷಣ ನನಗೆ ಆಘಾತವಾಯಿತು. ನಾನು ಕಾಲೇಜಿನಲ್ಲಿ ನೋಡಿದ್ದ ಹಾಕಿ ಆಡುತ್ತಿದ್ದ ಧಾಂಡಿಗ ಬೆಳ್ಳಿ ಎಲ್ಲಿ, ಹಾಸಿಗೆಯ ಮೇಲೆ ಒರಗಿ ಕುಳಿತಿದ್ದ, ಆತಂಕದಿಂದ ಕುಗ್ಗಿದ್ದ ಬೆಳ್ಳಿ ಎಲ್ಲಿ. 'ಏನಾಯ್ತೋ?' ಅಂತ ಕೇಳಿ ಅವನ ಬಳಿ ಸಾಗಿ ಕೈಕುಲುಕಿದೆ. ಶರಲೇಖ ಹತ್ತಿರದ ಕುರ್ಚಿಯಲ್ಲಿ ಕುಳಿತ.

'ನೀವಿಬ್ಬರೂ ತಕ್ಷಣ ಬಂದಿದ್ದಕ್ಕೆ ನಾನು ಎಷ್ಟು ವಂದಿಸಿದರೂ ಸಾಲದು. ಯಾಕೋ ನನ್ನ ಗ್ರಹಚಾರ ಸರಿಯಿಲ್ಲ ಅಂತ ಕಾಣುತ್ತೆ. ಒಂದರಮೇಲೊಂದು ಏಟು ಒಂದು ವಾರದ ಹಿಂದೆ ಮನೆಯಲ್ಲಿದ್ದ ಪವಿತ್ರ ಕತ್ತಿಗಳ ಕಳ್ಳತನ. ಮೊನ್ನೆ ತೋಟದಲ್ಲಿ ಹರೀತಿರೋ ಝರಿ ಮೇಲಿನ ಸೇತುವೆ ಸಡಿಲವಾಗಿ ಕಾಲಿನ ಮೂಳೆ ಜಖಂ. ಇನ್ನೆರಡು ವಾರಕ್ಕೆ ದೇವಕಿ ಮದುವೆ ನಿಶ್ಚಿತಾರ್ಥ ಬೇರೆ. ಎಲ್ಲಿಂದ ಶುರು ಮಾಡೋದೋ ಗೊತ್ತೇ ಆಗ್ತಾ ಇಲ್ಲ' ಅಂತ ಬೆಳ್ಳಿ ಹಲುಬಿದ.

ಶರಲೇಖ ಬಹು ಸಮಾಧಾನದ ದನಿಯಿಂದ 'ಬೆಳ್ಳಿ ಅವರೇ, ವತ್ಸನನ ಮಿತ್ರ ಅಂದಮೇಲೆ ನನಗೂ ಗೆಳೆಯ ತಾನೇ. ಏನೂ ಸಂಕೋಚ ಪಡದೇ ಆಗಿದ್ದೆಲ್ಲವನ್ನು ಚಾಚೂ ತಪ್ಪದೇ ವಿವರವಾಗಿ ಹೇಳಿ. ಅದರಿಂದ ನನಗೂ ಮಾಹಿತಿ ಸಿಕ್ಕಿ ನಿಮ್ಮ ಸಮಸ್ಯೆ ಪರಿಹಾರದತ್ತ ಪ್ರಯತ್ನಿಸಬಹುದು.' ಅಂತ ಹೇಳುತ್ತಿರುವಾಗಲೇ ಬೆಳ್ಳಿಯ ಪತ್ನಿ ಕಾವೇರಮ್ಮ ನಮಗೆ ಕಾಫಿ, ಹಪ್ಪಳ ತಂದಿಟ್ಟರು.

ಆಗ ಬೆಳ್ಳಿ ತನ್ನ ಸಮಸ್ಯೆಗಳ ಬಗ್ಗೆ ಹೇಳಲು ಪ್ರಾರಂಭಿಸಿದ.

'ಗೆಳೆಯರೊಂದಿಗೆ ಮಾತನಾಡಲು ಸಂಕೋಚ ಏಕೆ? ಅಲ್ಲದೇ ಎಲ್ಲಾ ವಿವರಗಳೂ ತಿಳಿಯದೇ ಶರಲೇಖ ಪರಿಹಾರವನ್ನು ಹುಡುಕುವುದಾದರೂ ಹೇಗೆ? ಇದೆಲ್ಲಾ ಶುರುವಾದದ್ದು ನಮ್ಮ ಮಗಳು ದೇವಕಿಯ ಮದುವೆ ಗೊತ್ತಾದಮೇಲೆ. ಕುಶಾಲನಗರದ ಹತ್ತಿರದ ಚೆಟ್ಟೀರ ಕುಟುಂಬದ ದೇವಯ್ಯ ಅವರ ಮಗ ಮೇದಪ್ಪ ದೇವಕಿಯ ವರ. ಬಹಳ ಒಳ್ಳೇ ಹುಡುಗ. ಮದುವೆ ಮಾತುಕತೆ ನಡೆದ ಮಾರನೆಯ ದಿನವೇ ನಮ್ಮ ಮನೆಯಲ್ಲಿದ್ದ ಒಡಿ ಕತ್ತಿ ಹಾಗೂ ಪಿಛೆ ಕತ್ತಿ ಇವುಗಳು ಕಾಣೆಯಾದವು. ಎಷ್ಟು ಹುಡುಕಿದರೂ ಇನ್ನೂ ಸಿಕ್ಕಿಲ್ಲ.............'

'ಕ್ಷಮಿಸಿ, ಏನಿವು ಕತ್ತಿಗಳು?'

'ನಮ್ಮ ಕೊಡವ ಸಂಪ್ರದಾಯದಲ್ಲಿ ಇವಕ್ಕೆ ಬಹಳ ಮಹತ್ವ. ಕುಟುಂಬದ ರಕ್ಷಣೆಗೆ ತಲತಲಾಂತರದಿಂದ ಬಂದಿರುವ ಈ ಕತ್ತಿಗಳು ನಮಗೆ ಅತಿ ಪವಿತ್ರ. ಅವಿಲ್ಲದೇ ಯಾವುದೇ ಮಂಗಳ ಕಾರ್ಯಗಳು ನಡೆಯುವಂತಿಲ್ಲ. ಮದುವೆ ಸಮಾರಂಭದಲ್ಲಿ ವಧುವಿನ ಕಡೆಯ ಹಿರಿಯರು ಶತ್ರುನಾಶವನ್ನು ಸೂಚಿಸಲು ಒಡಿಕತ್ತಿಯನ್ನು ಬಳಸಿ ಮೂರು ಬಾಳೇ ಕಂದುಗಳನ್ನು ಕಡಿಯಬೇಕು. ಅಂದು ಬೆಳಗ್ಗೆ ವಧು ತನ್ನ ಪಿಛೆಕತ್ತಿಯನ್ನು ಬಳಸಿ ಭಾವಿಯ ಹತ್ತಿರ ತೆಂಗಿನಕಾಯಿ ಒಡೆದು ಗಂಗಾಪೂಜೆ ಮಾಡಬೇಕು. ಇಂತಹ ಮಹತ್ವದ ಕತ್ತಿಗಳು ಕಾಣೆಯಾದರೆ ತುಂಬಾ ಅಶುಭ ಅಂತ ಕಾವೇರಿ ಹೆದರಿಬಿಟ್ಟಿದ್ದಾಳೆ. ಅದಾದ ಎರಡು ದಿನಕ್ಕೆ ನಾನು ನಮ್ಮ ತೋಟದಲ್ಲಿ ಹರಿಯುತ್ತಿರುವ ಝುರಿಯ ಬದಿಯಲ್ಲಿ ಕಾಲುಜಾರಿ ಫ್ರಾಕ್ಚರ್ ಮಾಡಿಕೊಂಡೆ. ಈಗ ಓಡಾಡಲಾಗದೇ ಸುಮ್ಮನಿರುವಂತಾಗಿದೆ. ಇಷ್ಟೇ ಸಾಲದು ಅಂತ ನಿನ್ನೆ ರಾತ್ರಿ ಮಲಗಿದ್ದಾಗ ಯಾರೋ ಹೊರಗಿನಿಂದ ಕಿಟಕಿ ತೆರೆಯಲು ಪ್ರಯತ್ನಿಸಿದರು. ಕಾವೇರಿ ಎದ್ದು ಕೂಗಿದ ತಕ್ಷಣ ಓಡಿಹೋದರು. ಒಂದರ ಮೇಲೆ ಒಂದರಂತೆ ಅನಿಷ್ಟಗಳ ಸರಮಾಲೆ. ಏನೂ ತೋಚದೆ ಕೂತಿದ್ದಾಗ ನಿನ್ನ ನೆನಪು ಬಂತು. ಶರಲೇಖ ಸಹಾಯ ಮಾಡಬಹುದೇನೋ ಅಂತ ನಿಮ್ಮನ್ನ ಸಂಪರ್ಕಿಸಿದೆ. ಈಗೇನು ಮಾಡಲಿ?'

'ಮನೆಯಲ್ಲಿ ಇರೋರು ಯಾರು ಹೇಳ್ತೀರಾ?'

'ಕಾವೇರಿ ಮತ್ತು ನನ್ನನ್ನ ಬಿಟ್ಟರೆ ನಮ್ಮ ಮಗಳು ದೇವಕಿ, ಕಾವೇರಿ ತಂಗಿ ಮಗ ಪೂನ್ನಪ್ಪ ಮನೆ ಕೆಲಸಕ್ಕೆ ಅಬ್ಬುಕುಟ್ಟಿ, ಅವನ ಬೀಬಿ ಜುಬೇದಾ . ಅವರ ಮಗ ಜಹೀರ್ ನನ್ನ ಡ್ರೈವರ್. ಇಷ್ಟೇ ಜನ ಇರೋದು.'

'ದೇವಕಿ ಎಲ್ಲಿ?'

'ಬೇಜಾರು ಕಳೆಯುಕ್ಕೆ ಅಂತ ಬೆಂಗಳೂರಿಗೆ ಚಿಕ್ಕಮ್ಮನ ಮನೆಗೆ ಹೋಗಿದ್ದಾಳೆ.'

'ಸರಿ ನಾನು ನನ್ನ ಪತ್ತೇದಾರಿ ಕೆಲಸಾನ ಅಬ್ಬುಕುಟ್ಟಿಯಿಂದ ಶುರು ಮಾಡ್ತೇನೆ. ಅವನನ್ನ ಕರೆಸುಕ್ಕೆ ಆಗುತ್ತೇ?'

'ಅವನು ದೊಡ್ಡಮನೇಲಿ ಇರ್ತಾನೆ. ಪೊನ್ನಪ್ಪ ನಿಮ್ಮನ್ನ ಅಲ್ಲಿಗೆ ಕರೆದೊಯ್ಯಬಲ್ಲ. ಇಲ್ಲಿಂದ ಐದು ಕಿಲೋಮೀಟರ್ ಅಷ್ಟೇ. ಅಂದಹಾಗೆ ನಿಮ್ಮಿಬ್ಬರ ವಸತಿ ಅಲ್ಲೇ ಏರ್ಪಡಿಸಿದ್ದೇನೆ. ಅಲ್ಲಿ

ಹೋಗಿ ವಿರಾಮ ಮಾಡಿ. ಯಾವಾಗ ಬೇಕಾದರೂ ನೀವು ಇಲ್ಲಿಗೆ ಬರಬಹುದು. ಜಹೀರ್‌ಗೆ ಹೇಳಿದರೆ ಸಾಕು.

ಬೆಳ್ಳಿ ಮತ್ತು ಕಾವೇರಮ್ಮನವರಿಗೆ ವಿದಾಯ ಹೇಳಿ ನಾವು ಪೊನ್ನಪ್ಪನೊಡನೆ ದೊಡ್ಡಮನೆಗೆ ಹೊರಟೆವು. ಬೊಪ್ಪೀರ ಮನೆತನದ, ಸುಮಾರು ಇನ್ನೂರು ವರ್ಷಗಳಷ್ಟು ಹಳೆಯ ಮನೆ ಅದು. ತೋಟದ ಮನೆಯ ಎರಡರಷ್ಟಿತ್ತು. ಅದೇ ವಿನ್ಯಾಸ. ನಮಗಾಗಿ ಕೊಠಡಿ ಸಿದ್ಧವಾಗಿತ್ತು. ಹಳೆಯ ಮನೆಯಾದರೂ ಬಾತ್‌ರೂಮಿನಲ್ಲಿ ಆಧುನಿಕ ಪರಿಕರಗಳೇ ಇದ್ದದ್ದು ಒಂದು ತರ ಚೆನ್ನಾಗಿತ್ತು. ಶರಲೇಖ ಅಬ್ಬುಕುಟ್ಟಿಯ ಹತ್ತಿರ ಮಾತನಾಡಲು ಮನೆಯ ಹಿಂದಿದ್ದ ವಸತಿಗೆ ಹೋದ. ನಾನು ಮನೆಯ ಹಜಾರದಲ್ಲಿದ್ದ ಪುಸ್ತಕದ ಬೀರೂವಿನಲ್ಲಿದ್ದ ಹತ್ತೊಂಭತ್ತನೆಯ ಶತಮಾನದ ಪ್ರಾಚೀನ ಗ್ರಂಥಗಳತ್ತ ಗಮನಹರಿಸಿದೆ.

ಸಂಜೆ ಏಳರಹೊತ್ತಿಗೆ ಜಹೀರ್ ಬಂದ.

'ಸಾಬ್, ಶರಲೇಖ ಸಾಬ್ ಬಸ್ಸಿಗೆ ಹೋದ್ರು. ಬೆಳ್ಳಿಯಪ್ಪ ಸಾಬ್ ನಿಮ್ಮನ್ನ ತೋಟದ ಮನೆಗೆ ಕರ್ಕೊಂಡು ಬಾ ಅಂತ ಹೇಳಿದ್ರೆ.' ಅಂದ ಜಹೀರ್. ಬೆಳ್ಳಿಯೊಡನೆ ಆ ಸಂಜೆ ಊಟಕ್ಕೆ ಕೂತಾಗ ಬೆಳ್ಳಿ , 'ಅದೇಕೆ ಶರಲೇಖ ಅಷ್ಟು ಜರೂರಿನಲ್ಲಿ ಹೊರಟು ಬಿಟ್ಟರು? ಊಟಾನೂ ಮಾಡಲಿಲ್ಲ?' ಅಂತ ಕೇಳಿದ. ಪತ್ತೇದಾರಿ ಕೆಲಸದಲ್ಲಿ ಶರಲೇಖನ ವಿಚಿತ್ರ ವಿಧಾನಗಳನ್ನು ಬೆಳ್ಳಿಗೆ ತಿಳಿಸಿ, ಅವನ ಹಲವು ಪ್ರಖ್ಯಾತ ಕೇಸುಗಳನ್ನು ಆ ಆತಂಕದಿಂದ ನಲುಗಿದ್ದ ದಂಪತಿಗಳಿಗೆ ವಿವರಿಸಿ ಅವರ ಮನಸ್ಸನ್ನು ತಿಳಿಗೊಳಿಸುವಷ್ಟರಲ್ಲಿ ಮಲಗುವ ವೇಳೆ ಆಗಿತ್ತು. ಜಹೀರ್ ನನ್ನನ್ನ ದೊಡ್ಡಮನೆಗೆ ಮುಟ್ಟಿಸಿದ.

ಮಾರನೆಯ ಬೆಳಗ್ಗೆ ನನಗೆ ಶರಲೇಖನಿಂದ ಮೊಬೈಲ್ ಕಾಲ್. 'ವತ್ಸನ ವಿಷಯ ತುರ್ತಿನದು. ನಾನು ಹೇಳಿದ್ದನ್ನು ಚಾಚೂ ತಪ್ಪದೇ ಮಾಡಬೇಕು. ತೋಟದ ಮನೆಗೆ ಹೋಗಿ ಹೇಗಾದರೂ ಮಾಡಿ ಬೆಳ್ಳಿ ದಂಪತಿಗಳನ್ನ ದೊಡ್ಡಮನೆಗೆ ಬರುವ ಹಾಗೆ ಮಾಡಬೇಕು. ಮಧ್ಯಾಹ್ನ ಹನ್ನೆರಡರ ಹೊತ್ತಿಗೆ ನಾನು ದೊಡ್ಡಮನೆಗೆ ಬರುತ್ತೇನೆ. ಮಿಕ್ಕ ವಿಷಯ ಎಲ್ಲಾ ನಾನು ಬಂದನಂತರ ಹೇಳುವೆ.'

ನಾನು ತೋಟದ ಮನೆಗೆ ಹೋಗಿ ಶರಲೇಖನ ಮೆಸೇಜ್‌ನ ಬೆಳ್ಳಿಗೆ ತಿಳಿಸಿದೆ. ಪ್ಲಾಸ್ಟರ್ ಕಾಸ್ಟ್ ಇದ್ದ ಬೆಳ್ಳಿಯನ್ನು ದೊಡ್ಡಮನೆಗೆ ಸಾಗಿಸಲು ಪಕ್ಕದ ಎಸ್ಟೇಟಿನಿಂದ ಕ್ವಾಲಿಸ್ ತರಿಸಿದೆವು. ಕ್ವಾಲಿಸ್ ಬಂದು ನಮ್ಮ ಮೆರವಣಿಗೆ ದೊಡ್ಡಮನೆ ಸೇರಿದಾಗ ಹನ್ನೊಂದೂವರೆ. ಎಲ್ಲರೂ ಹಜಾರದಲ್ಲಿ ಕುಳಿತು ಶರಲೇಖನ ಬರವಿಗೆ ಕಾದೆವು.

ಠಾಕೋಠಾಕ್ ಹನ್ನೆರಡು ಘಂಟೆಗೆ ಶರಲೇಖ ಪೊನ್ನಪ್ಪನೊಡನೆ ದೊಡ್ಡಮನೆಗೆ ಬಂದಿಳಿದ. ಪೊನ್ನಪ್ಪನ ಕೈಯಲ್ಲಿ ಒಂದು ದೊಡ್ಡ ಪ್ಯಾಕೆಟ್ ಪೊನ್ನಪ್ಪ ಏನೂ ಮಾತನಾಡದೇ ಪ್ಯಾಕೆಟ್ಟನ್ನು ನಮ್ಮ ಮುಂದಿನ ಮೇಜಿನ ಮೇಲಿಟ್ಟು ಅದನ್ನು ಬಿಚ್ಚಿದ. ಅದರಲ್ಲಿದ್ದ ಎರಡು ಕತ್ತಿಗಳು ಥಳಥಳನೆ ಹೊಳೆಯುತ್ತಿದ್ದವು. ಒಂದು ಕತ್ತಿ ಸುಮಾರು ಮೂರು ಅಡಿ ಉದ್ದವಿದ್ದರೆ, ಇನ್ನೊಂದು ಸುಮಾರು ಒಭತ್ತು ಇಂಚಿನಷ್ಟಿತ್ತು. ಕಾವೇರಮ್ಮ ಎಲ್ಲ ಸಂಕೋಚ ಬಿಟ್ಟು

ಆನಂದದಿಂದ ಕುಣಿದಾಡಿ ಪೊನ್ನಪ್ಪನನ್ನು ಅಪ್ಪಿಕೊಂಡು ಮುತ್ತಿಟ್ಟರು. ಬೆಳ್ಳಿ ಸಂತೋಷದಿಂದ ಕಣ್ಣೀರು ಸುರಿಸಿದ್ದ.

ಶರಲೇಖ 'ಬೆಳ್ಳಿ ಅವರೇ, ನಿಮ್ಮ ಮನೆತನದ ಕತ್ತಿಗಳು ನಿಮಗೆ ಹಿಂತಿರುಗಿ ಬಂದಿವೆ. ಇದನ್ನ ಹಿಂದಕ್ಕೆ ಪಡೆಯುವ ಕೆಲಸದಲ್ಲಿ ಪೊನ್ನಪ್ಪ ನನಗೆ ನೀಡಿದ ಸಹಾಯ ತುಂಬಾ ಅಮೂಲ್ಯವಾದದ್ದು. ಚೆಟ್ಟೀರ ಕುಟುಂಬದೊಡನೆ ಸಂಬಂಧ ಬೆಳೆಸುವ ಪ್ರಸ್ತಾಪದ ಸನಿಹದಲ್ಲೇ ಆ ಪವಿತ್ರ ಕತ್ತಿಗಳು ಕಾಣೆಯಾಗಿದ್ದು, ಈಗ ಪೊನ್ನಪ್ಪನ ದಿಟ್ಟತನದಿಂದ ಅವು ನಿಮಗೆ ಮರಳಿ ಬಂದದ್ದು ಇದನ್ನೆಲ್ಲಾ ನೋಡಿದರೆ ದೇವಕಿಯನ್ನು ಆ ಕುಟುಂಬಕ್ಕೆ ಕೊಟ್ಟರೆ ಅವಳು ನೆಮ್ಮದಿಯಿಂದಿರುವಳೇ ಎಂಬುದನ್ನು ನೀವುಗಳು ಯೋಚಿಸಿರಿ' ಎಂದ.

ಬೆಳ್ಳಿ 'ಶರಲೇಖ ಅವರೇ ನಿಮ್ಮನ್ನ ಎಷ್ಟು ವಂದಿಸಿದರೂ ಸಾಲದು. ಅದು ಹೇಗೆ ಇಂತಹ ನಿಗೂಢ ಸಮಸ್ಯೆಯನ್ನ ಇಷ್ಟು ಸುಲಭವಾಗಿ ಬಗೆಹರಿಸಿದರೋ ನನಗಂತೂ ಅರ್ಥವಾಗದು. ಇರಲಿ. ನನಗೇನೂ ವಿವರಗಳು ಬೇಡ. ಪವಿತ್ರ ಕತ್ತಿಗಳು ಮನೆಗೆ ಹಿಂತಿರುಗಿದವಲ್ಲ, ಅಷ್ಟೇ ಸಾಕು. ಹೇಗೂ ಇಷ್ಟು ದೂರ ಬಂದಿದ್ದೀರ. ಒಂದೆರಡು ದಿನ ಇಲ್ಲಿದ್ದು ನಮ್ಮ ಆತಿಥ್ಯ ಸ್ವೀಕರಿಸಿ ಹಿಂತಿರುಗಬಾರದೇ' ಎಂದು ಆಗ್ರಹಪೂರ್ವಕವಾಗಿ ಹೇಳಿದ. ಕೆಲಸ ಮುಗಿದ ನಂತರ ಶರಲೇಖ ಎಂದಾದರೂ ಕಾಲಹರಣ ಮಾಡುವುದುಂಟೇ. ಬೆಳ್ಳಿ ದಂಪತಿಗಳಿಗೆ ವಿದಾಯ ಹೇಳಿ ನಾವು ಬೆಂಗಳೂರು ವಾಲ್ವೋ ಹತ್ತಿದೆವು.

ದಾರಿಯಲ್ಲಿ ಶರಲೇಖ ತನ್ನ ಪತ್ತೇದಾರಿಕೆಯ ವಿವರಗಳನ್ನ ನನ್ನ ಮುಂದಿಟ್ಟ.

'ಪತ್ತನ ಇಂತಹ ಸಂಸಾರಗಳಲ್ಲಿ ಮುಖ್ಯ ಮಾಹಿತಿ ಸಿಗಬೇಕಾದರೆ ಮನೆಯ ಕೆಲಸದವರ ಹತ್ತಿರ. ಅದಕ್ಕೆ ನಾನು ದೊಡ್ಡಮನೆಗೆ ಹೋದತಕ್ಷಣ ಅಬ್ಬುಕುಟ್ಟಿಯನ್ನ ಹುಡುಕಿಕೊಂಡು ಹೋದದ್ದು. ಅವನಿಂದ ತಿಳಿದದ್ದು ಇಷ್ಟು. ಬೆಳ್ಳಿ ದಂಪತಿಗಳು ತಮ್ಮ ಮಗಳೊಂದಿಗೆ ದೊಡ್ಡಮನೆಯಲ್ಲಿ ವಾಸವಾಗಿರುವರಂತೆ. ಪೊನ್ನಪ್ಪ ತೋಟದಮನೆಯಲ್ಲಿ ಇದ್ದುಕೊಂಡು ತೋಟದ ಕೆಲಸವನ್ನೆಲ್ಲಾ ನೋಡಿಕೊಂಡಿದ್ದಾನಂತೆ. ಮನೆ ಮಗಳು ದೇವಕಿಗೆ ಪೊನ್ನಪ್ಪನೊಡನೆ ಬಹಳ ಸಲುಗೆ. ಎಷ್ಟಾದರೂ ಚಿಕ್ಕಂದಿನ ಸ್ನೇಹ ಅಲ್ಲವೇ. ಈ ಮದುವೆ ನಿಶ್ಚಯ ಆದ ಮಾರನೆಯ ದಿನವೇ ಕತ್ತಿಗಳು ಕಾಣೆಯಾಗಿದ್ದು ಅಂತ ಬೆಳ್ಳಿ ಹೇಳಿದಾಗ ಈ ಮದುವೆಗೆ ವಿಘ್ನ ಬಂದರೆ ಯಾರಿಗೆ ಅನುಕೂಲ ಅಂತ ಯೋಚಿಸಿದೆ. ಪೊನ್ನಪ್ಪ ಮೊದಲ ಸಸ್ಪೆಕ್ಟ್. ಬೇರೇ ಯಾರಾದರೂ ಕದ್ದಿದ್ದರೆ ಕತ್ತಿಗಳೊಂದಿಗೆ ಇನ್ನೇನಾದರೂ ಅಮೂಲ್ಯವಾದ ವಸ್ತುಗಳು ಕಳುವಾಗಿರಬೇಕಾಗಿತ್ತು. ಆಮೇಲೆ ತೋಟದಲ್ಲಿ ಕಾಲು ಮುರಿದುಕೊಂಡು, ಬೆಳ್ಳಿಯಪ್ಪ ದೊಡ್ಡಮನೆಯ ಮಹಡಿ ಏರಲಾಗದೇ ತೋಟದ ಮನೆಯ ಪೊನ್ನಪ್ಪನ ಕೊಠಡಿಯಲ್ಲೇ ಬಿಡಾರ ಹೂಡಿದ್ದು ನನಗೆ ತಿಳಿದಿದೆ. ನಾವು ಬರುವ ಹಿಂದಿನ ರಾತ್ರಿ ಯಾರೋ ಆ ಕೋಣೆಯನ್ನು ಪ್ರವೇಶಿಸಲು ಪ್ರಯತ್ನಿಸಿದರೆಂದು ತಿಳಿದಾಗ, ಪೊನ್ನಪ್ಪನೇ ಯಾಕೆ ಆ ಪ್ರಯತ್ನ ಮಾಡಿರಬಾರದು ಅನ್ನಿಸಿತು. ಅಷ್ಟು ದೊಡ್ಡ ನಾಯಿ ಕಾವಲಿರುವಾಗ ಯಾರಾದರೂ ಅಪರಿಚಿತರು ಬಂದರೆ ಬೊಗಳದಿರುತ್ತದೆಯೇ. ಆದರೆ ತನ್ನ ಯಜಮಾನನೇ ಕಿಟಕಿ ಹತ್ತಿದರೆ ನಾಯಿ ಏಕೆ ಬೊಗಳೀತು. ನಿಧಾನವಾಗಿ ಒಂದು ಚಿತ್ರ ಮೂಡತೊಡಗಿತು. ಪೊನ್ನಪ್ಪ

ಮದುವೆ ತಪ್ಪಿಸಲು ಕತ್ತಿಗಳನ್ನು ಕದ್ದು, ತನ್ನ ಕೊಠಡಿಯಲ್ಲೇ ಬಚಿಟ್ಟಿರಬೇಕು. ನಾವು ಬರುವ ಸುದ್ದಿ ತಿಳಿದು, ಹೇಗಾದರೂ ಮಾಡಿ ಆ ಕತ್ತಿಗಳನ್ನು ಅಲ್ಲಿಂದ ತೆಗೆದು ಬೇರೆಲ್ಲಾದರೂ ಇಡಲು ಪ್ರಯತ್ನಿಸಿರಬೇಕು. ತನ್ನ ಪ್ರಯತ್ನ ವಿಫಲವಾದಾಗ ಆತ ಹೆದರಿ ಕಂಗಾಲಾಗಿದ್ದ. ಇದನ್ನೆಲ್ಲಾ ಯೋಚಿಸಿ ಅವನನ್ನ ಕನ್‌ಫ್ರಾಂಟ್ ಮಾಡಿದೆ. ಅವನಿಗೆ ಪೋಲೀಸರಿಗಿಂತ ತನ್ನ ಕುಟುಂಬದ ಹೆದರಿಕೆ ಹೆಚ್ಚಾಗಿದ್ದಂತೆ ತೋರಿತು. ಎಲ್ಲವನ್ನೂ ಒಪ್ಪಿಕೊಂಡುಬಿಟ್ಟ. ಕುಶಾಲನಗರಕ್ಕೆ ನನ್ನನ್ನ ಕರೆದೊಯ್ಯಲು ಅವನೇ ಮುಂದಾದ. ಮೇದಪ್ಪ ಅವನಿಗೆ ಪರಿಚಯವಂತೆ. ಕುಟುಂಬದ ಒತ್ತಡಕ್ಕೆ ಹೆದರಿ ಅವನು ಮದುವೆಗೆ ಒಪ್ಪಿದ್ದು ಪೊನ್ನಪ್ಪನಿಗೆ ತಿಳಿದಿತ್ತು. ಈ ಕತ್ತಿಯ ಪ್ರಸಂಗ ಉಪಯೋಗಿಸಿ ನನ್ನ ಸಹಾಯದಿಂದ ಅವರಿಬ್ಬರೂ ತಮ್ಮ ಆಸೆಗಳನ್ನು ಈಡೇರಿಸಿಕೊಳ್ಳುವ ಇಚ್ಛೆ ತಿಳಿಸಿದರು. ಪೊನ್ನಪ್ಪ, ದೇವಕಿಗೂ ಫೋನ್ ಮಾಡಿ ನನಗೆ ಮಾತನಾಡಲು ಕೊಟ್ಟ. ಮದುವೆ ತಪ್ಪುವ ಸುದ್ದಿ ಕೇಳಿ ಆ ತರುಣಿ ಸಂತಸದಿಂದ ಜಿಗಿದಾಡಿದಳು. ಇಂತಹ ವಿಷಯಗಳಲ್ಲಿ ಕುಟುಂಬದ ಒತ್ತಾಯಕ್ಕೆ ಮಣಿದರೆ ಜೀವನ ಪರ್ಯಂತ ವ್ಯಥೆ ಅಂತ ಆ ಹುಡುಗಿಗೆ ಬುದ್ಧಿ ಹೇಳಿದೆ. ಕತ್ತಿಗಳನ್ನ ಕೊಠಡಿಯಿಂದ ಹೊರತರುವ ಬಗೆ ಹೇಗೆ ಅಂತ ಪೊನ್ನಪ್ಪ ಆತಂಕಪಟ್ಟುಕೊಂಡ. ಅದಕ್ಕೇ ನಾನು ಬೆಳ್ಳಿಯನ್ನು ಆ ಜಾಗದಿಂದ ಬದಲಿಸುವಂತೆ ಹೇಳಿದ್ದು. ದೇವಕಿ ಊರಿಗೆ ಬಂದನಂತರ ತನ್ನ ತಾಯಿತಂದೆಯರಿಗೆ ತಾನು ಪೊನ್ನಪ್ಪನನ್ನು ಪ್ರೇಮಿಸಿರುವುದಾಗಿ ಹೇಳುತ್ತೇನೆ ಅಂತ ಹೇಳಿದ್ದಾಳೆ. ಬೆಳ್ಳಿ ಹೇಗೆ? ಮಗಳಿಗೆ ಒಪ್ಪಿಗೆ ಕೊಡ್ತಾನೋ ಅಥವಾ ಮನೆತನದ ಮರ್ಯಾದೆ ಅಂತೆಲ್ಲಾ ಹಠ ಹಿಡೀತಾನೋ' ಅತ ಶರಲೇಖ ಪ್ರಶ್ನಿಸಿದ.

'ಅವನದ್ದು ಹೆಂಗರುಳು. ಮಗಳು ಅಂದ್ರೆ ಪ್ರಾಣ. ಖಂಡಿತ ಅವಳ ಸಂತೋಷಕ್ಕೆ ಅಡ್ಡಿ ಬರೋಲ್ಲ' ಅಂದೆ.

❖

ಮದುವೆಯಾಗಿ ಸಂಸಾರ ಷುರು ಮಾಡೋ ಮೊದಲು ಹೆಂಡತಿ ಗಂಡನಿಗೆ

"ನೋಡಿ ಸರಿಯಾಗಿ ಒಂದನೇ ತಾರೀಖು ಸಂಬಳ ತಂದು ನನ್ನ ಕೈಗೆ ಕೊಟ್ಟುಬಿಡಬೇಕು"

ಅಂದು ತಕ್ಷಣ "ಸಾರಿ, ಒಂದನೇ ತಾರೀಖು ಮಾತ್ರವಲ್ಲ, ದಿನಾ ನನ್ನ ಕೈಗೆ ದುಡ್ಡು ತಂದು ಕೊಡಬೇಕು, ಯಾಕೇಂದ್ರೆ ನೀವು ಸರ್ಕಾರೀ ನೌಕರರಲ್ವ" ಅಂದಳು

– ಬೇಲೂರು ರಾಮಮೂರ್ತಿ

ನಾಯಿಗಳಿವೆ ಎಚ್ಚರಿಕೆ!

- ಅಣ್ಣಾಸ್ವಾಮಿ ಮೊದಲಿಯಾರ್

ನಾಯಿಗಳಿವೆ ಎಚ್ಚರಿಕೆ! Beware of Dogs! Beware Dogs are alert! ಮೊದಲಾದ ನಾಮ ಫಲಕಗಳು ಮನೆ ಮುಂದಿರುವ ಗೇಟಿನ ಬಳಿ ಹಾಕಿರುವುದು ನೋಡಬಹುದು. ಇದು ಒಂದು ರೀತಿಯಲ್ಲಿ ದೊಡ್ಡಸ್ತಿಕೆಯ ಸಂಕೇತ! ಶ್ರೀಮಂತಿಕೆಯ ಪ್ರದರ್ಶನ! ಆದರೆ ಈ ಎಚ್ಚರಿಕೆ ಯಾರಿಗೆ? ಮನೆಗೆ ಆಗಮಿಸುವ ಆಗುಂತಕರಿಗೋ ಅಥವಾ ಕಳ್ಳರು - ದರೋಡೆಕೋರರಿಗೋ?

ನಾಯಿಗಳ ಮಾತು ಬಂದಾಗ, ಆಸ್ಕರ್ ಅವಾರ್ಡ್ ಪಡೆದ ಚಲನಚಿತ್ರ "ಸ್ಲಮ್ ಡಾಗ್ ಮಿಲಿಯನೇರ್" ನೆನಪಾಗಲೇಬೇಕು. ನಾಯಿಯ ಹೆಸರು ಆಸ್ಕರ್‌ವರೆಗೆ ಹೋಗಿದೆ. 'ನಾಯಿಗಳಿವೆ ಎಚ್ಚರಿಕೆ!' ಎಂದ ಹಾಗೆ ಇತರೆ ಪ್ರತಿಸ್ಪರ್ಧಿಗಳು ಈ ನಾಯಿಗಳಿಗೆ ಹೆದರಿ ಓಡಿ ಹೋಗಿರಬೇಕು. ಬ್ರಿಟಿಷರು ಭಾರತೀಯರನ್ನು ತಮ್ಮಾಳ್ವಿಕೆಯ ಕಾಲದಲ್ಲಿ 'ಡಾಗ್ಸ್' ಎನ್ನುತ್ತಿದ್ದರಂತೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದ ನಂತರವೂ ಕೊಳೆಗೇರಿ ಮಕ್ಕಳನ್ನು 'ಡಾಗ್ಸ್' ಎಂದು ಕರೆದಿರುವುದು ಕೆಲವು ಸ್ವಾಭಿಮಾನಿ ಭಾರತೀಯರನ್ನು ಕೆರಳಿಸಿದೆ. ನಿಕೋಲಾಸ್ ಆಲ್‌ಮಿದಾ ಎಂಬ ಸಮಾಜ ಸೇವಕ, ಚಲನಚಿತ್ರದ ನಿರ್ದೇಶಕ ಡ್ಯಾನಿ ಬಾಯ್ಲ್ ಮತ್ತು ನಿರ್ಮಾಪಕ ಕ್ರಿಶ್ಚಿಯನ್ ಕಾಲ್ಸಿನ್ ವಿರುದ್ಧ ಮುಂಬೈ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದಾನೆ. ಅಷ್ಟಕ್ಕೇ ಬಿಡದೆ, ನಿರ್ಮಾಪಕ, ನಿರ್ದೇಶಕರನ್ನು 'ನೀವು ಬೀದಿನಾಯಿಗಳು!... ಸ್ಟ್ರೀಟ್ ಡಾಗ್ಸ್!' ಎಂದು ಕರೆದಿದ್ದಾನೆ. 'ನೀನು ಬೀದಿನಾಯಿ!... ನೀನು ಕೊಳಗೇರಿ ನಾಯಿ!' ಎಂದು ಒಬ್ಬರಿಗೊಬ್ಬರು ಗುರುಗುಟ್ಟುತ್ತಾ ಬೊಗಳುತ್ತಿದ್ದಾರಂತೆ. ಇವರ ಬೊಗಳಾಟವನ್ನು ನೋಡಿ ನಾಯಿಗಳು ಖುಷಿಯಾಗಿ ಮಜಾ ತೆಗೆದುಕೊಳ್ಳುತ್ತಿವೆಯಂತೆ!

ಹಿಂದೆ ನಾಯಿಗಳು ಕಳ್ಳ-ಖದೀಮರನ್ನು ನೋಡಿದಾಗ ಮಾತ್ರ ಬೊಗಳುತ್ತಿತ್ತು. ಅಟ್ಟಿಸಿಕೊಂಡು ಹೋಗಿ ಕಚ್ಚುತ್ತಿದ್ದವು. ಈಗ ಸುಮ್ಮನೆ ಬೀದೀಲಿ ಹೋಗುವವರನ್ನು ಕಚ್ಚುತ್ತಿವೆ. ಕಾರಣವೇನಿರಬಹುದು? ಒಂದು ವೇಳೆ ಹಿಂದಿನ ಕಾಲದಲ್ಲಿ ಅತಿ ಕಡಿಮೆ ಮಂದಿ ಕಳ್ಳ-ಖದೀಮರು - ಮೋಸಗಾರರು ಇರುತ್ತಿದ್ದರು ಅವರನ್ನು ಬೇಗ ನಾಯಿಗಳು ಗುರುತಿಸುತ್ತಿದ್ದವು. ಈಗ ಅವುಗಳ ಕಣ್ಣಿಗೆ ಎಲ್ಲರೂ ಕೆಟ್ಟವರ ಹಾಗೆ ಕಾಣಿಸುತ್ತಿರಬೇಕು! ಅದಕ್ಕೇ, ರೋಷದಿಂದ ಎಲ್ಲರ ಮೇಲೂ ಆಕ್ರಮಣ ಮಾಡುತ್ತಿರಬೇಕು! ಅದೆಲ್ಲಾ ಸರಿ, ಸ್ವಾಮಿ ಮಕ್ಕಳನ್ನು ಕಚ್ಚುವುದು - ತೀವ್ರವಾಗಿ ಘಾಸಿಗೊಳಿಸುವುದು ಯಾಕೆ ಸ್ವಾಮಿ?! ಅಂತಿದ್ದೀರಾ? ಸ್ವಲ್ಪ ತಾಳಿ! ಡಿ.ಎನ್.ಎ. ಟೆಸ್ಟ್ ಮಾಡಿದಾಗ ಹಾಗೆ ಆ ಮಕ್ಕಳು ಭವಿಷ್ಯದಲ್ಲಿ ಏನಾಗುತ್ತಾರೆಂದು ಅದರ ದೃಷ್ಟಿಗೆ ಕಂಡಿತೋ ದೇವರೇ ಬಲ್ಲ. ಏನೇ ಆದರೂ ಮಕ್ಕಳನ್ನು ಕಚ್ಚುವುದು ತೀರ ಒಪ್ಪಲಾಗದ ಮಾತು. ಎಂಥವರ ಮನಸ್ಸೂ ಕರಗುತ್ತದೆ. ನಾಯಿಗಳನ್ನು ನೋಡಿದಾಗ ಕಲ್ಲು ಹೊಡೆದು ಕೊಲ್ಲೋಣ ಅನ್ನುವಷ್ಟು ಕೋಪ ಬರುತ್ತೆ. ಆದರೆ, ಪ್ರಾಣಿ

ಹಿಂಸೆ ಮಹಾಪಾಪ ಅಂತ ಬುದ್ಧ, ವರ್ಧಮಾನ, ಯೇಸು, ಗಾಂಧಿ, ಮನೇಕಾಗಾಂಧಿ ಎಲ್ಲ ಹೇಳಿದ್ದಾರೆ. ಏನು ಮಾಡೋದು ನಾಯಿಗೆ ಅವರ ಮಾತುಗಳು ಅರ್ಥವಾಗೋದಿಲ್ಲವೇ? ಸರ್ಕಾರಕ್ಕೆ ಕೋಪ ಬಂದು ಕೇರಳದಿಂದ ಜನ ಕರೆಸಿ ನಾಯಿಗಳನ್ನು ಹಿಡಿಸಿ ಹೊರ ದಬ್ಬಿದ್ದಾರೆ. ಅವುಗಳನ್ನು ಕೊಂದಿದ್ದಾರೆಂದು ಕೆಲವರು ಬೊಬ್ಬೆ ಹಾಕಿದ್ದಾರೆ. ನಿಜವೋ ಸುಳ್ಳೋ ದೇವರೇ ಬಲ್ಲ! ಕೆಲವು ಸಮಾಜ ಸೇವಕರಿಗೆ ಬೀದಿ ನಾಯಿಗಳನ್ನು ಸಾಕಲು ನಗರ ಸಭೆಯವರು ಪ್ರತಿ ತಿಂಗಳು ಹಣ ಕೊಡ್ತಾರೆಂದು ಹೇಳ್ತಾರೆ. ಇದು ದ್ವಂದ್ವ ನೀತಿಯಾಗೋಲ್ವೇ? ಕೆಲವು ಬೀದಿ ನಾಯಿಗಳು ನಾಯಿ ಹಿಡಿವ ವ್ಯಾನ್ ಕಂಡ ಕೂಡಲೇ ಓಡಿ ಹೋಗಿ ಡ್ರೈನೇಜ್ ಕಲ್ಲು ಹಾಸಿನ ಕೆಳಗೆ ಸೇರಿಕೊಂಡು ಅವರ ಕಣ್ಣಿಗೆ ಕಾಣದೆ ಬಚಾವ್ ಆಗುತ್ತವೆ! ಅವುಗಳಿಗೂ ಮನುಷ್ಯರಂತೆ ಯೋಚನಾ ಶಕ್ತಿ ಬಂದಿದೆ ಎಂದಾಯಿತಲ್ಲವೇ? ಕಲಿಯುಗ ಸ್ವಾಮಿ ಕಲಿಯುಗ!

ನನಗಂತೂ ನಾಯಿಗಳೆಂದರೆ ಅಲರ್ಜಿ, ಹೆದರಿಕೆ. ಅವುಗಳು ಹತ್ತಿರ ಬಂದರೆ ಮೈಲಿದೂರ ಓಡಿ ಹೋಗ್ತೀನಿ. ನಾಯಿ ಕಟ್ಟಿರುವವರ ಮನೆಗೆ ಹೋಗುವುದನ್ನು ತಪ್ಪಿಸಿಕೊಳ್ತೇನೆ. ನನ್ನ ಮಾತಿರಲಿ, ನನ್ನ ಗೆಳೆಯ ಚಿಂತಾಮಣಿ ಇನ್ನೂ ಹೆಚ್ಚು ಅಂಜುಬುರುಕ, ನಾಯಿ ಹತ್ತಿರ ಬಂದರೆ ನಾಲ್ಕು ದಿನ ಜ್ವರ ಬರತ್ತೆ! ಕಾಲೇಜು ಬಿಟ್ಟ ಮೇಲೆ ನನಗೂ ಅವನಿಗೂ ಭೇಟಿಯಾಗಲೇ ಇಲ್ಲ, ಮೊನ್ನೆ ಇದ್ದಕ್ಕಿದ್ದ ಹಾಗೆ ನಮ್ಮ ಬಡಾವಣೆಯಲ್ಲಿ ಭೇಟಿಯಾಗಿ ಮಾತನಾಡಿಸಿದ. ಅದೂ ಆಕಸ್ಮಿಕವಾಗಿ! ಈಗ ನಿವೃತ್ತನಾಗಿ ನಮ್ಮ ಬಡಾವಣೆಯಲ್ಲಿ ಮನೆ ಕಟ್ಟಿಸಿಕೊಂಡು ವಾಸಕ್ಕೆ ಬಂದಿದ್ದ. ವಿಳಾಸ ಹೇಳಿ 'ಮನೆಗೆ ಬಾ!' ಎಂದ. ಒಂದು ದಿನ ಬಿಡುವು ಮಾಡಿಕೊಂಡು ಅವನ ಮನೆಗೆ ಹೋದೆ. ದೊಡ್ಡ ಬಂಗಲೆ, ಮನೆ ಮುಂದೆ ಸ್ಯಾಂಟ್ರೋಕಾರು, ಹೋಂಡಾಸಿಟಿ ಕಾರು ನಿಂತಿದ್ದವು. ಆದರದಿಂದ ಬರಮಾಡಿಕೊಂಡ. ಇಂಡೋರ್ ಡೆಕೋರೇಷನ್‌ಗೆ ಪದ್ಮಶ್ರೀ ಪ್ರಶಸ್ತಿ ಕೊಟ್ಟರೆ ಇವನ ಮನೆಗೆ ಬರುತ್ತಿತ್ತು. ಇವೆಲ್ಲಕ್ಕಿಂತ ಆಶ್ಚರ್ಯವೆಂದರೆ ಮನೆ ಅಂಗಳದಲ್ಲಿ ಬೀದಿಗೆ ಕಾಣಿಸುವಂತೆ ದೊಡ್ಡ ಅಲ್ಸೇಷಿಯನ್ ನಾಯಿ ನಿಂತಿತ್ತು. ಅದರ ಕೆಂಪು ಕಣ್ಣುಗಳು, ತೆರೆದ ನಾಲಗೆ, ಮೈ ನಡುಗಿಸಿತು ಅದು. ನನ್ನನ್ನು ನೋಡಿ ಬೊಗಳಲಿಲ್ಲ, ಬಿರಿದ ಕಣ್ಣುಗಳಿಂದ ನೋಡುತ್ತಾ ನಿಂತಿತ್ತು. ನಾನು ಹೆದರುತ್ತಲೇ ಚಿಂತಾಮಣಿ ಕಡೆ ನೋಡಿದೆ. ಅವನು ಜೋರಾಗಿ ನಗ ತೊಡಗಿದ. ನಾನು ಪೆದ್ದನಂತೆ ಅವನನ್ನು ನೋಡಿದೆ. "ಇದು ನಿಜವಾದ ನಾಯಿ ಅಂದುಕೊಂಡೆಯಾ? ಅಲ್ಲ ಕಣೋ. ಇದು ಡಾಲ್ - ಬೀಜಿಂಗ್‌ನಿಂದ ತಂದದ್ದು. ಈ ಏರಿಯಾದಲ್ಲಿ ಕಳ್ಳತನ ಜಾಸ್ತಿ. ನನಗೋ ನಾಯಿ ಕಂಡರೆ ಆಗುವುದಿಲ್ಲ, ನಿನಗೆ ತಿಳಿದೇ ಇದೆ. ಅದಕ್ಕೆ ಈ ಉಪಾಯ ಮಾಡಿದೆ. ರಾತ್ರಿ ಹೊತ್ತು ಗೇಟಿಗೆ ಕಾಣುವ ಹಾಗೆ ಅಂಗಳದಲ್ಲಿ ಇಡ್ತೀನಿ. ಇದನ್ನು ನೋಡಿ ಯಾವ ಕಳ್ಳನೂ ಬರೋಲ್ಲ" ಎಂದ ಜಂಬದಿಂದ. ಅಲ್ಲೊಂದು ಷೋಕೇಸ್ ಇತ್ತು. ಅದರ ತುಂಬ ಅಲಂಕಾರಿಕ ವಸ್ತುಗಳಿದ್ದವು. ಅವುಗಳನ್ನು ನನಗೆ ವಿವರಿಸುತ್ತಾ ಇದು ಟೋಕಿಯೋಯಿಂದ ತಂದ ಪಿಂಗಾಣಿ ಕಪ್ಪುಗಳು, ಇದು ಜರ್ಮನಿಯಿಂದ ತಂದ ಪೈಂಟಿಂಗ್, ಇದು ಸಿಂಗಪೂರ್‌ನಿಂದ ತಂದದ್ದು, ಮಲೇಷಿಯಾ, ಥಾಯ್ಲೆಂಡ್ ಪ್ಯಾರಿಸ್, ಲಂಡನ್, ಲೀಡ್ಸ್ ಅಮೆರಿಕಾ ಹೀಗೆ ಎಕ್ಸಿಬಿಷನ್ ತರಹ ಏನೇನೋ

ತೋರಿಸಿದ. ಸಿಟ್ ಔಟ್‌ನ ಒಂದು ಗೋಡೆ ದಪ್ಪನೆಯ ಗಾಜಿನಿಂದ ಮಾಡಿದ್ದರು. ಇದು ಇನ್‌ಡೋರ್ ಸ್ವಿಮ್ಮಿಂಗ್ ಪೂಲ್, ಈ ಗೋಡೆಯ ಆ ಕಡೆ ಸ್ವಿಮ್ಮಿಂಗ್ ಪೂಲ್ ಇದೆ. ಆ ಕಡೆಯವರಿಗೆ ನಾವು ಕಾಣುತ್ತೇವೆ, ನಮಗೆ ಅಲ್ಲಿರುವವರು ಕಾಣೋದಿಲ್ಲ'' ಅಂದ. ನೆಲಕ್ಕೆ ಹಾಸಿದ್ದ ರತ್ನಗಂಬಳಿ ತೋರಿಸಿ, ಇದು ಅಫ್ಘಾನಿಸ್ತಾನದಿಂದ ತಂದದ್ದು ಎಂದ ಜಂಬದಿಂದ. ಮೇಲೆ ಕೈ ತೋರಿಸಿ ಈ ಷಾಂಡಲೀರ್ ಬೆಲ್ಜಿಯಂನಿಂದ ತಂದದ್ದು ಎಂದ. ''ಇದೇನು ಮೊಘಲ್-ಏ-ಆಜಂ ಸಿನಿಮಾ ಸೆಟ್ಟಿಂಗಾ? ಅಥವಾ ಏನಾದರೂ ಸ್ಮಗಲ್ ಮಾಡ್ತೀಯಾ?'' ಎಂದು ಕೇಳಬೇಕೆನಿಸಿತು; ಆದರೆ ಧೈರ್ಯ ಬರಲಿಲ್ಲ.

ಈ ಪ್ರಕರಣವಾಗಿ ಬಹಳ ದಿನಗಳವರೆಗೆ ನಾನು ಅವನ ಮನೆಗೆ ಹೋಗಲಾಗಲಿಲ್ಲ, ಬಿಡುವೇ ಆಗಲಿಲ್ಲ. ಒಂದು ದಿನ ಬಿಡುವು ಮಾಡಿಕೊಂಡು ಅವನ ಮನೆಗೆ ಹೋದೆ. ಅಲ್ಲಿ ಆಶ್ಚರ್ಯ ಕಾದಿತ್ತು. ಗೇಟಿನ ಬಳಿ ಬೀಜಿಂಗ್‌ನಿಂದ ತಂದ ನಾಯಿ ಬೊಂಬೆ ಇರಲಿಲ್ಲ. ಬೆಲ್ ಮಾಡಿದೆ. ಪ್ಯಾಪ್‌ಮೋರೆ ಚಿಂತಾಮಣಿ ಬಾಗಿಲು ತೆಗೆದು ಸಪ್ಪೆ ಧ್ವನಿಯಲ್ಲಿ 'ಒಳಗೆ ಬಾ!' ಎಂದು ಹೇಳಿ ಹೋದ. ಮೌನವಾಗಿ ಒಳಗೆ ಹೋದೆ. ರತ್ನಗಂಬಳಿ ಮಾಯ! ಷಾಂಡಲೀರ್ ಮಾಯ! ಷೋಕೇಸ್ ಖಾಲಿ ಖಾಲಿ!! ಇದೇನಿದು ಘಜ್ನಿ ಮಹಮದ್ ಸೋಮನಾಥ ದೇವಾಲಯ ಲೂಟಿ ಮಾಡಿದ ಹಾಗೆ, ಬಹುಮನಿ ಸುಲ್ತಾನರು ವಿಜಯಗರದ ಹಂಪಿಯನ್ನು ಹಾಳ್ಗೆಡವಿದ ಹಾಗೆ, ಮನೆ ಬಿಕೋ ಎನ್ನುತ್ತಿತ್ತು. ಎಲ್ಲೆಲ್ಲೂ ಶೂನ್ಯ.

''ಇದೇನಯ್ಯ ಇದು?'' ಎಂದೆ. ಅವನು ಗೊಳೋ ಎಂದು ಅಳುತ್ತಾ ಹೇಳಿದ. ಬೀಜಿಂಗ್ ನಾಯಿ ನೋಡಿ ಯಾವ ಕಳ್ಳನೂ ಬರುವುದಿಲ್ಲ ಅನ್ನುವ ಧೈರ್ಯದಲ್ಲಿ ಮನೆಯ ಮಂದಿಯೆಲ್ಲಾ ಹದಿನೈದು ದಿನ ಪ್ರವಾಸ ಹೋಗಿದ್ದಾರೆ. ಕಳ್ಳರ ಗ್ಯಾಂಗೊಂದು ಬೀಗ ಹಾಕಿದ ಇವನ ಮನೆ ಮುಂದೆ ಓಡಾಡಿದ್ದಾರೆ ಗೇಟಿನ ಬಳಿ ನಾಯಿ ನೋಡಿ ಓಡಿಹೋಗಿದ್ದಾರೆ - ಮಾರನೆ ದಿನ ಬಂದಾಗಲೂ ನಾಯಿ ಅಲ್ಲಿಯೇ ಹಾಗೇ ಇದೆ! ಅನುಮಾನವಾಗಿ ಅದರ ಮುಂದೆ ತಿಂಡಿ ಹಾಕಿದ್ದಾರೆ, ಅದು ತಿನ್ನಲಿಲ್ಲ, ಬೊಗಳಲಿಲ್ಲ, ಕದಲಲಿಲ್ಲ. ಏನೋ ಸರಿಯಿಲ್ಲವೆಂದು ನಾಯಿ ಹತ್ತಿರ ಬಂದಿದ್ದಾರೆ ಬಿರುಗಣ್‌ಬಿಟ್ಟು ನೋಡುತ್ತಾ ಹಾಗೇ ನಿಂತಿದೆ. ಕಳ್ಳರಿಗೆ ನಿಜಾಂಶ ಗೊತ್ತಾಯಿತು. ಅರ್ಧ ರಾತ್ರೀಲಿ ಬಂದು ಮನೆ ಲೂಟಿ ಮಾಡಿದ್ದಾರೆ ಹೋಗುವಾಗ ನಾಯಿಯನ್ನು ತೆಗೆದುಕೊಂಡು ಹೋಗಿದ್ದಾರೆ. ಎದುರು ಮನೆ ವೆಂಕ್ಟೇಶಿ ಇವನು ಊರಿನಿಂದ ಬಂದ ಮೇಲೆ ಇವೆಲ್ಲಾ ಹೇಳಿದ್ದಾನೆ.

''ಪೊಲೀಸಿನವರಿಗೆ ಯಾಕಯ್ಯಾ ಫೋನ್ ಮಾಡ್ಲಿಲ್ಲ?'' ಎಂದು ಕೇಳಿದ್ದಕ್ಕೆ ಕಳ್ಳರೆಲ್ಲಾ ಅಂಡರ್‌ವರ್ಲ್ಡ್ ಮಾಫಿಯಾದವರಿರಬೇಕೆಂದು ಹೆದರಿಬಿಟ್ಟೆ ಅಂದನಂತೆ. ಎಷ್ಟೇ ಆಗಲಿ ನಾಟಕಗಳಲ್ಲಿ ನಗೆನಟನ ಪಾತ್ರ ಮಾಡೋನು ಪಾಪ! ಅವನೇನು ಹೀರೋ ಪಾತ್ರಧಾರಿಯೇ? ಧಾಂ ಧೂಂ ಅಂತ ಕಳ್ಳರ ಜೊತೆ ಹೊಡೆದಾಡಲು.

❖

ಗೌಳಿ ಪ್ರಕರಣ

- ಲೀಲಾ ಮಿರ್ಲೆ

ದೇಶದಲ್ಲೆಲ್ಲಾ ನೂರೆಂಟು ಬೃಹತ್ ಪ್ರಕರಣಗಳು ನಡೆಯುತ್ತಿರುವಾಗ, ನಮ್ಮ ಮನೆಯಲ್ಲೂ ಒಂದು ಸಣ್ಣ ಪ್ರಕರಣ ನಡೆಯಿತು. ಒಂದು ವಾರ ನನಗೆ ದೇವರ ಮನೆಯನ್ನು ಪ್ರವೇಶಿಸುವುದೇ ಒಂದು ತೊಡಕಿನ ಕೆಲಸವಾಯಿತು. ನಮ್ಮ ದೇವರ ಮನೆ ಚಿಕ್ಕದು. ಯಥಾಪ್ರಕಾರ ಎಲ್ಲಾ ದೇವರ ಮನೆಗಳಂತೆ, ಮಧ್ಯೆ ಒಂದು ಮರದ ಮಂಟಪ, ಅದರ ಮೇಲೆ ಒಂದು ಲಕ್ಷ್ಮಿಯ ಪಠ. ಅಂದರೆ, ಪಠದ ಕೆಳಭಾಗ ಮಂಟಪದ ಮೇಲಿದ್ದು, ಪಠ ಗೋಡೆಗೆ ವಾಲಿಕೊಂಡಿದೆ. ಮಂಟಪದ ಹೊರಗೆ, ಒಳಗೆ ಎಲ್ಲಾ ಪಟಗಳು, ವಿಗ್ರಹಗಳು, ಚಿಕ್ಕ ಮಂದಾಸನಗಳು, ಗಂಗೆ ಥಾಲಿಗಳು, ಇತ್ಯಾದಿಗಳಿವೆ. ದೇವರು ಒಬ್ಬನೆ, ನಾಮಗಳು ಹಲವಾರು ಎನ್ನುವುದನ್ನು ನಮ್ಮ ದೇವರ ಮನೆಯಲ್ಲಿರುವ ಅನೇಕಾನೇಕ ವಿಗ್ರಹ, ಪಠಗಳಿಂದ ಜಸ್ಟಿಫೈ ಮಾಡಬಹುದು.

ಕೆಲದಿನಗಳ ಹಿಂದೆ ಬೆಳಗ್ಗೆ ಪೂಜೆ ಮಾಡಲು ಹೋದಾಗ ಕಾಶಿ ವಿಶ್ವನಾಥನ ಚಿಕ್ಕ ಹಿತ್ತಾಳೆ ಮಂಟಪದ ಕೆಳಗೆ ಒಂದು ಹಲ್ಲಿ ಇತ್ತು. ಹಲ್ಲಿ, ಜಿರಳೆ ಇತ್ಯಾದಿಗಳನ್ನು ಕಂಡರೆ ನನಗೆ ಅಸಹ್ಯ ಹೆಚ್ಚು. ಹಲ್ಲಿಯನ್ನು ಓಡಿಸುವ ರೀತಿ ತಿಳಿಯದೆ ಏನೂ ಮಾಡಲು ತೋಚದೆ, 'ಹುಷ್, ಹುಷ್' ಎಂದೆ ಅದು ಅಲುಗಾಡಲಿಲ್ಲ. ಹಲ್ಲಿ ನನ್ನ ಕಣ್ಣಿಗೆ ಬೀಳದ ಹಾಗೆ ಕುಳಿತು, ಸ್ತೋತ್ರಗಳನ್ನು ಹೇಳುತ್ತಿದ್ದರೂ, ಗಮನವೆಲ್ಲಾ ಹಲ್ಲಿಯ ಮೇಲೆ. ಹಲ್ಲಿಗೇ ಪೂಜೆ ಸಲ್ಲಿಸಿದಷ್ಟು ಅದರ ಮೇಲೆ ಗಮನ. ಕ್ರಿಮಿ ಕೀಟಗಳಲ್ಲೂ ದೇವರಿದ್ದಾನೆಂದು ಹಿರಿಯರು ಹೇಳಿರುವುದರಿಂದ, ಹೋಗಲಿ ಎಂದು ಸುಮ್ಮನಾದೆ!

ಮಾರನೆಯ ದಿನ ಹಲ್ಲಿ ತನ್ನ ಸ್ಥಳವನ್ನು ಬದಲಾಯಿಸಿತು ವಿಶ್ವನಾಥನ ಮಂಟಪದ ಕೆಳಗಿನಿಂದ, ಕೃಷ್ಣನ ವಿಗ್ರಹದ ಹಿಂದಕ್ಕೆ floor cross ಮಾಡಿತು. ಬಾಲ ಮಾತ್ರ ಕಾಣಿಸುತ್ತಿತ್ತು. ಅಂದೂ ಹೇಗೋ ಪೂಜೆ ಮುಗಿಸಿದೆ.

ನಂತರ ಎರಡು ದಿನ ಅದೆಲ್ಲೂ ಕಾಣಲಿಲ್ಲ, ಸದ್ಯ ಜಾಗ ಬಿಟ್ಟಿರಬಹುದು ಎಂದುಕೊಂಡೆ. ಐದನೆಯ ದಿನ ಮಧ್ಯದ ಮಂಟಪದ ಮೇಲೆ, ಗೋಡೆಗೆ ಒರಗಿಸಿ ನಿಲ್ಲಿಸಿರುವ ಲಕ್ಷ್ಮೀ ಪಠದ ಹಿಂದೆ ಅದರ ತಲೆ ಕಾಣಿಸಿತು. ತಲೆ ಮಾತ್ರ. ಅದು ಜಾಗ ಬದಲಾಯಿಸಿದಾಗೆಲ್ಲಾ, ನಾನೂ ಜಾಗ ಬದಲಾಯಿಸುತ್ತಾ ಅದು ಕಣ್ಣಿಗೆ ಬೀಳದ ಹಾಗೆ ಕುಳಿತೆ. ಆದರೂ ಮನಸ್ಸೆಲ್ಲಾ ಅದರ ಮೇಲೆ. ಹಲ್ಲಿಯನ್ನು ಸಂಸ್ಕೃತದಲ್ಲಿ 'ಗೃಹಗೋಧಿಕಾ' ಎನ್ನುತ್ತಾರೆ, ಹಿಂದಿಯಲ್ಲಿ 'ಚಿಪ್‌ಕಲಿ' ಎಂದೂ, ಕನ್ನಡದಲ್ಲಿ ಗೌಳಿ ಅಥವಾ ಗವಳಿ ಎಂದೂ ಕರೆಯುತ್ತಾರೆ. ಭಾರತದ ಎಲ್ಲಾ ಭಾಷೆಗಳಿಂದ ಹಲ್ಲಿಯ ನಾಮಾಂಕಿತವನ್ನು ಒಟ್ಟುಗೂಡಿಸಿದರೆ, ಸಲೀಸಾಗಿ ಅದರ ಅಷ್ಟೋತ್ತರ ಶತನಾಮವನ್ನೇ ಬರೆಯಬಹುದು ಎಂದೆಲ್ಲಾ ಮನಸ್ಸು ಹುಚ್ಚುಚ್ಚಾಗಿ ಎಲ್ಲೆಲ್ಲೊ ಓಡತೊಡಗಿತು.

ಹಲ್ಲಿಯ ಕಾಟ ವಿಪರೀತವಾಗಿ, ಮನಸ್ಸಿಗೆ ನೆಮ್ಮದಿ ತಪ್ಪಿರುವುದರಿಂದ, ಹೇಗಾದರೂ ಮಾಡಿ ಅದನ್ನು ಓಡಿಸಬೇಕೆಂದು, ನಮ್ಮ ಕೆಲಸದ ಹುಡುಗಿಯನ್ನು ಕರೆದೆ. ''ರಾಣಿ, ದೇವರ ಪಠದ ಹಿಂದೆ ಒಂದು ಹಲ್ಲಿ ಇದೆ, ಓಡಿಸ್ತಿಯಾ'' ಎಂದೆ. ರಾಣಿ ಈಗಿನ ಕಾಲದ ಹುಡುಗಿ. ತುಂಬಾ ಕ್ಲೀನ್. ಅವಳಿಗೆ ಇವುಗಳನ್ನು ಕಂಡರೆ ಅಸಹ್ಯ ಅಷ್ಟೇ ಅಲ್ಲಾ ಭಯ ಬೇರೆ. ಅವಳು ಬಂದು, ದೂರ ನಿಂತು ''ಅಯ್ಯೋ ಬರೀ ತಲೆ ಕಾಣ್ತಾ ಇದೆ'' ಎಂದು ಜೋರಾಗಿ ಕೂಗುತ್ತಾ ಓಡಿಹೋದಳು. ''ಅಮ್ಮಾ, ಸಾಯಂಕಾಲ ವಾಚ್‌ಮನ್ ಬಂದಾಗ ಅವನ ಕೈಲಿ ಓಡಿಸಿ. ಇದಕ್ಕೆಲ್ಲಾ ಗಂಡಸರೇ ಸರಿ'' ಎಂದು ನನಗೆ ಉಪದೇಶ ಮಾಡಿ ಹೊರಟುಹೋದಳು.

ಮಾರನೆಯ ದಿನವೂ ಪಠದ ಹಿಂದೆ ಅದರ ತಲೆ ಕಾಣಿಸುತ್ತಿತ್ತು. ಅದೇ position ಸ್ವಲ್ಪವೂ ಬದಲಾಯಿಸಿರಲಿಲ್ಲ. ವಿಧಿ ಇಲ್ಲದೆ ಪುನಃ ರಾಣಿಯನ್ನು consult ಮಾಡಿದೆ. ಅವಳು ದೂರದಿಂದ ನೋಡಿ ''ಅಮ್ಮಾ, ಅದು ಸತ್ತಿರಬೇಕು. ಅದಕ್ಕೇ ಜಾಗ ಬದಲಾಯಿಸಿಲ್ಲ. ಇದಕ್ಕೆ ಗಂಗಪ್ಪನೇ ಸರಿ'' ಎಂದು ಇನ್ನೊಮ್ಮೆ ಹೇಳಿ ಕೈತೊಳೆದುಕೊಂಡಳು.

ದೇವರ ಮನೆಯಲ್ಲಿ ಸತ್ತ ಹಲ್ಲಿಯನ್ನು ಇಟ್ಟುಕೊಂಡು ಪೂಜೆ ಮಾಡಲು ಮನಸ್ಸು ಒಪ್ಪಲಿಲ್ಲ. ಸರಿ, ಸಾಯಂಕಾಲ ವಾಚ್‌ಮನ್ ಗಂಗಪ್ಪ ಬಂದಾಗ ಅದನ್ನು ತೆಗೆಸಿಹಾಕಬೇಕೆಂದುಕೊಂಡೆ.

ಹಲ್ಲಿ ತೆಗೆಸುವ ಆಪರೇಷನ್‌ಗೆ ದಿನವೆಲ್ಲಾ ಸಿದ್ಧತೆ ಮಾಡಿದೆ. ಸತ್ತ ಹಲ್ಲಿ ದೇವರ ಮೇಲೆ ಬೀಳದ ಹಾಗೆ, ಅವನಿಗೆ ತೆಗೆಯಲು ಹೇಳಬೇಕು. ಹತ್ತಿರದಲ್ಲಿದ್ದ ವಿಗ್ರಹಗಳು, ಪಠಗಳು ಇತ್ಯಾದಿಗಳನ್ನು ಬೇರೆ ಕಡೆಗೆ ವರ್ಗಾಯಿಸಿದೆ. ಮರದ ಮಂಟಪದ ಮೇಲೆ ಪಠ. ಅದರ ಹಿಂದಿರುವ ಹಲ್ಲಿಯನ್ನು ಮಾತ್ರ ಗಂಗಪ್ಪ ಡೀಲ್ ಮಾಡಬೇಕಾಗಿತ್ತು.

ಸಾಯಂಕಾಲ ಗಂಗಪ್ಪ ಬಂದ, ''ಗಂಗಪ್ಪ, ದೇವರ ಪಟದ ಹಿಂದೆ ಒಂದು ಹಲ್ಲಿ ಇದೆ. ಸತ್ತಿದೆ ಅಂತ ಕಾಣತ್ತೆ, ನೀನು ಪಠ ಸರಿಸಿ, ಹುಷಾರಾಗಿ ಆ ಹಲ್ಲಿನ ತೆಗೆದು ಹೊರಗೆ ಹಾಕು'' ಎಂದೆ. ಒಂದು ಸಣ್ಣ ಮೊರ, ಪರಕೆ ಎಲ್ಲಾ ಕೊಟ್ಟೆ. ಪೊರಕೆಯನ್ನು ದೇವರಿಗೆ ತಗುಲಿಸಬಾರದು, ಹಲ್ಲಿ ಸತ್ತಿಲ್ಲದಿದ್ದರೆ ಅದನ್ನು ಸಾಯಿಸಬಾರದು, ಇತ್ಯಾದಿ ನೂರೆಂಟು ಸಲಹೆಗಳನ್ನು ಕೊಟ್ಟೆ.

ಗಂಗಪ್ಪ ಪೊರಕೆ ಪಾಣಿಯಾಗಿ ದೇವರ ಮನೆಗೆ ಹೋದ. ಆ ಘೋರ ದೃಶ್ಯವನ್ನು ನೋಡಲಾರದ ನಾನು ಡ್ರಾಯಿಂಗ್ ರೂಮ್‌ಗೆ ಓಡಿದೆ. ಅಲ್ಲಿಂದಲೇ running commentary ಶುರುಮಾಡಿದೆ.

ಐದು ನಿಮಿಷವಾದರೂ ದೇವರ ಮನೆಯಿಂದ ಯಾವ ಸದ್ದೂ ಬರಲಿಲ್ಲ. ಗಂಗಪ್ಪ ಸ್ವಲ್ಪ ಒರಟ. ನನಗೆ ನೆಗೆಟಿವ್ ಇಮ್ಯಾಜಿನೇಷನ್. ಹಲ್ಲಿಗಳು ಗೋಡೆಯಿಂದ ಬೀಳದೆ ಇರುವುದಕ್ಕೆ ಕಾರಣ, ಅದರ ಪಾದದಲ್ಲಿರುವ ಪದರದ ಸಹಾಯದಿಂದ, vaccum ಉಂಟಾಗುತ್ತದಂತೆ. ಆಗ ಅದರ ಪಾದ ಗೋಡೆಗೆ ಅಂಟಿಕೊಳ್ಳುತ್ತದೆ ಎಂದು ಎಲ್ಲೊ ಓದಿದ್ದೆ.

ಗಂಗಪ್ಪ ಹಲ್ಲಿಯನ್ನು ಗೋಡೆಯಿಂದ ಕೀಳುತ್ತಿರುವ ದೃಶ್ಯ ಕಣ್ಣಿಗೆ ಕಟ್ಟಲು ಶುರುವಾಯಿತು. "ಗಂಗಪ್ಪ ಏನಾಯಿತೋ?" ಎಂದು ಕೂಗಿದೆ. ಆವನು "ಏನೂ ಇಲ್ಲಮ್ಮ, ಇಲ್ಲಿ ಹಲ್ಲಿನೇ ಇಲ್ಲ, ಸುಮ್ಕಾ ಇದೀನಿ" ಎಂದ. ನಾನು, ರಾಣಿ ಅದರ ತಲೆ ನೋಡಿದೀವಿ. ಸರಿಯಾಗಿ ನೋಡು" ಎಂದೆ. ಅದಕ್ಕೆ ಆವನು "ಪಟ ತೆಗೆದಿದೀನಿ, ಹಲ್ಲಿ ಇಲ್ಲ, ಆದರೆ ಪಟದ ಹಿಂದೆ ಅದಕ್ಕೆ ಅಂಟಿಸಿರುವ ಕಾಗದ ಕಿತ್ತಿದೆ. ಒಂದು ಚೂರು ಆಚೆ ಬಂದಿದೆ. ಬಂದು ನೋಡಿ" ಅಂದ. ಹೋಗಿ ನೋಡಿದೆ. ಹೌದು ಐವತ್ತು ವರ್ಷಕ್ಕೂ ಹೆಚ್ಚಿನ ಆ ಪಟದ ಹಿಂದೆ ಅಂಟಿಸಿದ ಕಾಗದದ ಒಂದು ಚೂರು ಆಚೆ ಕಾಣಿಸಿಕೊಂಡಿತ್ತು. ಹಲ್ಲಿಯ ತಲೆಯ ಆಕಾರವಿದ್ದ ಅದನ್ನು ನಾನು ಹಲ್ಲಿ ಎಂದು ಭಾವಿಸಿದ್ದೆ! ಇದನ್ನೆ ದಾರ್ಶನಿಕರು "ರಜ್ಜು ಸರ್ಪ ಭ್ರಮೆ" ಎಂದಿರಬೇಕು. ಹಗ್ಗವನ್ನು ಸರ್ಪವೆಂದು ಭಾವಿಸಿ ಕಂಗಾಲಾಗುವಂತೆ, ಜೀವನವನ್ನು ತಪ್ಪು ದೃಷ್ಟಿಯಲ್ಲಿ ನೋಡಿ ಹಲುಬುತ್ತೇವೆ ಎಂದು ಮಹಾತ್ಮರು ಹೇಳಿರುವುದು ಜ್ಞಾಪಕಕ್ಕೆ ಬಂತು.

ಪೇಪರ್ ಚೂರಿನಿಂದಾಗಿ ಒಂದು ವಾರ ಒದ್ದಾಡಿದ ಹಾಗೆ, ಜೀವನ ಪರ್ಯಂತ ತಪ್ಪು ಮನೋಭಾವಗಳಿಂದ (attitude) ನಾವು ಪಡುವ ಬವಣೆ ಅಷ್ಟಿಷ್ಟಲ್ಲ. ಭಗವಂತ ದೇವರ ಮನೆಯಲ್ಲೇ Serpent and the Rope ಬಗ್ಗೆ ಉದಾಹರಣೆಯ ಸಹಿತ ವಿವರಿಸಿದ್ದಾನೆ. ಖಂಡಿತ attitudeಗಳ ಬಗ್ಗೆ ರಿಪೇರಿ ಕೆಲಸ ಶುರು ಮಾಡಬೇಕು ಎಂದುಕೊಂಡೆ.

❖

ಭಯ ಬೇಡ
ನಿಮ್ಮ ಮಗ ಮುಂದೆ
ಆಗಬಹುದು
ಪೋಲಿಯೋ
ಪೋಕರಿಯೋ
ಹೇಗಾದರೂ ಆಗಲಿ
ಚಿಕ್ಕವನಿರುವಾಗ ಹಾಕಿಸಿಬಿಡಿ
ಪೋಲಿಯೋ

– ಬೇಲೂರು ರಾಮಮೂರ್ತಿ

ಐಜಿಪಿ ಸಾಹೇಬರ ಸೀನಿಯರ್ ಪಿಎ

- ಡಾ|| ಡಿ.ವಿ. ಗುರುಪ್ರಸಾದ್

ಪೊಲೀಸ್ ಇಲಾಖೆಯಲ್ಲಿ ಪಿ.ಎ.ಗಳ ಮಹತ್ವವೇನು ಎನ್ನುವುದನ್ನು ನಾನು ನನ್ನ ಸೇವೆಯ ಆರಂಭದಲ್ಲೇ ಅರಿತೆ. ಕೆಲಸಕ್ಕೆ ಹಾಜರಾದ ನಂತರ ಹಿರಿಯ ಅಧಿಕಾರಿಗಳು ಇಲಾಖಾ ಮುಖ್ಯಸ್ಥರನ್ನು ಭೇಟಿ ಮಾಡಲೇಬೇಕಾದ್ದು ಸಂಪ್ರದಾಯ. ಅಂತೆಯೇ ಕರ್ನಾಟಕ ರಾಜ್ಯಕ್ಕೆ ವಿಂಗಡಣೆ ಮಾಡಲಾಗಿದ್ದ ನಾವು 4 ಜನ ಐಪಿಎಸ್ ಪ್ರೊಬೇಷನರ್‌ಗಳು ಬೆಂಗಳೂರಿಗೆ ಬಂದು ಪೊಲೀಸ್ ಕೇಂದ್ರ ಕಚೇರಿಯಲ್ಲಿ ಡಿಜಿಪಿ – ಆಗ ಐಜಿಪಿ – ರವರ ಕಚೇರಿಗೆ ಹೋಗಿ ದೊಡ್ಡ ಸಾಹೇಬರ ಬಾಗಿಲ ಮುಂದೆ ಹೋದಾಗ ಬಾಗಿಲಲ್ಲಿ ನಿಂತಿದ್ದ ಕಾನ್‌ಸ್ಟೇಬಲ್ ಮೀಸೆ ಮರಿಯಪ್ಪ 'ಮೊದಲು ಪಿ.ಎ.ರವರನ್ನು ಕಾಣಿ' ಎಂದು ಪಕ್ಕದಲ್ಲೇ ಇದ್ದ ಪಿ.ಎ. ಕೋಣೆಗೆ ಕರೆದೊಯ್ದ. ಆ ಕೋಣೆಯಲ್ಲಿ ಇಬ್ಬರು ವ್ಯಕ್ತಿಗಳಿದ್ದರು. 'ಎಲ್' ಆಕಾರದ ಟೇಬಲಿನ ಎರಡು ಬದಿಯಲ್ಲಿ ಇದ್ದ ಇಬ್ಬರಿಗೂ ನಮಸ್ಕರಿಸಿ ನಾವು ಈ ರಾಜ್ಯಕ್ಕೆ ಬಂದ ಹೊಸಾ ಐಪಿಎಸ್ ಅಧಿಕಾರಿಗಳು ಎಂದು ನಮ್ಮ ವಿಸಿಟಿಂಗ್ ಕಾರ್ಡ್ ನೀಡಿದೆವು. ಆ ಇಬ್ಬರಲ್ಲಿ ಸೀನಿಯರ್ ವ್ಯಕ್ತಿ ನಮ್ಮನ್ನು ನಖಶಿಖಾಂತ ನೋಡಿ 'ಏನ್ರೀ ಇದು? ಸಾಹೇಬರನ್ನು ನೋಡಲು ಈ ರೀತಿ ಉಡುಗೆಯಲ್ಲಿ ಬಂದಿದ್ದಿರಲ್ಲಾ, ನಿಮಗೆ ಎಂತಹ ತರಬೇತಿ ನೀಡಲಾಗಿದೆ? ಮೊದಲು ನೀವುಗಳು ಸೆರಿಮೋನಿಯಲ್ ಅಂದರೆ ಖಾಕಿ ಸೂಟು ದಿರುಸು ಧರಿಸಿ ಬನ್ನಿ' ಎಂದು ಗಡುಸಾಗಿಯೇ ಹೇಳಿದ. ನಮ್ಮ ಸಹೋದ್ಯೋಗಿ ವರ್ಮಾ ಸೀನಿಯರ್ ಪಿ.ಎ.ಯನ್ನು ಉದ್ದೇಶಿಸಿ 'ಮಿಸ್ಟರ್, ಈಗ ಬೇಸಿಗೆ ಕಾಲ. ನಮಗೆ ಪೊಲೀಸ್ ತರಬೇತಿ ಶಾಲೆಯಲ್ಲಿ ಹೇಳಿರುವಂತೆ ನಾವು ಪ್ಯಾಂಟು ಶರ್ಟು ಧರಿಸಿ ಕ್ರಾಸ್ ಬೆಲ್ಟ್ ಧರಿಸಿದರೆ ಸಾಕು. ಸೂಟ್‌ಧಾರಣೆ ಬೇಡವಲ್ಲ' ಎಂದ. ಆ ಸೀನಿಯರ್ ಪಿ.ಎ. 'ಏನ್ರೀ, ನಾನು ಇಲ್ಲಿಯವರೆಗೆ ನಿಮ್ಮಂತಹ 20 ತಂಡಗಳ ಐಪಿಎಸ್ ಪ್ರಶಿಕ್ಷಣಾರ್ಥಿಗಳನ್ನು ಕಂಡಿದ್ದೇನೆ. ನೀವು ನನಗೇ ರೂಲ್ಸ್ ಹೇಳಿ ಕೊಡ್ತೀರಾ, ಕರ್ನಾಟಕಕ್ಕೆ ಬಂದಿದ್ದೀರಿ. ಇಲ್ಲಿಯ ರೀತಿ ರಿವಾಜು ಕಲಿಯಿರಿ' ಎಂದು ಗಡುಸಾಗಿಯೇ ಹೇಳಿದ. ಏನು ಮಾಡುವುದು ಎಂದು ನಮಗೆ ತೋಚಲಿಲ್ಲ.

ಅಷ್ಟರಲ್ಲಿ ನಮ್ಮ ಇನ್ನೊಬ್ಬ ಸಹೋದ್ಯೋಗಿ ರಮಣರಾವ್ 'ಸರ್, ನಾವುಗಳು ಪೊಲೀಸ್ ಮೆಸ್‌ನಲ್ಲಿ ತಂಗಿದ್ದೇವೆ. ಅಲ್ಲಿಂದ ಇಲ್ಲಿಗೆ ಆಟೋದಲ್ಲಿ ಬಂದಿದ್ದೇವೆ. ಮತ್ತೆ ಹೋಗಿ ಬರಲು ಎರಡು ಗಂಟೆ ಬೇಕಾಗ್ತದೆ. ಇದೇ ಡ್ರೆಸ್‌ನಲ್ಲಿ ಸಾಹೇಬರನ್ನು ಕಾಣಲು ಸಾಧ್ಯವಿಲ್ಲವೇ' ಎಂದ. ಸೀನಿಯರ್ ಪಿ.ಎ. ಅವನ ಷರ್ಟಿನ ಮೇಲಿದ್ದ ನಾಮಫಲಕ ನೋಡಿ, 'ರಾವ್ ಸಾಹೇಬರೇ ನಮ್ಮ ರಾಜ್ಯಕ್ಕೆ ಬಂದ ಮೊದಲ ದಿವಸವೇ ನೀವು ಏಕೆ ಮುಖಕ್ಕೆ ಮಂಗಳಾರತಿ ಎತ್ತಿಸಿಕೊಳ್ಳುತ್ತೀರಿ. ದೊಡ್ಡ ಸಾಹೇಬರು ತೀರಾ ಖಡಕ್ ಆಸಾಮಿ. ಈಗ ಸಾಹೇಬ್ರು ವಿಧಾನಸೌಧಕ್ಕೆ ಮೀಟಿಂಗ್‌ಗೆ ಹೋಗ್ತಾರೆ. ಅವರು ವಾಪಸ್ ಬರುವಷ್ಟರಲ್ಲಿ ನೀವು ಬಟ್ಟೆ ಬದಲಾಯಿಸಿ ಬನ್ನಿ' ಎಂದು ಹೇಳಿ ಯಾರಿಗೋ ಫೋನ್ ಮಾಡಿ ನಮಗಾಗಿ ಒಂದು ಪೊಲೀಸ್ ಜೀಪ್ ತರಿಸಿ 'ನೀವು ಬೆಂಗಳೂರಿನಲ್ಲಿ ಇರುವವರೆಗೂ ಈ ವಾಹನ

ಉಪಯೋಗಿಸಿ' ಎಂದು ನಮಗೆ ಮೆಹರ್‌ಬಾನಿ ಮಾಡಿ ಟಾ-ಟಾ, ಬೈ ಬೈ ಹೇಳಿಯೇ ಬಿಟ್ಟ. ನಾವು ಗತ್ಯಂತರವಿಲ್ಲದೇ ಮೆಸ್‌ಗೆ ವಾಪಸ್ಸಾಗಿ ಬೇರೆ ದಿರುಸು ಧರಿಸಿ ಒಂದು ಗಂಟೆಯ ನಂತರ ಮತ್ತೆ ಸೀನಿಯರ್ ಪಿಎ ಎದುರು ಹಾಜರಾದೆವು.

ನಮ್ಮ ದಿರುಸನ್ನು ನೋಡಿದ ಆತ 'ವೆರಿಗುಡ್ ವೆರಿಗುಡ್. ನೀವೆಲ್ಲಾ ತುಂಬಾ ವಿಧೇಯ ಅಧಿಕಾರಿಗಳು. ಸಾಹೇಬ್ರು ಇನ್ನೂ ವಿಧಾನಸೌಧದಿಂದ ವಾಪಸ್ಸಾಗಿಲ್ಲ' ಎಂದು ಹೇಳಿ 'ನಿಮ್ಮ ಮುಖಗಳನ್ನು ನೋಡಿದ್ರೆ ನೀವು ತುಂಬಾ ಸುಸ್ತಾದ ಹಾಗೆ ಕಾಣಿಸ್ತಿದ್ದೀರಿ' ಎಂದು ಹೇಳಿ ಎದುರುಗಡೆ ಇದ್ದ ಮೀಸೇಧಾರಿ ಕಾನ್‌ಸ್ಟೇಬಲ್‌ಗೆ ನಮಗೆ ಕಾಫಿ ಬಿಸ್ಕತ್ ತರಲು ಆಜ್ಞಾಪಿಸಿದ. ಆನಂತರ ನಮ್ಮೆಲ್ಲರ ಬಯೋಡಾಟಾ ಕೇಳಿ ನಮ್ಮಲ್ಲಿ ಯಾರ್‍ಯಾರಿಗೆ ಲಗ್ನ ಆಗಿದೆ, ಆಗಿಲ್ಲ ಎನ್ನುವ ವಿಷಯ ವಿಚಾರಿಸಿಕೊಂಡ. ಸಾಹೇಬರು ಅಷ್ಟರಲ್ಲಿ ಕಚೇರಿಗೆ ವಾಪಸ್ಸಾದರು. ಅವರನ್ನು ನೋಡಲು ಸೀನಿಯರ್ ಪಿ.ಎ. ಹೋದ.

ನಮ್ಮ ಮುಂದೆ ಇದ್ದ ಜೂನಿಯರ್ ಪಿಎ 'ಸಾರ್ ನಮ್ಮ ಸೀನಿಯರ್ ವೆಂಕಟೇಶ್ ದೊಡ್ಡ ಸಾಹೇಬರಿಗೆ ತುಂಬಾ ಬೇಕಾದವರು. ಅವರು ತುಂಬಾ ಪವರ್‌ಫಲ್ ಮನುಷ್ಯ. ನೀವು ಅವರ ಜತೆ ಉತ್ತಮ ಬಾಂಧವ್ಯ ಹೊಂದಿದ್ದರೆ ಅವರು ನಿಮಗೆ ಸಾಕಷ್ಟು ಸಹಾಯ ಮಾಡಬಲ್ಲರು' ಎಂದ. ಅಷ್ಟರಲ್ಲಿ ನಮ್ಮ ಸಹೋದ್ಯೋಗಿ ವರ್ಮಾ 'ಆಫ್ಟರ್ ಆಲ್ ಅವರೊಬ್ಬ ಸ್ಟೆನೋಗ್ರಾಫರ್. ಈ ಕಚೇರಿಯಲ್ಲಿ ಇಪ್ಪತ್ತು ವರ್ಷ ಕೆಲಸ ಮಾಡಿದಾಕ್ಷಣ ಅವರೇ ಐಜಿಪಿ ಆಗಲು ಸಾಧ್ಯವೇ' ಎಂದ. 'ಸಾರ್ ತಾವು ಈ ಕೆಲಸಕ್ಕೆ ಇನ್ನೂ ಹೊಸಬರು. ಸ್ವಲ್ಪ ಎಕ್ಸ್‌ಪೀರಿಯನ್ಸ್ ಆದ ನಂತರ ನಮ್ಮ ಇಲಾಖೆಯಲ್ಲಿ ಪಿಎ ಗಳ ಮಹತ್ವ ತಿಳಿಯುತ್ತದೆ. ಇನ್ನು ಐದು ವರ್ಷದ ನಂತರ ನೀವೇ ನಮ್ಮಗಳ ಬಗ್ಗೆ ಅಭಿಪ್ರಾಯ ಬದಲಿಸುತ್ತೀರಿ' ಎಂದ. ಅಷ್ಟರಲ್ಲಿ ಸೀನಿಯರ್ ಪಿಎ ವಾಪಸ್ಸಾದ. ನಮ್ಮ ವರ್ಮ ಸುಮ್ಮನಿರದೆ 'ಏನ್ರೀ ವೆಂಕಟೇಶ್, ನೀವೇ ಸೂಪರ್ ಐಜಿಪಿ ನಾ' ಎಂದ. ವೆಂಕಟೇಶ್ ಮುಖ ಕೆಂಪಾಗಿ ಹೋಯಿತು. ಆತ ತುಟಿ ಕಚ್ಚಿಕೊಂಡು 'ಸ್ವಾಮಿ, ನಾನು ಪೊಲೀಸ್ ಅಧಿಕಾರಿಯಲ್ಲ, ನಾನೊಬ್ಬ ಮಾಮೂಲಿ ಸ್ಟೆನೋಗ್ರಾಫರ್ ಅಷ್ಟೆ' ಎಂದ. ಅಷ್ಟರಲ್ಲಿ ಫೋನ್ ಗಂಟೆ ಸದ್ದಾಯಿತು. ಜೂನಿಯರ್ ಪಿಎ ಅಮ್ಮಾವ್ರು ಲೈನ್‌ನಲ್ಲಿ ಇದ್ದಾರೆ ಎಂದು ವೆಂಕಟೇಶ್‌ಗೆ ಫೋನ್ ನೀಡಿದ. ಮೇಡಂ, ಆಗಲೀ ಮೇಡಂ, ಆಗಲಿ ಮೇಡಂ ಎಂದು ಸುಮಾರು ಎರಡು ನಿಮಿಷ ಆಗಲಿ, ಆಗಲಿ, ಅಡ್ಡಿಯಿಲ್ಲ ಎಂದು ಉತ್ತರಿಸಿದ ವೆಂಕಟೇಶ್ ಫೋನ್‌ನನ್ನು ಕೆಳಗಿಟ್ಟ.

ಅಷ್ಟರಲ್ಲಿ ಕಾನ್‌ಸ್ಟೇಬಲ್ ಮೀಸೆ ಮರಿಯಪ್ಪ ದೊಡ್ಡ ಸಾಹೇಬರು ಇವರನ್ನು ಕರೆಯುತ್ತಿದ್ದಾರೆ ಎಂದು ನಮ್ಮತ್ತ ಬೆರಳು ಮಾಡಿದ. ನಾವೆಲ್ಲರೂ ಒಬ್ಬರ ಹಿಂದೆ ಒಬ್ಬರು ಸಾಲಾಗಿ ಡಿಜಿಪಿ ಕೊಠಡಿಗೆ ಹೋಗಿ ಸಾಹೇಬರಿಗೆ ಸಲ್ಯೂಟ್ ಹೊಡೆದು ಅಟೆನ್ಷನ್‌ನಲ್ಲಿ ನಿಂತೆವು. ಸಾಹೇಬರು ಯಾವುದೋ ಫೈಲ್ ನೋಡುತ್ತಿದ್ದವರು ನಮ್ಮ ಕಡೆ ತಲೆ ಎತ್ತಿಯೂ ನೋಡಲಿಲ್ಲ. ಸುಮಾರು ಎರಡು ನಿಮಿಷ ನಾವು ನಿಂತ ಜಾಗದಲ್ಲೇ ನಿಂತಿದ್ದೆವು. ಆನಂತರ ಅವರು ನಮ್ಮನ್ನು ಕರೆದು ಕುರ್ಚಿಯಲ್ಲಿ ಕೂರಿಸಿ ಉಭಯಕುಶಲೋಪರಿ ವಿಚಾರಿಸಿದರು. 'ನೀವುಗಳು ನಾಳೆ ಬೆಳಿಗ್ಗೆಯೇ ಕರ್ನಾಟಕ ಪೊಲೀಸ್ ತರಬೇತಿ ಶಾಲೆ, ಮೈಸೂರಿಗೆ

ಹಾಜರಾಗತಕ್ಕದ್ದು. ಒಂದು ತಿಂಗಳ ತರಬೇತಿ ನಂತರ ನಿಮಗೆ ಜಿಲ್ಲಾ ತರಬೇತಿಗೆಂದು ನಿಯೋಜಿಸಲಾಗುವುದು' ಎಂದು ಹೇಳಿ 'ನೀವು ಹೋಗಬಹುದು' ಎಂದು ಅಪ್ಪಣೆ ಕೊಡಿಸಿದರು.

ಮತ್ತೆ ಪಿಎ ಕೋಣೆಗೆ ಬಂದೆವು. 'ಸಾಹೇಬರು ಏನಂದರು' ಎಂದು ವೆಂಕಟೇಶ್ 'ಕೇಳಿದಾಗ ನಾಳೆ ಬೆಳಿಗಿನ ಜಾವವೇ ಮೈಸೂರಿಗೆ ರಿಪೋರ್ಟ್ ಮಾಡಲು ಹೇಳಿದ್ದಾರೆ. ಈಗಾಗಲೇ ಸಂಜೆ 6 ಗಂಟೆ ಆಗುತ್ತಲಿದೆ ನಾವು ಹೇಗೆ ಮೈಸೂರಿಗೆ ಹೋಗುವುದು' ಎಂದಾಗ 'ನೀವೇನು ಪರಿ ಮಾಡಿಕೊಳ್ಳಬೇಡಿ. ರಾತ್ರಿ 10 ಗಂಟೆಯ ಬಸ್ಸಿಗೆ ನಿಮಗೆ ಟಿಕೆಟ್ ಬುಕ್ ಮಾಡಿಸಿರುತ್ತೇನೆ. ಟಿಕೆಟ್ ಹಣ ನನಗೆ ಕೊಡಿ. ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡ್‌ಗೆ ನೀವು ಬಂದಾಗ ಕಾನ್ಸ್‌ಟೇಬಲ್ ಒಬ್ಬ ನಿಮ್ಮ ಕೈಗೆ ಟಿಕೆಟ್ ಕೊಡುತ್ತಾನೆ' ಎಂದ ವೆಂಕಟೇಶ್. 'ಅದು ಸರಿ, ರಾತ್ರಿ 10 ಗಂಟೆಗೆ ನಾವು ಬೆಂಗಳೂರು ಬಿಟ್ಟರೆ ಮೈಸೂರಿಗೆ ತಲುಪುವುದು ಮಧ್ಯರಾತ್ರಿ ಮೇಲೆಯೇ. ಮೈಸೂರು ಬಸ್ ನಿಲ್ದಾಣದಿಂದ ಪೊಲೀಸ್ ತರಬೇತಿ ಶಾಲೆಗೆ ಹೇಗೆ ಹೋಗುವುದು' ಎಂದು ನಾವು ಕೇಳಿದಾಗ 'ಆ ವಿಷಯ ನನಗೆ ಬಿಡಿ. ಇನ್ನು ನೀವು ಹೋಗಬಹುದು' ಎಂದುಬಿಟ್ಟ.

ಎಲ್ಲರೂ ಹೊರಗೆ ನಡೆಯುವ ಸಮಯದಲ್ಲಿ ವೆಂಕಟೇಶ್ ನನ್ನನ್ನು ಪಕ್ಕಕ್ಕೆ ಕರೆದು 'ಸರ್, ಒಂದು ನಿಮಿಷ ಎಂದ. ಏನು' ಎಂದು ಕೇಳಿದೆ. ಈ ನಾಲ್ಕು ಜನರಲ್ಲಿ ನಿಮ್ಮೊಬ್ಬರಿಗೆ ಮಾತ್ರ ಮದುವೆಯಾಗಿಲ್ಲ ಅಲ್ಲವೇ?' ಎಂದ 'ಹೌದು' ಎಂದೆ. 'ಸರ್ ಇಫ್ ಯು ಡೋಂಟ್ ಮೈಂಡ್, ನಿಮ್ಮ ಜಾತಿ ಏನೆಂದು ಕೇಳಬಹುದೇ' ಎಂದ. ನಾನು ನನ್ನ ಜಾತಿ ಪರಿಚಯ ಹೇಳಿದೆ. 'ನೋಡಿ ನಮ್ಮ ಐಜಿ ಸಾಹೇಬರ ಹೆಂಡತಿ ತಂಗಿ ಬಹಳ ಸ್ಫುರದ್ರೂಪಿ. ವಿದ್ಯಾವಂತೆ. ಗುಣವಂತೆ. ಆಕೆ ಎಂ.ಎ. ಪರೀಕ್ಷೆ ಪಾಸು ಮಾಡಿದ್ದಾರೆ. ಅವರೂ ನಿಮ್ಮ ಜಾತಿಯ ಒಳ್ಳೆಯ ಮನೆತನ ಐಪಿಎಸ್/ಐಎಎಸ್ ಗಂಡುಗಳನ್ನು ನೋಡುತ್ತಿದ್ದಾರೆ. ನೀವು ಒಮ್ಮೆ ಯಾಕೆ ಯೆಸ್ ಅನ್ನಬಾರದು' ಎಂದು ಕೇಳಿದ.

'ವೆಂಕಟೇಶ್, ನಾನು ಇನ್ನೂ 2 ವರ್ಷ ಮದುವೆ ಆಗಬಾರದು ಎಂದು ತೀರ್ಮಾನಿಸಿದ್ದೇನೆ. ಆದರೂ ನಮ್ಮ ತಂದೆ ತಾಯಿ ಬಳಿ ನೀವು ಹೇಳಿದ ವಿಷಯ ಹೇಳುತ್ತೇನೆ' ಎಂದೆ. 'ನೀವು ನಮಗೆ ಮಾಡುತ್ತಿರುವ ಸಹಾಯಕ್ಕೆ ತುಂಬಾ ವಂದನೆಗಳು. ನಿಮ್ಮಂತಹವರಿಂದಲೇ ನಿಮ್ಮ ಸಾಹೇಬರಿಗೆ ಒಳ್ಳೆಯ ಹೆಸರು ಬರುವುದು' ಎಂದು ವೆಂಕಟೇಶನನ್ನು ಹೊಗಳಿದೆ. ಆತ ತುಂಬಾ ಖುಷಿಯಾಗಿ ಹೋದ. 'ಸರ್, ಆ ವರ್ಮ ನಿಮ್ಮ ಹಾಗೆ ಯಾಕೆ ನಡೆದುಕೊಳ್ಳುವುದಿಲ್ಲ. ಅವರಿಗೆ ತುಂಬಾ ಗರ್ವ ಎನ್ನುವ ಹಾಗೆ ಕಾಣುತ್ತದೆ. ನಮ್ಮ ರಾಜ್ಯಕ್ಕೆ ಬಂದ ಮೇಲೆ ಉತ್ತರ ಭಾರತೀಯರಂತೆ ನಡೆದುಕೊಳ್ಳಲು ಸಾಧ್ಯವೇ?' ಎಂದ. 'ನೋಡಪ್ಪ ಅವನಿಗೆ ಸ್ವಲ್ಪ ದುಡುಕು ಬುದ್ಧಿ, ಆತ ಬಾಯಿಗೆ ಬಂದಂತೆ ಬಡಬಡಿಸುತ್ತಾನೆ' ಎಂದು ಹೇಳಿ ಅವನಿಂದ ಬೀಳ್ಕೊಂಡೆ.

ಅಷ್ಟರಲ್ಲಿ ನನಗಾಗಿ ಕಾಯುತ್ತಾ ಜೀಪಿನಲ್ಲಿ ಕುಳಿತಿದ್ದ ನನ್ನ ಸಹೋದ್ಯೋಗಿಗಳು 'ಏನದು

ವೆಂಕಟೇಶ್ ಜೊತೆ ನೀನು ಸೀಕ್ರೆಟ್ ವಿಷಯ ಮಾತನಾಡುತ್ತಿದ್ದುದು' ಎಂದು ಕೇಳಿದರು. 'ಇಲ್ಲ ಆತ ನಮ್ಮ ಊರಿನ ಕಡೆಯವರೆಂದು ವಿಚಾರಿಸಿಕೊಂಡರು' ಎಂದು ಮಾತು ತೇಲಿಸಿದೆ.

ಮೈಸೂರಿನಲ್ಲಿ ಒಂದು ತಿಂಗಳ ತರಬೇತಿ ಮುಗಿಯಲು ಇನ್ನು ಒಂದು ದಿನ ಇರುವಾಗ ನಾವು ತರಬೇತಿಗೆಂದು ಹೋಗಬೇಕಾದ ಜಿಲ್ಲೆಗಳ ಪಟ್ಟಿ ಬಿಡುಗಡೆಯಾಯಿತು. ನನಗೆ ಮೈಸೂರಿಗೇ ನಿಯೋಜಿಸಲಾಗಿತ್ತು. ವರ್ಮಾನಿಗೆ ರೈಲು ಸಂಚಾರವೇ ಇಲ್ಲದ ಬಿಸಿಲಿನ ತಾಪದಿಂದ ಕೂಡಿರುವ ಜಿಲ್ಲೆಯೊಂದಕ್ಕೆ ಹಾಕಲಾಗಿತ್ತು.

ಅದೇ ಸಂಜೆ ವೆಂಕಟೇಶನಿಂದ ನನಗೆ ಫೋನ್ ಬಂತು. 'ಸರ್ ನಿಮಗೆ ಪೋಸ್ಟಿಂಗ್ ಆದ ಜಿಲ್ಲೆಯ ಬಗ್ಗೆ ತೃಪ್ತಿ ಇದೆಯೇ' ಎಂದು ಕೇಳಿದ. 'ಓ! ಖಂಡಿತ ಇದೆ' ಎಂದೆ. 'ನಮ್ಮ ಐಜಿ ಸಾಹೇಬರ ಮಾವನವರ ಮನೆಯೂ ಮೈಸೂರಿನಲ್ಲೇ ಇದೆ. ನೀವು ಯಾವಾಗ ಬೇಕಾದರೂ ಕನ್ನೆಯನ್ನು ನೋಡಬಹುದು' ಎಂದ. 'ಬಿಸಿಲು ಜಿಲ್ಲೆಗೆ ವರ್ಮಾ ಹೋಗುವುದಕ್ಕೂ ನಿಮಗೂ ಏನಾದರೂ ಸಂಬಂಧ ಇದೆಯೇನ್ರೀ' ಎಂದು ಕೇಳಿದೆ.

'ಸರ್, ಆಫ್ಟ್ರಾಲ್ ನಾನೊಬ್ಬ ಆರ್ಡಿನರಿ ಸ್ಟೆನೋಗ್ರಾಫರ್ ಸರ್' ಎಂದು ನಕ್ಕ ವೆಂಕಟೇಶ್ ಫೋನ್ ಕೆಳಗಿಟ್ಟ.


❖

ಪುಟಾಣಿಯ ಪಯಣ

ಹಿಂದಿ ಚಿತ್ರದ ಮೇರು ನಟ ಅಮಿತಾಭ್ ಬಚ್ಚನ್ ಸಹ ಹೋಗದಿದ್ದ ಜಾಗಕ್ಕೆ ಮುಂಬೈನ ಗರೀಬ್ ನಗರದ ಸ್ಲಂನ 10 ವರ್ಷದ ಅಜರುದ್ದೀನ್ ಇಸ್ಮಾಯಿಲ್ ಎಂಬ ನಟ ಹೋಗಿದ್ದಾನೆ. ಅದು ಯಾವ ಜಾಗ? ಲಾಸ್ ಎಂಜಲೀಸ್‌ನ ಆಸ್ಕರ್ ಪ್ರಶಸ್ತಿ ಸಮಾರಂಭ! ಹಾಗೆಂದು ಅವನೇ ಹೇಳಿಕೊಂಡಿದ್ದಾನೆ.

ವಕ್ರ ಪದಬಂಧ - 4

- ಎನ್. ರಾಮನಾಥ್



ಎಡದಿಂದ ಬಲಕ್ಕೆ

1. ಗುರುವಿಗೆ ಶಿಷ್ಯ ಹೇಳಿಕೊಡುವ ಮಂತ್ರ (4)
3. ಸಣ್ಣಗೆ ಉದ್ದಕ್ಕೆ ಇರುವ ಬೆಳಕಿನ ತುಂಡು (3)
5. ತುದಿ ಮುರಿದು ಹೇಳಿದರೆ ಸಂತಸ, ಮುರಿಯದಿದ್ದರೆ ರಾಮಸುತ (2)
6. ಈಗ ಈ ಜಾಗ ಇದ್ದರೆ ಅಲ್ಲೊಂದು ಅಂಗಡಿ ಎದ್ದೀತು (3)
7. ಕಕವನಲ್ಲೂ ಇರುವ ಕ್ರಮ (2)
9. ರಜಾ ಎಂದರೆ ———— (2)
10. ಹೆಂಡತಿಯನ್ನು ಸಾಕಲಾಗದವನ ಬೇಡಿಕೆ (5)
11. ಭುವಿಯನ್ನೂ, ಹೆಣ್ಣನ್ನೂ ಹಿಡಿದಿಡುವ ಶಕ್ತಿ (2)
13. ಇವು ಮೂರೂ ಇರದವನು ಊರಿಗೇ ದೊಡ್ಡವನು (8)
16. ಕಳ್ಳನಿಗೂ ಪ್ರಿಯವಾದ ಹೆಂಡ (2)
17. ವಿವಾಹ ಕೊಂಚ ಏರುಪೇರಾದರೆ .... (3)

ಮೇಲಿನಿಂದ ಕೆಳಕ್ಕೆ

2. ವಾರದ ಮಧ್ಯೆ, ಕಚೇರಿಯ ಕೊನೆಯಲ್ಲಿ ಬರುವ ಅನಿವಾರ್ಯ ಪದ (3)
3. ಕಸ್ತೂರಿ ಬರೆದ ಅನರ್ಥದ .... (2)
4. ಲಕ್ಷಾಂತರ ಜನ ಒಬ್ಬ ಅಯೋಗ್ಯನನ್ನು ಆರಿಸುವ ಪ್ರಕ್ರಿಯೆ (4)
5. ಕೆಟ್ಟವರ (3)
6. ತಿಂಮನ ತಂದೆ ತಾಯಿಯನ್ನು ಕಂಡ ಬಗೆ (2)
7. ಮೂರು ಅಡಿ ಅಗಲದ ಮುಖ ಉಳ್ಳವನು (4)
8. ವಕೀಲನಿಗೆ ಬೇಕೇ ಬೇಕಾದ ದಾರ (2)
12. ಪರೀಕ್ಷೆಯ ಸಮಯದಲ್ಲಿ ಮನಸ್ಕೆ ಸಿಗದ ವಸ್ತು (3)
13. ತಿಂಗಳ ಪತ್ರಿಕೆ, ತಿಥಿಯೂ ಹೌದು (3)
14. ಜಗಳ ತಂದುಹಾಕುವವರ ಗುರು (3)
15. ತಾವರೆಯ ತವರು (3)

ಪದಬಂಧದ ಸರಿಯುತ್ತರಗಳು 38ನೇ ಪುಟದಲ್ಲಿದೆ

ವಿದ್ಯಮಾನಗಳು

- ಕು.ಕ.

ರಾಜಕಾರಣಕ್ಕೆ ಸಂಬಂಧಿಸಿದವರೆಲ್ಲಾ ಈಗ ಬ್ಯುಸಿನೋ ಬ್ಯುಸಿ. ರಾಷ್ಟ್ರಮಟ್ಟದ, ರಾಜ್ಯಮಟ್ಟದ, ಜಿಲ್ಲಾ, ತಾಲ್ಲೂಕು ಹಂತದ ನಾಯಕರುಗಳಿಗೆಲ್ಲಾ ತಮ್ಮ ಕಡೆಯ ಅಭ್ಯರ್ಥಿಗೆ ಟಿಕೆಟ್ ಸಿಗುವಂತೆ ಮಾಡುವ, ಟಿಕೆಟ್ ಸಿಕ್ಕಿದವರನ್ನು ಗೆಲ್ಲಿಸುವ ಕಾಯಕದಲ್ಲಿ ಕ್ಷಣವೂ ಪುರುಸೊತ್ತಿಲ್ಲ. ಈ ರಾಜಕೀಯದ ನಡುವೆ ಒಬ್ಬರಿಗೆ ಮಾತ್ರ ಬಿಡುವೋ ಬಿಡುವು. ಅವರು ಯಾರು ನಿಮಗೆ ಗೊತ್ತು. ದೇಶದ ನಂಬರ್ ಒನ್ ಪ್ರಧಾನಿ ಮಮೋಸಿಂ ಈ ಅದೃಷ್ಟಶಾಲಿ. ಹಿಂದೆ ದ್ವಾಪರ ಯುಗದಲ್ಲಿ ಸಮಾಧಿ ಸ್ಥಿತಿಯಲ್ಲಿದ್ದ ಕೇಶವನನ್ನು ಸ್ಥಿತಪ್ರಜ್ಞ ಎಂದರೆ ಯಾರು? ಅವನ ಲಕ್ಷಣಗಳೇನು ಎಂದು ಅರ್ಜುನ ಕೇಳಿದನಂತೆ. ಶ್ರೀ ಕೃಷ್ಣಪರಮಾತ್ಮನಿಗೆ ಈ ಪ್ರಶ್ನೆಗೆ ಉತ್ತರ ಕೊಡಲು ಒಂದು ಇಡೀ ಅಧ್ಯಾಯವೇ ಬೇಕಾಯಿತು. ಈಗೇನಾದರೂ ಕೃಷ್ಣನನ್ನು ಅರ್ಜುನ ಈ ಪ್ರಶ್ನೆ ಕೇಳಿದ್ದರೆ, ದೆಹಲಿ ನಗರದಲ್ಲಿ ರೇಸ್‌ಕೋರ್ಸ್ ರಸ್ತೆಯಲ್ಲಿ ಹೋಗಿ ನೋಡು ಎಂದು ಸುಲಭವಾಗಿ ಉತ್ತರಿಸಬಹುದಾಗಿತ್ತು! ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ 180 ಸೀಟ್ ದೊರೆತು ಸೋನಿಯಾ ಗಾಂಧಿ ನೀವೇ ಇನ್ನಷ್ಟು ದಿನ ಪ್ರಧಾನಿಯಾಗಿರಿ ಎಂದರೆ ಮಮೋಸಿಂ ಸಂತೋಷದಿಂದ ತಮ್ಮ ಹುದ್ದೆಯಲ್ಲಿ ಮುಂದುವರಿಯುತ್ತಾರೆ. ಹಾಗಾಗದಿದ್ದರೆ ಅಷ್ಟೇ ಸಂತೋಷದಿಂದ ಲ್ಯುಟನ್ ಮಹಾಶಯನ ದೆಹಲಿಯ ಇನ್ನೊಂದು ಬಂಗಲೆಗೆ ಗಂಟುಮೂಟೆ ಕಟ್ಟಿಕೊಂಡು ಹೋಗುತ್ತಾರೆ. ನಿರ್ಲಿಪ್ತತೆಗೆ ಎಂತಹ ಉದಾಹರಣೆ!

★★★

ಪ್ರಧಾನ ಮಂತ್ರಿ ಸ್ಥಾನ ಮಮೋಸಿಂ ಅವರಿಗೆ ಬಯಸದೇ ಬಂದ ಭಾಗ್ಯ. ಈಗ ಪಾಕಿಸ್ತಾನದಲ್ಲಿರುವ ಪೂರ್ವ ಪಂಜಾಬಿನಲ್ಲಿ ಹುಟ್ಟಿದ ಸಿಂಗ್ ಸಾಹೇಬರಿಗೆ ತಮ್ಮದೇ ಆದ ಊರಿಲ್ಲ. ನರಸಿಂಹರಾಯರ ಮಂತ್ರಿಮಂಡಲದಲ್ಲಿ ಹಣಕಾಸು ಮಂತ್ರಿಗಳಾದ ಮೇಲೆ ಅವರು ಅಸ್ಸಾಮಿನಿಂದ ರಾಜ್ಯಸಭೆಯ ಸದಸ್ಯರಾಗಬೇಕಾಯಿತು. ಅತ್ಯಂತ ಹೆಚ್ಚು cosmopolitan ಎನಿಸಿಕೊಂಡ ದಕ್ಷಿಣ ದೆಹಲಿಯಿಂದ ಲೋಕಸಭೆಗೆ ಸ್ಪರ್ಧಿಸಿ ಸೋತರು. ಈಗಿನ ಇನ್ನೊಂದು ಪ್ರಧಾನಿ ಅಭ್ಯರ್ಥಿ ಶರದ್ ಪವಾರ್. ಮರಾಠಾ, ಮರಾಠಿ, ಸಕ್ಕರೆ ಕಾರ್ಖಾನೆ - ಒಂದು ಜಾತಿ, ಒಂದು ಭಾಷೆ, ಒಂದು ಲಾಬಿ ಇವರ ಐಡೆಂಟಿಟಿ - ಅಸ್ಮಿತಾ. ತಮ್ಮ ಭಾಷೆಯ ತಮ್ಮ ಜಾತಿಯ, ತಮ್ಮ ಪ್ರದೇಶದ ಜನರಿಗಾಗಿ ಅವರು ಪ್ರಧಾನಿಯಾಗಲು ಸಿದ್ಧರಿದ್ದಾರೆ. ಈ ಮಹಾ ಕಾರ್ಯಕ್ಕಾಗಿ ಒಂದು ಧರ್ಮವನ್ನು ದ್ವೇಷಿಸುವ ಬಾಲಾಠಾಕ್ರ, ಉತ್ತರ ಭಾರತೀಯರನ್ನು ಹೊಡೆದೋಡಿಸಲು ಬದ್ಧ ಕಂಕಣರಾದ ರಾಜ್ ಠಾಕ್ರೆ ಅವರುಗಳೊಂದಿಗೆ ಇವರ ಸಖ್ಯ. ಆದರೆ ಇವರ ಪಕ್ಷದ ಹೆಸರು ಮಾತ್ರ ರಾಷ್ಟ್ರೀಯವಾದಿ ಕಾಂಗ್ರೆಸ್!

★★★

ನಮ್ಮ ರಾಜಕೀಯದಲ್ಲಿ ಪ್ರದೇಶ, ಜಾತಿ, ಉಪಜಾತಿ, ಭಾಷೆಗಳೇ ಮುಖ್ಯವಾದ

ಪವಾರ್, ದೇವೇಗೌಡ, ಲಾಲುಪ್ರಸಾದ್, ಮುಲ್ಯಾಂಸಿಂಗ್ ಮೊದಲಾದ ಸ್ವಾರ್ಥಿ ಪುರುಷನಾಯಕರುಗಳೇ ತುಂಬಿದ್ದರೂ, ನಮಗೆಲ್ಲಾ ಏಕೋ ಏನೋ ನಮ್ಮ ಮಹಿಳಾ ನಾಯಕಿಯರ ಬಗ್ಗೆ ವಿಶೇಷ ಆತಂಕ, ಭಯ.

ಮೇ ಹದಿನಾರರ ಮತಗಣನೆಯ ನಂತರದ ವಿದ್ಯಮಾನಗಳಲ್ಲಿ ಮೂವರು ದೇವಿಯರ ಪಾತ್ರ ಬಹಳ ಮುಖ್ಯವಾಗುತ್ತದಂತೆ. ಮೊದಲನೆಯ ದೇವಿ, ದೇವಿಯರಲ್ಲಿ ಮಹಾರಾಣಿ ಮಾನ್ಯವರ್ ಕಾನ್ಶೀರಾಮ್ ಅವರ ಪಟ್ಟ ಶಿಷ್ಯೆ ಕುಮಾರಿ ಮಾಯಾವತಿ. ಇವರ ಆನೆಯ ಪಕ್ಷಕ್ಕೆ ಯುಪಿಯಲ್ಲಿ ಐವತ್ತು ಉಳಿದ ರಾಜ್ಯಗಳಲ್ಲಿ ಒಟ್ಟು 20 ಸೀಟ್ ಸಿಕ್ಕರೆ ಇವರೇ ಭಾವೀ ಪ್ರಧಾನಿ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ತಮ್ಮ ಶಕ್ತಿಯ ಪ್ರದರ್ಶನ ಮಾಡಿದ್ದಾರೆ. ಅವರಿಗೂ 25-30 ಎಂಪಿಗಳ ಬೆಂಬಲ ಸಿಗಬಹುದು ಎನ್ನುವುದು ನಿರೀಕ್ಷೆ. ಹಾಗೇನಾದರೂ ಆದರೆ ಸಿಪಿಎಂ ಬೆನ್ನು ಮುರಿಯುತ್ತದೆ; ಮೂರನೆಯ ಫ್ರಂಟ್ ಬಡವಾಗುತ್ತದೆ. ತಮಿಳುನಾಡು ರಾಜಕೀಯದಲ್ಲಿ ಆಲ್ ಆರ್ ನನ್ ಎಲ್ಲಾ ಅಥವಾ ಏನೂ ಇಲ್ಲ ಎನ್ನುವುದು ನಿಯಮವಂತೆ. ಈ ಬಾರಿ ಪುರಟ್ಚಿ ಪಲ್ಲಿ ಜಯಲಲಿತ ತಾರೆಗಳು ಹೊಳೆಯುತ್ತಿವೆ ಎಂದು ನೋಡಿದವರು ಹೇಳುತ್ತಿದ್ದಾರೆ. ಈಕೆಗೆ ಈಗಾಗಲೇ ಕೇಂದ್ರದಲ್ಲಿ ಒಂದು ಸರ್ಕಾರವನ್ನು ಉರುಳಿಸಿದ ಖ್ಯಾತಿ ಅಥವಾ ಕುಖ್ಯಾತಿಯಿದೆ. ಈ ಮೂವರು ದೇವಿಯವರು ಏನು ಮಾಡುತ್ತಾರೆ ಏನು ಮಾಡುವುದಿಲ್ಲ ಹೇಳುವುದು ಕಷ್ಟ. ಆದರೆ ಒಂದು ಸಮಾಧಾನ ಈ ಮೂವರೂ ಒಟ್ಟಿಗೆ ಸೇರುವ ಸಾಧ್ಯತೆ ಇಲ್ಲವೇ ಇಲ್ಲ. ಒಟ್ಟು ಮೊತ್ತವಾಗಿ ಇವರಿಂದ ಆಗಬಹುದಾದ ಹಾನಿಯ ಲೆಕ್ಕ ಮಾಡಬೇಕಾಗಿಲ್ಲ. ಆದರೆ ವೈಯಕ್ತಿಕವಾಗಿ ಒಬ್ಬೊಬ್ಬರೂ ಮಾಡಬಲ್ಲ ಹಾನಿಯೇನೂ ಕಡಿಮೆಯಿಲ್ಲ ಎನ್ನುವುದು ನಮ್ಮೆಲ್ಲರ ಆತಂಕದ ಕಾರಣ.

★★★

ಸಮಾಜವಾದಿ ಪಕ್ಷದ ಸುಪ್ರಿಮೋ ಮುಲ್ಯಾಂಸಿಂಗ್ ಉತ್ತರ ಪ್ರದೇಶದಲ್ಲಿ ಮಿತ್ರಪಕ್ಷ ಕಾಂಗ್ರೆಸ್‌ಗೆ ಎಂಬತ್ತರಲ್ಲಿ ಆರು ಸ್ಥಾನಗಳನ್ನು ಬಿಟ್ಟುಕೊಟ್ಟಿದ್ದಾರೆ. ಪಕ್ಕದ ಬಿಹಾರದಲ್ಲಿ ಲಾಲು-ಪಾಸ್ವಾನ್ ಜೋಡಿ ಯುಪಿಎ ನಾಯಕ ಪಕ್ಷಕ್ಕೆ ನಲ್ವತ್ತರಲ್ಲಿ ಮೂರು, ಹೌದು ಬರಾಬ್ಬರಿ ಮೂರು, ಸೀಟುಗಳನ್ನು ಬಿಟ್ಟುಕೊಟ್ಟಿದ್ದಾರೆ. ಇದು ಕಾಂಗ್ರೆಸ್ ಪಕ್ಷದ winnability - ಗೆಲ್ಲುವ ಶಕ್ತಿಯ ಬಗ್ಗೆ ಮಿತ್ರರರ ನಿರೀಕ್ಷೆ! ಇಂತಹ ಮಿತ್ರರಿರುವಾಗ ವೈರಿಗಳು ಇನ್ನೇಕೆ?

★★★

ಈಗ ಎರಡು ವರ್ಷದವರೆಗೂ ಭಾರತೀಯ ಕ್ರಿಕೆಟ್ ತಂಡ ಎರಡೋ - ಮೂರೋ ವರ್ಷಕ್ಕೆ ಒಂದು ಸರಣಿ ವಿಜಯ, ಆರು ತಿಂಗಳಿಗೋ ವರ್ಷಕ್ಕೋ ಒಂದು ಪಂದ್ಯದ ದಾಖಲೆ ಇಟ್ಟುಕೊಂಡಿತ್ತು. ನಮ್ಮ ತಂಡ ಗೆದ್ದಾಗ ಅಪಾರವಾಗಿ ಖುಷಿ ಪಡುತ್ತಿದ್ದೆವು. ಈ ವಿಜಯವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದೆವು. ಈಗ ಸೆಹ್ವಾಗ್, ಸಚಿನ್, ಗಂಭೀರ್, ಯುವರಾಜ್, ಧೋನಿಯಂತಹ ಆಟಗಾರರಿಂದ ಎಲ್ಲೆಲ್ಲೂ ವಿಜಯ ಪ್ರತಿಪಂದ್ಯದಲ್ಲೂ ಒಂದೊಂದು ಮಹಾಸಾಧನೆ. ಆದರೆ ಈಗ ಏಕೋ ಇಂತಹ ಗೆಲುವುಗಳು ತೀರಾ ಸಪ್ಪೆಯೆನಿಸುತ್ತಿವೆ. ಇದನ್ನೇ ಏನೋ ಹಿರಿಯರು ಹೇಳಿದ್ದು ಅಮೃತವೂ ಹೆಚ್ಚಾದಾಗ ವಿಷವೆನಿಸುತ್ತದೆ ಎಂದು.

❖

ತುಂತುರು

- ದಂನಆ

- A man's health can be judged by what he takes two at a time - pills or stairs.
- ಹುಟ್ಟಿದ ದಿನದಿಂದಲೇ ವೃದ್ಧಾಪ್ಯ ಪ್ರಾರಂಭವಾಗುತ್ತದೆ.
- ಆಂಟಿಯರೆಲ್ಲ ಆ್ಯಂಟಿ-ಏಜಿಂಗ್ ಚಿಕಿತ್ಸೆಗೊಳಗಾಗುತ್ತಿದ್ದಾರೆ.
- ಆನೆ ಕದ್ದರೆ ಕಳ್ಳ. ಆನೆ ದಂತ ಕದ್ದರೆ ಗೌರವಾನ್ವಿತ ಕಳ್ಳ.
- Adults are always asking little kids what they want to be when they grow up because they are looking for ideas.
- ತಾಳಿ ಕಟ್ಟಿದವನು ತಾಳಿಕೊಂಡೇ ಬಾಳಬೇಕು; ಇಲ್ಲದಿದ್ದರೆ ಮನೆ ತಾಲಿಬಾನ್ ಆಗುವ ಸಾಧ್ಯತೆಗಳಿರುತ್ತವೆ.
- ಯಡ್ಯೂರಪ್ಪ ಮುಖ್ಯಮಂತ್ರಿಯಾದದ್ದೇ ಆದದ್ದು ಇಡೀ ವಿಧಾನಸೌಧ ಶೋಭಾಯಮಾನವಾಗಿದೆ ಎಂಬುದು ಹಳೆ ಸುದ್ದಿ.
- Words must be weighed, not counted.
- 15 ದಿನಗಳ ಪ್ರಾಜೆಕ್ಟ್ ವರ್ಕ್ ಕೆಲಸದ ಮೇಲೆ ಬೆಂಗಳೂರಿನಿಂದ ವಿದೇಶಕ್ಕೆ ಹಾರುವ ಶಾಖಾಹಾರಿ ಕನ್ನಡಿಗರ ಸೂಟ್‌ಕೇಸ್‌ನಲ್ಲಿ ಕಡ್ಡಾಯವಾಗಿ ಇರಬೇಕಾದದ್ದೆಂದರೆ ಒಂದು, ಬ್ಯುಸಿನೆಸ್ ವೀಸಾ ಎರಡು, ಬಿಸಿಬೇಳೆ ಬಾತ್ ರೆಡಿ ಮಿಕ್ಸ್.
- When you read lips do you hear a voice in the head?
- ಮಧ್ಯ ವಯಸ್ಸು ಎಂದರೆ ದೇಹದ ಮಧ್ಯಭಾಗ ಎದ್ದು ಕಾಣುವಂತೆ ತೋರಲು ಶುರುವಾದಾಗ.
- ಅನ್ನ ಸಾಂಬಾರ್ ಅಷ್ಟು ರುಚಿಕರ ಎಂದಿದ್ದರೆ ರೋಟಿದಾಲ್‌ಗೆ ಮಾರುಕಟ್ಟೆಯೇ ಇರುತ್ತಿರಲಿಲ್ಲ ದಕ್ಷಿಣ ಭಾರತದಲ್ಲಿ.
- A conclusion is the place where you got tired of thinking.
- ನೀವು ಜನಸಂದಣಿಯನ್ನೇ ಹಿಂಬಾಲಿಸಿಕೊಂಡು ಹೋದರೆ ತಲುಪುವುದು exit gate ಮಾತ್ರ.
- Cricket is recession proof.
- ಸಮಸ್ಯೆ ಇದೆ ಎಂದು ಒಪ್ಪಿಕೊಂಡರೆ ಅದು ಅದನ್ನು ಬಗೆಹರಿಸುವತ್ತ ಇಟ್ಟ ಮೊದಲ ಹೆಜ್ಜೆ ಆಗಿರುತ್ತದೆ.
- ನೀವು ದೇವರೊಂದಿಗೆ ಮಾತನಾಡಿದರೆ ಅದನ್ನು ಭಕ್ತಿ ಎನ್ನುತ್ತಾರೆ. ಅದೇ ದೇವರು ನನ್ನೊಂದಿಗೆ ಮಾತನಾಡಿದ ಎಂದರೆ ಹುಚ್ಚು ಎನ್ನುತ್ತಾರೆ.
- 'ನೆನಪಿನ ಶಕ್ತಿ ಹೆಚ್ಚಿಸಿಕೊಳ್ಳುವುದು ಹೇಗೆ?' ಎಂಬ ಪುಸ್ತಕ ಎಲ್ಲಿಟ್ಟೆ ಎಂದು ಹುಡುಕತೊಡಗಿದರೆ......

ಹುರುಳಿ ಕಟ್ಟು.....

ಹೇಳಿಕೊಡದೇ ಬರೋ ವಿದ್ಯೆ.....

- ಎಚ್ . ಗೋಪಾಲಕೃಷ್ಣ

ಮೊನ್ನೆ ಮಾರ್ಚ್ 14 ರಂದು ಹಿರಿಯ ಹೋರಾಟಗಾರರು, ಗಾಂಧೀ ವಾದಿಗಳೂ, ಸರ್ವೋದಯ ನಾಯಕರೂ ಭೂದಾನ ಚಳವಳಿಯ ಮುಂಚೂಣಿಯಲ್ಲಿದ್ದವರೂ ಆಗಿದ್ದ ಶ್ರೀ ಸತ್ಯವ್ರತ ಅವರು ನಮ್ಮನ್ನು ಅಗಲಿದರು. ನನಗೆ ಅತ್ಯಂತ ಆಪ್ತರಾಗಿದ್ದ ಅವರ ಜೀವನದ ಕೆಲವು ಅಂಶಗಳು ಹಲವರ ಜೀವನದಲ್ಲಿ ದಾರಿದೀಪವಾಗಿತ್ತು.

1975 ರಲ್ಲಿ ಜೆ ಪಿ ಚಳವಳಿ ಹುಟ್ಟಿದ ಕಾಲದಲ್ಲಿ ದೇಶದ ನವನಿರ್ಮಾಣದ ಕನಸು ಹೊತ್ತ ಹಲವು ಸಹಸ್ರ ಯುವಜನತೆಗೆ ಮಾರ್ಗದರ್ಶಕರು ಎಂದೇ ಇವರು ಪರಿಚಿತರಾಗಿದ್ದು. ಅವರಿಗೆ ನೇರವಾಗಿ ಸಂಬಂಧಿಸಿದಂತೆ ಹಲವು ನೆನಪುಗಳು ನನ್ನನ್ನು ಕಾಡುತ್ತವೆ.

ಕಾಫಿ ಎಂದರೆ ಶ್ರೀ ಸತ್ಯವ್ರತ ಅವರು ಬಾಯಿ ಬಾಯಿ ಬಿಡುತ್ತಿದ್ದರಂತೆ. ಕಾಫಿ ವಾಸನೆ ಬಂದರೆ ಸಾಕು ಇವರ ಯೋಚನೆ ಆ ಕಡೆಗೆ ಹರಿಯುತ್ತಿತ್ತಂತೆ. ವಿನೋಬಾ ಅವರು ಕರ್ನಾಟಕ ಪ್ರವಾಸ ಕೈಗೊಂಡಾಗ ಅವರ ಭಾಷಣಗಳನ್ನು ಶ್ರೀ ಸತ್ಯವ್ರತ ಅವರು ತರ್ಜುಮೆ ಮಾಡುತ್ತಿದ್ದರು. ವಿನೋಬಾ ಒಂದು ಮೈಕಿನ ಮುಂದೆ ಇದ್ದರೆ ಅವರ ಪಕ್ಕದಲ್ಲಿಯೇ ಇವರೂ ಒಂದು ಮೈಕು ಹಿಡಿದು ಸರಾಗವಾಗಿ ವಿನೋಬಾ ಹಿಂದಿಯಲ್ಲಿ ಹೇಳಿದ್ದನ್ನು ಇವರು ಕನ್ನಡದಲ್ಲಿ ಹೇಳುತ್ತಾ ಭಾಷಣ ಸಾಗುತ್ತಿತ್ತು.

ಶಿವಮೊಗ್ಗದಲ್ಲಿ ಒಂದು ಸಭೆ. ಭಾಷಣವಿನ್ನೂ ಆರಂಭವಾಗಿರಲಿಲ್ಲ. ಶ್ರೀ ಸತ್ಯವ್ರತ ಅವರ ಮೂಗಿಗೆ ಕಾಫಿ ವಾಸನೆ ಹೊಡೆಯಿತು. ಸರಸರ ಅಲ್ಲಿಗೆ ನಡೆದರು, ಕಾಫಿಯನ್ನು ಕುಡಿದು ವೇದಿಕೆ ಮೇಲೆ ಬಂದರು. ವಿನೋಬಾ ಪಕ್ಕದಲ್ಲಿ ನಿಂತರು. ಇವರು ಕುಡಿದಿದ್ದ ಕಾಫಿ ವಾಸನೆ ವಿನೋಬಾ ಅವರಿಗೆ-ಅವರ ಮೂಗಿಗೆ ಬಡೀತಂತೆ ! ವಿನೋಬಾ ಸಾಮಾನ್ಯವಾಗಿ ಕೋಪ ತಾಪಗಳಿಂದ ದೂರವಿದ್ದವರು. ಕಾಫಿ ವಾಸನೆ ಮೂಗಿಗೆ ಅಡರಿದ ಕೂಡಲೇ ಅವರ ದಪ್ಪನೆಯ ಕನ್ನಡಕದ ಅಂಚಿನಿಂದ ಇವರೆಡೆಗೆ ಕೆಕ್ಕರಿಸಿ ನೋಡಿದರಂತೆ. ವಿನೋಬಾ ಅವರಿಗೆ ಕೋಪ ಬಂದಿರುವುದು ಇವರಿಗೆ ತಿಳೀತು ಮತ್ತು ಕೋಪದ ಕಾರಣ ಕಾಫಿ ಅಂತಲೂ ವೇದ್ಯವಾಗಿತ್ತು. ಅವತ್ತಿನಿಂದ ಕಾಫಿ ಕುಡೀಬಾರದು ಅಂತ ನಿರ್ಧಾರ ತೆಗೆದುಕೊಂಡರು. ಮತ್ತೆಂದೂ ಅವರು ಕಾಫಿಯನ್ನ ಮುಟ್ಟಲೇ ಇಲ್ಲ.

ಶ್ರೀ ಸತ್ಯವ್ರತ ಅವರ ಬಳಿ ತುಂಬಾ ಸದರ ಇದ್ದ ನಾನು ಅವರು ಈ ಪ್ರಸಂಗ ವಿವರಿಸಿದ ಕೂಡಲೇ ಹೇಳಿದ್ದು - ನಾನೇನಾದರೂ ವಿನೋಬಾ ಭಾಷಣವನ್ನು ತರ್ಜುಮೆ ಮಾಡುವವನಾಗಿದ್ದರೆ ಏನು ಮಾಡ್ತಿದ್ದೆ ಗೊತ್ತಾ?

ಏನು ಮಾಡ್ತಿದ್ರೀ?

ನಾಲ್ಕು ಗಣೇಶ ಬೀಡಿ ಸೇದಿಬಿಟ್ಟು ಭಾಷಣಮಾಡಿ ಸಾರ, ತರ್ಜುಮೆಗೆ ರೆಡಿ ಅನ್ನುತ್ತಿದ್ದೆ-

ಯಾವ ವಾಸನೆ ನಿಮಗಿಷ್ಟ ಎಂದು ಕೇಳುತ್ತಿದ್ದೆ -

ಬೀಡಿ ವಾಸನೆಗಿಂತಲೂ ಕಾಫಿ ವಾಸನೆ ಚೆನ್ನಿರುತ್ತೆ ಅಂತ ಅವರೇ ಒಪ್ಕೋಬೇಕು ಹಾಗೆ ಮಾಡ್ತಿದ್ದೆ. ನನ್ನ ಪ್ರಕಾರ ಅವರದ್ದು ಒಂದು ಹಾರ್ಟಿ ಲಾಫ್ ಇದಕ್ಕೆ ಅಷ್ಟೇ.

ಇವರು ಕಾಫಿ ಒಂದನ್ನೇ ಅಲ್ಲ ಹೀಗೆ ಬಿಟ್ಟಿದ್ದು. ಸಕ್ಕರೆ ತಯಾರಾಗಬೇಕಾದರೆ ಅದರ ಸಂಸ್ಕರಣ ವಿಧಾನದಲ್ಲಿ ಪ್ರಾಣಿಗಳ ಮೂಳೆ ಉಪಯೋಗಿಸುತ್ತಾರೆ, ಅಹಿಂಸೆಯನ್ನು ಬೋಧಿಸುವ ನಾವು ಪ್ರಾಣಿ ಹಿಂಸೆಯನ್ನು ಒಪ್ಪಬಾರದು ಅಂತ ಪ್ರಾಣಿ ದಯಾ ಸಂಘದವರು ಪತ್ರಿಕಾ ಹೇಳಿಕೆ ಕೊಟ್ಟಿದ್ರು. ಇವರು ಕೂಡಲೇ ಸಕ್ಕರೆ ವರ್ಜಿಸಿ ಬಿಟ್ಟರು !

ಇಡೀ ಪ್ರಪಂಚದಲ್ಲಿ ಮನುಷ್ಯ ಪ್ರಾಣಿಯೊಂದೇ ಬೆಳೆದು ದೊಡ್ಡವಾದ ನಂತರವೂ ಹಾಲು ಹೀರೋದು, ಅದೂ ಹಸುವಿನ ಕರು ಕುಡೀಬೇಕಾದ ಹಾಲನ್ನು ನಾವು ಕುಡೀತೀವಿ, ಮೊಸರು ಮಜ್ಜಿಗೆ ಮಾಡಿಕೊಂಡು ಉಪಯೋಗಿಸ್ತೀವಿ ಅಂತ ಒಂದುಸಲ ಇವರ ಜತೆ ಮಾತಿಗೆ ಕುಳಿತಾಗ ನನ್ನ ವಾಗ್ಲಹರಿ ಹರಿಸಿದೆ. ಅದಕ್ಕೇ ಅದನೆಲ್ಲವನ್ನೂ ನಾನು ಸೇವಿಸೋದೇ ಇಲ್ಲ ಅಂತ ಮುಗ್ಧವಾಗಿ ಅವರು ಹೇಳಿದರು !

ಇದು ಅವರ ಒಂದು ಮುಖವಾದರೆ ಸರ್ವೋದಯ ಸಂಘಟನೆ, ಮದ್ಯಪಾನ ವಿರೋಧೀ ಚಳವಳಿ, ಸ್ವಾತಂತ್ರ್ಯ ಹೋರಾಟ, ಗೋರಕ್ಷಣೆ.... ಹೀಗೆ ಅವರ ಹೋರಾಟದ ವೈವಿಧ್ಯತೆ ಕೂಡ ವಿಸ್ತಾರವಾದದ್ದು. ಅವರ ಒಂದೊಂದು ಹೋರಾಟವನ್ನೂ ನಾವು ತಮಾಷಿಸಿಕೊಂಡೇ ಇದ್ದವರು. ಮದ್ಯಪಾನ ವಿರೋಧೀ ಚಳವಳಿ ಸಂಬಂಧ ಅವರ ಜತೆ ನಡೆದ ಮಾತುಕತೆಯ ಒಂದು ತುಣುಕು-ಹೆಂಡ ಕುಡಿಯೋದು ಬೇಡ ಅಂತೀರೀ, ಸರಿ ನೀವು ಹೇಳಿದ್ರಿ ಅಂತ ಇಡೀ ಪ್ರಪಂಚದಲ್ಲಿರೋ ಎಲ್ಲರೂ ಹೆಂಡ ಕುಡಿಯೋದನ್ನ ನಿಲ್ಲಿಸಿಬಿಡ್ತಾರೆ ಅಂತ ಇಟ್ಕೊಳ್ಳೋಣ. ಲಿಕ್ಕರ್ ಇಂಡಸ್ಟ್ರಿ ನಂಬಿಕೊಂಡು ಎಷ್ಟು ಕೋಟಿ ಜನ ಬದುಕ್ತಿದಾರೆ ಗೊತ್ತಾ? ಎಷ್ಟು ಸಂಸಾರಗಳು ಇದರ ಮೇಲೆ ದಿಪೆಂಡ್ ಆಗಿವೆ ಗೊತ್ತಾ? ನಾಳೆ ಅವರಿಗೆಲ್ಲಾ ಕೆಲಸವೂ ಇಲ್ಲ, ಹೊಟ್ಟೇಗೂ ಇಲ್ಲ ಹಾಗಾಗುತ್ತೆ. ಅವರೆಲ್ಲಾ ಆಗ ಏನು ಮಾಡಬೇಕು? ಯಾರೂ ಹೇಳಿಕೊಡದೇ ಬರೋದು ಒಂದೇ ಒಂದು ವಿದ್ಯೆ-ಕಳ್ಳತನ. ಇವರೆಲ್ಲಾ ಕಳ್ಳತನಕ್ಕೆ ಇಳೀತಾರೆ ಅಂತ ಇಟ್ಕೊಳ್ಳಿ, ನಿಮ್ಮನೇಗೇ ಯಾರೂ ಕದಿಯೋಕ್ಕೆ ಬರುಲ್ಲ-ನಿಮ್ಮನೇಲಿ ಏನೂ ಸಿಗುಲ್ಲ! ಆದರೆ ನನ್ನ ಮನೇಗೆ ಬರ್ತಾರಲ್ಲಾ?

ಆಗ ನಾನು ಅವರನ್ನೆಲ್ಲ ಗುಂಡಿಟ್ಟು ಕೊಲ್ಲಬೇಕಾಗುತ್ತೆ. ಅಂದರೆ ನೀವು ಕೊಲೆಗಾರರನ್ನು ಸೃಷ್ಟಿ ಮಾಡ್ತೀರಿ... ಏನೋ ಮಾಡೋದಿಕ್ಕೆ ಹೋಗಿ ಒಂದು ದುರಂತ ಕ್ರಿಯೇಟ್ ಮಾಡ್ತೀರಿ... ಅದರಿಂದ ನಾನು ಹೇಳೋದು ಮದ್ಯಪಾನ ವಿರೋಧೀ ಚಳವಳಿಯೇ ಒಂದು ರೀತಿಯಲ್ಲಿ ರಾಂಗ್ ಕನ್ಸೆಪ್ಟ್.... ಈ ರೀತಿಯ ಲಾಜಿಕ್ಕಿಗೆ ಅವರದು ಒಂದು ಮುಗುಳ್ನಗೆ ಮಾತ್ರಾ!

ಇಂಥಹ ಪ್ರಾಮಾಣಿಕರು ಅರವತ್ತು ವರ್ಷ ಬೆಂಗಳೂರಿನಲ್ಲಿಯೇ ಇದ್ದರೂ ಒಂದು ಮನೆ ಮಾಡಿಕೊಳ್ಳಲಿಲ್ಲ, ಒಂದು ಸೈಟು ಮಾಡಿಕೊಳ್ಳಲಿಲ್ಲ, ಅದೆಲ್ಲಕ್ಕಿಂತಲೂ ಹೆಚ್ಚಾಗಿ ನನಗೆ ಈ ಸವಲತ್ತುಗಳು ನಾನು ದೇಶಕ್ಕಾಗಿ ಮಾಡಿದ ತ್ಯಾಗಕ್ಕೆ ಪ್ರತಿಫಲವಾಗಿ ಬೇಕು ಅಂತ ಯಾವ ಪುಢಾರಿ ಮುಂದೆಯೂ ನಿಲ್ಲಲಿಲ್ಲ! ಇಂಥಹವರನ್ನು ನೆನೆದಾಗ ಅರಿವಿಲ್ಲದ ಹಾಗೆ ಕಣ್ಣಂಚಿನಲ್ಲಿ ಒಂದು ಹನಿ ಸುರಿಯುತ್ತೆ ಇಂಥಹ ಆದರ್ಶಗಳು ಮಾದರಿಯಾಗಲಿ ಅನಿಸುತ್ತೆ....!

❖

ಹರನಾಥನ ಹರಿಕಥೆ

- ಇಸ್ಮಾಯಿಲ್

ಹೊಸದಾಗಿ ಹೋಗಿರುವ ಬ್ರಾಂಚ್‌ನಲ್ಲಿ ಬುಡ ಊರುವುದು ಅಷ್ಟು ಸುಲಭದ ಕೆಲಸವಲ್ಲ. ಅದರಲ್ಲೂ ಮ್ಯಾನೇಜರ್ ಆಗಿ ಕೂರುವುದು. ವಯಸ್ಸಿನಲ್ಲಿ, ಸರ್ವೀಸ್‌ನಲ್ಲಿ, ನನಗಿಂತ ಹಿರಿಯರು ಇದ್ದಾರೆ. ಎಲ್ಲವೂ ಹೊಸ ವಾತಾವರಣ. ಸಿಬ್ಬಂದಿಗಳೂ ಅಷ್ಟು ಹಿಂದಿನ ಪರಿಚಯವಿಲ್ಲ, ಪರಿಚಯವಿದ್ದರೂ ಬದಲಾಗಿರುತ್ತವೆ ಅಥವಾ ನಾನೇ ಬದಲಾಗಿರುತ್ತೇನೆ ಎಂದು ಅವರು ಭಾವಿಸಿರಬಹುದು. ಇನ್ನು ಗ್ರಾಹಕರೆಲ್ಲಾ ಹೊಸಬರೆ. ಆದರೆ ಮನುಷ್ಯ ಎಂಬ ಪ್ರಾಣಿ ಯಾವ ಪರಿಸರದಲ್ಲೂ ಬೇಗ ಹೊಂದಿಕೊಳ್ಳುತ್ತಾನೆ ಎಂದು ಎಲ್ಲೋ ಓದಿದ ನೆನಪಿನಿಂದ, ಧೈರ್ಯದಿಂದ ರಿಪೋರ್ಟ್ ಮಾಡಿಕೊಂಡೆ. ನನ್ನ ಸೀನಿಯರ್ ಮ್ಯಾನೇಜರ್ ರಜವಿದ್ದರಿಂದ ಎಲ್ಲಾ ಜವಾಬ್ದಾರಿ ಹೊರುವ ಕೆಲಸ ಬೇರೆ. ನಾನು ಮಂಗಳವಾರ ಹೊಸ ಬ್ರಾಂಚ್‌ಗೆ ರಿಪೋರ್ಟ್‌ಮಾಡಿದ್ದು ಅವರಿಗೆಲ್ಲಾ ಆಶ್ಚರ್ಯ ಹಾಗೂ ಕೆಲವರಿಗೆ ಭಯ. ಇದನ್ನೆಲ್ಲಾ ನಂಬದವನು ಎಲ್ಲರೊಡನೆ ಹೊಂದಿಕೊಂಡು ಹೋಗಬಲ್ಲನೆ ಎಂಬ ಶಂಕೆ ಸಿಬ್ಬಂದಿಯವರ ಮುಖದಲ್ಲಿ ಕಾಣುತ್ತಿತ್ತು. ಆದರೆ ಯಾವುದೂ ಅಷ್ಟು ಬೇಗ ಪ್ರಕಟವಾಗುವುದಿಲ್ಲ. ನನ್ನ ಅಭ್ಯಾಸದ ಬಲದಂತೆ "ಸಿಹಿ"ಯೊಂದಿಗೆ 'ಮೊದಲ ನಗೆ' ಅಂತ ಎಲ್ಲರಿಗೂ ಸ್ವೀಟ್ ಕೊಟ್ಟು 'ಹಾಯ್' ಹೇಳಿದೆ. ಬ್ರಾಂಚ್‌ನಲ್ಲಿ ಅರ್ಧಕರ್ಧ ಜನ ಡಯಾಬಿಟೀಸೊ ಅಥವಾ ಕೆಲವರಿಗೆ ನಾನು ಕೊಟ್ಟದ್ದು ಸ್ವೀಟ್ ಇರಲಿಲ್ಲವೊ ತಿಳಿಯದಾಯಿತು. ಆದರೆ ಅಲ್ಲೊಬ್ಬ ದೈತ್ಯಾಕಾರದ ಕಪ್ಪನೆಯ ವ್ಯಕ್ತಿ, ಅವನು ನಕ್ಕಾಗ ಕಪ್ಪು ಆಗಸದಲ್ಲಿ ಮಿಂಚು ಬಂದಂತೆ ಅವನ ಬಾಯಿತುಂಬ ಬಿಳಿಹಲ್ಲಿನ ಸಾಲು ಅವನ ಮೈ ಬಣ್ಣಕ್ಕೆ ಸವಾಲಿನಂತೆ ಕಂಡಿತು. ನನಗೆ ಇವನು ಒಳ್ಳೆ ಸೆಕ್ಯೂರಿಟಿ ಗಾರ್ಡ್ ಆಗಬಹುದು. ಅವನು ಪಕ್ಕದಲ್ಲಿದ್ದರೆ ಬೇರೆ ಯಾವ ಭಯೋತ್ಪಾದಕನ ಭಯವೂ ಇರುವುದು ಸಾಧ್ಯವಿಲ್ಲವೆಂಬ ಸಮಾಧಾನ, ನೆಮ್ಮದಿ ಸಿಕ್ಕಿತು. ಅವನ ಹೆಸರು ಹರನಾಥನೆಂದು ಅವನೇ ತನ್ನ ಕರ್ಕಶ ಧ್ವನಿಯಲ್ಲಿ ಹೇಳಿದ. ಸೀರಿಯಲ್‌ನ ಅನೇಕ ರೌಡಿಗಳನ್ನು ನೋಡಿದ್ದ ನನಗೆ ಹರನಾಥ ಒಳ್ಳೆ ನಟನಂತೆ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ.

'ಶಿಸ್ತು' ನನ್ನ ಅನೇಕ ದೌರ್ಬಲ್ಯಗಳಲ್ಲಿ ಒಂದು ಎಂದು ಅನೇಕ ಶಾಖೆಗಳಲ್ಲಿ ಸಿಬ್ಬಂದಿ ವರ್ಗದವರು ಗುರುತಿಸಿದ್ದಾರೆ. ಬೆಂಗಳೂರಿನಂತಹ ಊರಿನಲ್ಲಿ ನಾನು ನಾಲಾಯಕ್ ಎಂದೇ ಅವರ ವಾದ. "ಬ್ಯಾಂಕ್‌ನಲ್ಲಿ ಗ್ರಾಹಕರು ಬರುವುದಕ್ಕೆ ಮುಂಚೆಯೇ ಸಿಬ್ಬಂದಿಯವರು ತಯಾರಾಗಿ ಕುಳಿತಿರಬೇಕೆಂದು ಏಕೆ ಹೇಳುತ್ತಾರೊ? ಗ್ರಾಹಕರೇನೊ ತಮ್ಮ ಮನೆಹತ್ತಿರದ ಬ್ರಾಂಚ್‌ನಲ್ಲಿ ಅಕೌಂಟ್ ಓಪನ್ ಮಾಡಿರುತ್ತಾರೆ. ಅವರಿಗೆ ಬೇರೇನೂ ಕೆಲಸವಿಲ್ಲ, ಬ್ಯಾಂಕ್ ಓಪನ್ ಆಗುತ್ತಿದ್ದಂತೆ ಅಥವಾ ಅದಕ್ಕೂ ಮೊದಲು ಬಂದು ನಿಲ್ಲುತ್ತಾರೆ. ಆದರೆ ಸಿಬ್ಬಂದಿಗಳಾದ ನಾವು ನಮ್ಮ ಮನೆಯ ಹತ್ತಿರದ ಶಾಖೆಯನ್ನು ಗ್ರಾಹಕರಂತೆ ಆರಿಸಿಕೊಳ್ಳುವುದಕ್ಕೆ ಸಾಧ್ಯವೆ?" ಎಂಬುದು ಸಿಬ್ಬಂದಿ ಸವಾಲು. 'ಲೇಟಾದರೇನು? ಆಕಾಶ

ಕಳಚಿಬಿಟ್ಟಂತೆ ಆಡುತ್ತಾರೆ' ಎಂದು ನನ್ನ ಬೆನ್ನಿಗೆ ಬೈದಿದ್ದು ಅನೇಕ ಸಾರಿ ಕೇಳಿಸಿಕೊಂಡಿದ್ದೇನೆ. ನಾನು ಬದಲಾಗೋದಿಲ್ಲ ಅಂತಾಲೂ ತೋರಿಸಿದ್ದೇನೆ. ಹೊಸ ಬ್ರಾಂಚಿನಲ್ಲಿ ಎಲ್ಲಾ ನೌಕರರು ಬಹಳ ಸಂಭ್ರಮದಿಂದ ಸಡಗರದಿಂದ ಓಡಾಡುತ್ತಿರುವುದನ್ನು ನೋಡಿ ಆಶ್ಚರ್ಯವಾಯಿತು. ಹರನಾಥ ಪ್ರತಿಯೊಬ್ಬರ ಹತ್ತಿರ ಬಂದು ಒಂದು ಚೀಟಿಯಲ್ಲಿ ಬರೆದುಕೊಳ್ಳುತ್ತಾ ಇದ್ದ. ಕುತೂಹಲ ತಡೆಯಲಾರದೇ ಹತ್ತಿರ ಹೋದೆ. ''ನಿಮಗೇನು ಬೇಕು?'' ಎಂದು ಎಲ್ಲರನ್ನು ಕೇಳುತ್ತಾ ಇದ್ದ. ಕೆಲವರು ಚಾಕಲೇಟ್ ಕೆಲವರು ಸೋಪು, ಮತ್ತೆ ಕೆಲವರು ಕಾಫಿ ಪುಡಿ, ಟೀ ಪುಡಿ ಕೇಳುತ್ತಿದ್ದರು. ಎಲ್ಲವನ್ನು ಬರೆದುಕೊಳ್ಳುತ್ತಿದ್ದ. ಓಹೋ, ಹರನಾಥ ದಿನಸಿ ಅಂಗಡಿ ಇಟ್ಟಿರಬೇಕು. ಬ್ಯಾಂಕಿನ ಉದ್ಯೋಗ ಪಾರ್ಟ್ ಟೈಂ ಇರಬೇಕೆನಿಸಿತು. ಇದನ್ನೆಲ್ಲಾ ಈಗಲೇ ಕೇಳಬಾರದು. ನನ್ನ ಹೆಂಡ್ತಿ ನನಗೆ ತುಂಬ ಆತುರ ಅಂತ ಬೈದು ಹೇಳಿಕಳುಹಿಸಿದ್ದಳು. ''ಯಾವ ಬದಲಾವಣೆಯನ್ನು ದಿಢೀರ್ ಅಂತಾ ಮಾಡೋದಕ್ಕೆ ಹೋಗಬೇಡಿ. ಬಹಳ ಬೇಗ ಅನ್‌ಪಾಪ್ಯುಲರ್ ಆಗಿಬಿಡ್ತೀರಿ, ಮುಂದೆ ಕಷ್ಟವಾಗುತ್ತೆ ಸಾವಧಾನಮಾಡಿ'' ಅಂತ ಹೇಳಿಕಳುಹಿಸಿದ್ದಳು. ಇರಲಿ ಸ್ವಲ್ಪ ಕಾದು ನೋಡೋಣಾಂತ ಚೇಂಬರ್‌ಗೆ ಬಂದು ಕುಳಿತೆ. ಹರನಾಥ ನನ್ನ ಬಳಿಯೂ ಬಂದ ''ಸಾರ್, ನಿಮಗೇನು ಬೇಕು?'' ಎಂದ. ಪರವಾಗಿಲ್ಲ ನನ್ನನ್ನು ವಿಚಾರಿಸುತ್ತಾನೆ ಎಂದು 'ಒಂದು ಗ್ಲಾಸ್ ನೀರು ಬೇಕು' ಅಂದೆ. ''ಅದಲ್ಲ ಸಾರ್ ನನಗೆ ಕ್ಯಾಂಟಿನ್ ಸೌಲಭ್ಯವಿದೆ, ಅಲ್ಲಿಂದ....''

''ಇಷ್ಟು ಸಣ್ಣ ಶಾಖೆಯಲ್ಲಿ ಕ್ಯಾಂಟಿನ್ ಇದೆಯಾ?'' ಕೇಳಿದ ಅರ್ಥವಾಗದೆ. ಹರನಾಥ ಜೋರಾಗಿ ಬಾಯಿಬಿಟ್ಟು ನಗುತ್ತಾ ''ಸಾರ್ ನಾನು ಎಕ್ಸ್‌ಸರ್ವೀಸ್‌ಮ್ಯಾನ್ ಸಾರ್, ಮಿಲಿಟರಿ ಕ್ಯಾಂಟಿನ್‌ನಲ್ಲಿ ನನಗೆ ಸಾಮಾನುಗಳು ಬಹಳ ಅಗ್ಗವಾಗಿ ಸಿಗುತ್ತೆ ಸಾರ್, ಡ್ರಿಂಕ್ಸ್ ಕೂಡ ಸಿಗುತ್ತೆ, ಹಳೇ ಮ್ಯಾನೇಜರ್‌ಗೆ ತಂದುಕೊಡುತ್ತಿದ್ದೆ. ಬೇರೆಯವರಿಗೆಲ್ಲಾ ಬೇರೆ ಬೇರೆ ಐಟಮ್ ಸಾರ್'' ಅಂದ.

''ನೋಡು ನನಗೆ ಯಾವುದು ಬೇಕಿಲ್ಲ, ಈ ನಿನ್ನ ಕೆಲಸ ಬ್ಯಾಂಕ್ ಅವಧಿ ಮುಗಿದ ಮೇಲೆ ಮಾಡಬೇಕು, ಈಗ ಹೋಗು ಕರೀತಾ ಇದ್ದಾರೆ ನೋಡು ಕ್ಯಾಷಿಯರ್'' ಅಂದೆ. ''ಸಾರ್ ನನಗೆ ಒಂದನೇ ತಾರೀಖು ಇದೇ ಕೆಲಸ. ನಾನು ಹೋಗಿ ಅಲ್ಲಿ ಕ್ಯೂನಲ್ಲಿ ನಿಲ್ಲಬೇಕು. ನನಗೆ ಪ್ರತಿತಿಂಗಳು ಪರ್‌ಮಿಷನ್ ಇರುತ್ತೆ ಸಾರ್, ಯಾರನ್ನು ಬೇಕಾದರೂ ಕೇಳಿಸಾರ್'' ಅಂದ. ನಾನು ಬ್ರಾಂಚ್‌ಗೆ ರಿಪೋರ್ಟ್ ಆದದ್ದು 1ನೇ ತಾರೀಖು ಇಂದು ಎಂದು ಈಗ ಸ್ಪಷ್ಟವಾಯಿತು. ಹರನಾಥನನ್ನು ಕಷ್ಟಪಟ್ಟು ಹೊರಗೆ ಹಾಕಿ ಕ್ಯಾಷಿಯರ್ ರಮೇಶನ್ನು ಕರೆದು ಕೇಳಿದೆ. ಅವನು ಹೇಳುವುದರಲ್ಲಿ ಸತ್ಯವಿದೆ. ಅವನಿಗೆ ಅನುಮತಿಕೊಟ್ಟು ಕಳುಹಿಸಿದರೆ ಅವನು ಸಾಯಂಕಾಲ ಬೇಕಾದರೆ ಹೆಚ್ಚು ಹೊತ್ತು ದುಡಿಯುತ್ತಾನೆ. ದೈಹಿಕವಾಗಿ ಎಷ್ಟು ಬೇಕಾದರೂ ದುಡೀತಾನೆ. ಆದರೆ ಬುದ್ಧಿ ಉಪಯೋಗಿಸುವ ಕೆಲಸ ಹೇಳಿದರೆ ನಮಗೆ ಅಪಾಯ ಎಂದು ವಾರ್ನಿಂಗ್ ಮಾಡಿದರು ಕ್ಯಾಷಿಯರ್.

''ನೋಡ್ರಿ, ಬೇಕಾದರೆ ಅವನು ರಜ ಹಾಕಿ ನಿಮ್ಮ ಸೇವೆ ಎಲ್ಲಾ ಮಾಡಲಿ ನಾನು ರಜ ಸ್ಯಾಂಕ್ಷನ್ ಮಾಡ್ತೀನಿ, ಆದರೆ ಪರ್‌ಮಿಷನ್ ಕೊಟ್ಟು ಈ ಸಮಾಜ ಸೇವೆ ಮಾಡೋದಕ್ಕೆ

ನಾನು ಒಪ್ಪಲ್ಲ. ಅಲ್ರಿ ನೀವೆಲ್ಲಾ ಅವನ ಹತ್ತಿರ ಈ ರೀತಿ ಸಹಾಯ ಪಡೆದರೆ ಅವನನ್ನು ಕಂಟ್ರೋಲ್ ಮಾಡೋದು ಹೇಗ್ರಿ?'' ಗದರಿದೆ.

''ಸಾರ್ ಅವನನ್ನು ಯಾರೂ ಕಂಟ್ರೋಲ್ ಮಾಡೋಕ್ಕಾಗಲ್ಲ. ಅದೂ ಅಲ್ಲದೆ ಅವನು ನಮಗೆ ತರುವ ಪದಾರ್ಥಗಳಿಗೆ ತಾನು ಕೊಟ್ಟಿದ್ದಕ್ಕಿಂತ ಶೇಕಡ 10 ರಷ್ಟು "VAT" ತೆರಿಗೆ ಹಾಕ್ತಾನೆ ಸಾರ್. ಇದರಿಂದ ಅವನಿಗೂ ಲಾಭ ನಮಗೂ ರಿಯಾಯಿತಿ ದರದಲ್ಲಿ ಪದಾರ್ಥ ಸಿಗುತ್ತೆ ಸಾರ್. ಯಾವ ಕೆಲಸ ಹೇಳಿದರೂ ಮಾಡೋದಕ್ಕೆ ಹಿಂದೇಟು ಮಾಡುವುದಿಲ್ಲ ಹರನಾಥ'' ಎಂದು ಅವನ ಪರವಾಗಿಯೂ ಮಾತಾಡಿದರು.

ಹರನಾಥನ ಹರಿಕಥೆ ಸ್ವಾರಸ್ಯವಾಗಿರುತ್ತೆ. ನಿಧಾನವಾಗಿ ಹಿಡಿತ ಸಾಧಿಸಬೇಕು. ನನ್ನ ಸರ್ವೀಸ್‌ನಲ್ಲಿ ಇದು ಒಂದು ಚಾಲೆಂಜ್ ಅಧ್ಯಾಯ. ಅವನು ex-service ಮ್ಯಾನ್ ನಿಜ ಆದರೆ ಅವನೊಬ್ಬ ಸರ್ವೀಸ್ ಮ್ಯಾನ್ - ಬ್ಯಾಂಕಿನ ಕೆಲ್ಸಕ್ಕೆ ಹಾಗೂ ಜಂಟಲ್‌ಮ್ಯಾನ್ ಮಾಡೋದು ನನ್ನ ಹರಸಾಹಸವಾಗಬೇಕು ಎಂದು ನನ್ನಲ್ಲಿ ಉತ್ಪನ್ನವಾಗುತ್ತಿರುವ ಕೋಪವನ್ನು ಕೆಲಸದಕಡೆ ಕೇಂದ್ರಿಕರಿಸಿದೆ. ಮುಂದೇನಾಯಿತು? ಅಂತೀರಾ? ಮುಂದಿನ ಕಂತಿನಲ್ಲಿ ಕಟ್ಟಿಟ್ಟಿದ್ದೇನೆ. ನಿಮಗೂ ತಾಳ್ಮೆ ಇರಲಿ.

❖

ರಾಜಕಾರಿಣಿಗೆ ಅಪಘಾತವಾದಾಗ
ಅವರಿಗೆ ಯಾವ ರಕವೂ
ಮ್ಯಾಚ್ ಆಗಲಿಲ್ಲ
ಯಾಕೆಂದರೆ ಅವರು
ಹೀರಿ ಬೆಳೆದದ್ದು
ಹಲವಾರು ಜನರ ರಕ್ತ

ಸಂಬಳ, ಗಿಂಬಳ, ಟಿ.ಎ. ಡಿ.ಎ, ರಜ,
ಬೋನಸ್, ಬಡ್ತಿ, ಪ್ರವಾಸ. ಪೆನ್ಷನ್
ಮುಂತಾದ ಒಂಭತ್ತು (ನೌ)ಸೌಲಭ್ಯಗಳನ್ನು
ಆಗಾಗ ಕರೆಯುತ್ತಾ ಇರುವವನನ್ನು
ನೌ ಕರಿ (ಯುವವನು) ಹಿಡಿದವನು
ಅನ್ನಬಹುದು

- ಬೇಲೂರು ರಾಮಮೂರ್ತಿ

ಕರುಣಾಳು ಬಾ ಬೆಳಕೆ...

- ಸಿ.ಆರ್. ಸತ್ಯ

ನಾನು ನಿಮಗೊಪ್ಪಿಸುವ ಸಂಗತಿಯನ್ನು ಎರಡು ಭಾಗಗಳಾಗಿ ಮಾಡಿದ್ದೀನಿ:

1. ಚಾರಿತ್ರಿಕ ಹಿನ್ನೆಲೆ: ನನ್ನ ಹೆಂಡತಿಗೆ ಅಮೇರಿಕದ ಖ್ಯಾತ ಕಪ್ಪು ಅಮೇರಿಕನ್ ನಟ ಡೆನ್‌ಜಿಲ್ ವಾಷಿಂಗ್ಟನ್ ಅಂದರೆ ಅಪಾರ ಪ್ರೀತಿ. ಅವನು ಒಳ್ಳೆಯ ನಟನೇನೋ ಹೌದು. ಅದಲ್ಲದೇ, ಸಾವಿರಾರು ಅಮೇರಿಕನ್ನರ ಪ್ರಕಾರ, ಡೆನಜಿಲ್‌ನ ಮುಖದಲ್ಲಿ ಒಂದು ವಿಶೇಷತೆಯಿದೆಯಂತೆ. ಅವನ ಎಡ ಮುಖ, ಬಲ ಮುಖದ ಕನ್ನಡಿಯ ಪ್ರತಿಬಿಂಬವೋ ಎಂಬಂತೆ, ಒಂದು ಎಳೆ ಕೂದಲಿನಷ್ಟು ವ್ಯತ್ಯಾಸವಿಲ್ಲದೆ ಬಲಮುಖದ ಹೋಲಿಕೆ ಹೊಂದಿದೆಯಂತೆ (ಮೂಗು, ಕಿವಿ, ಹಣೆ, ತಲೆ ಎಲ್ಲಾ ಸೇರಿ). ಅನೇಕಬಾರಿ, ನನ್ನ ಮುಖದಲ್ಲಿರೋ ಕೆಲವು ತದ್ವಿರುದ್ಧ ಆಯಾಮಗಳನ್ನು ಡೆನಜಿಲ್ ಮುಖಕ್ಕೆ ಹೋಲಿಸಿ, ನನ್ನ ಬಗ್ಗೆ ನನ್ನ ಹೆಂಡ್ತಿ ನಗೆಯಾಡಿದ್ದಾಳೆ. ಇರಲಿ, ಇದು ಚರಿತ್ರೆ.

2. ಪ್ರಸ್ತುತ ರಾಮಾಯಣ: ಮೊನ್ನೆ ಬೆಳಗ್ಗೆ ಪೇಪರ್ ಓದುತ್ತಿದ್ದಾಗ ಯಾಕೋ ಬಲಗಣ್ಣು ಚುರ್! ಅಂತು. ಕನ್ನಡಿಯಲ್ಲಿ ನೋಡಿಕೊಂಡೆ. ರೆಪ್ಪೆ ಸ್ವಲ್ಪ ಊದಿದ ಹಾಗಿತ್ತು. ನಾನು ಎಂದೂ ಮಡುಕುವವನಲ್ಲ, ಇರಲಿ, ಊಟವಾದ ನಂತರ ನೋಡೋಣ ಅಂತ ಕಾದೆ. ಊಟವಾದ ಮೇಲೆ ನೋಡಿದರೆ, ಊತ ಬೆಳಗ್ಗಿನ ಗಾತ್ರಕ್ಕಿಂತ ಎರಡರಷ್ಟಾಗಿತ್ತು. ಮಡುಕಬಾರದು ಮಧ್ಯಾಹ್ನದ ಕಾಫಿಯಾಗಲಿ ಅಂತ ಕಾಯ್ದು ನೋಡಿದೆ. ಗಾತ್ರ ಮೂರರಷ್ಟು ಆಗಿತ್ತು. ರಾತ್ರಿ ಊಟ ಮಾಡಿ ಇದರ ಬಗ್ಗೆ ಚಿಂತಿಸೋಣ ಅಂತ ಊಟವಾದ ಮೇಲೆ ನೋಡಿಕೊಂಡೆ. ಗಾತ್ರ ನಾಲ್ಕರಷ್ಟು ಆಗಿತ್ತು. ಮನವೇ, ದುಡುಕದಿರು, ಬೆಳಗ್ಗೆ ಎದ್ದು ನೋಡುವಿಯಂತೆ ಅಂತ ಮಲಗಿದೆ. ಬೆಳಗ್ಗೆ ನನ್ನ ಹೆಂಡತಿ ನನಗಿಂತ ಮುಂಚೆ ಏಳೋ ಅಭ್ಯಾಸ, ಎದ್ದು ನನ್ನನ್ನು ನೋಡಿ ಕಿಟಾರ್ ಅಂತ ಕಿರಿಚಿದಳು.

ಬೆಚ್ಚಿಬಿದ್ದು ಎದ್ದು ಕುಳಿತು "ಏನಾಯ್ತು" ಅಂತ ಕೇಳಿದೆ.

"ಇದೇನ್ರೀ, ನಿಮ್ಮ ಬಲಗಣ್ಣು ನಿಂಬೆ ಹಣ್ಣಾಗಿದೆ?" ಅಂತ ಗಾಬರಿಯಿಂದ ಕೇಳಿದಳು.

"ಮಡುಕಬೇಡ, ಏನೋ ಕಚ್ಚಿರಬೇಕು. ಸರಿಹೋಗುತ್ತೆ" ಅಂತ ಅಂದೆ.

"ನಿಮ್ಮ ತಲೆ, ಮುಂಚೆ ಡಾಕ್ಟ್ರಿಗೆ ತೋರಿಸಿಕೊಂಡು ಬನ್ನಿ, ನನ್ನ ಹಣೇ ಬರಹ" ಅಂತ ತಲೆ ಚಚ್ಚಿಕೊಂಡಳು.

ನನಗೆ ಅರ್ಥವಾಗಲಿಲ್ಲ. "ಅಲ್ಲವೇ, ನನ್ನ ಒಂದು ಕಣ್ಣು ನಿಂಬೆ ಹಣ್ಣು ಗಾತ್ರ ಆದರೆ ಅದು ನಿನ್ನ ಹಣೇಬರಹ ಹೇಗಾಗುತ್ತೆ?" ಅಂತ ಕೇಳಿದೆ. "ನಿಮಗೆ ಎಲ್ಲಿ ಅರ್ಥವಾಗುತ್ತೆ? ಈ ಗುರುವಾರ ನಮ್ಮ ಪ್ರಮೀಳನ ಮಗಳ ಮದುವೆ ಇದ್ಯಲ್ರೀ... ನಿಮ್ಮನ್ನು ಜೊತೆಗಿಟ್ಟುಕೊಂಡು ಹ್ಯಾಗೆ ನಾನು ಅಲ್ಲಿ ಓಡಾಡಲಿ? ನನ್ನ ಸ್ನೇಹಿತೆಯರೆಲ್ಲಾ ಅವರವರ ಗಂಡನ್ನ ಅಚ್ಚುಕಟ್ಟಾಗಿ ಕರೆದುಕೊಂಡು ಬಂದಿರ್ತಾರೆ. ನಿಮ್ಮನ್ನು ನೋಡಿ – ಇವರ್ಯಾರೇ? ಒಕ್ಕಣ್ಣು ಶುಕ್ರಾಚಾರಿ? –

ಅಂತ ನನ್ನ ಕೇಳಿ ನಗೊಲ್ಲವೇನ್ರೀ? ನನ್ನ ಹಣೇಬರಹವಲ್ಲದೆ ಇನ್ನೇನು?'' ಅಂತ ವಿವರಣೆ ಕೊಟ್ಟಳು.

ಅರ್ಥವಾಯ್ತು. ದುಡುಕದೇ, ಕಾಫಿ ತಿಂಡಿ ಆದ ಮೇಲೆ ಕಣ್ಣು ಡಾಕ್ಟರ ಹತ್ತಿರ ಹೋದೆ. ಚೆನ್ನಾಗಿ ನೋಡಿದ್ರು. ಅವರ ಉವಾಚ: ''ಇದು ಡಬ್ಬಲ್ ಡೋಸ್ ಕಣ್ಣಾಕುಡುಕೆ, ಎರಡು ದಪ್ಪ ಕುರುಗಳು ನಿಮ್ಮ ರೆಪ್ಪೆಯಲ್ಲಿ ತಾಂಡವ ನೃತ್ಯ ಆಡ್ತಿವೆ. ಔಷಧಿಗಳನ್ನು ಕೊಡ್ತೀನಿ. ಊತ ಇಳಿಯೋಕ್ಕೆ ಮೂರು ನಾಲ್ಕು ದಿನಗಳಾಗುತ್ತವೆ. ಅಂದ್ಹಾಗೆ, ಹುಷಾರಾಗಿರಿ. ನಿಮ್ಮ ಎಡಗಣ್ಣಿಗೂ ಇದೇ ರೀತಿ ಸೋಂಕು ಹತ್ತಿ ಅಲ್ಲೂ ಗುಳ್ಳೆಗಳು ಬರಬಹುದು. ಆಗ ಈ ಡ್ರಾಪ್ಸ್, ಔಷಧಿಗಳನ್ನೇ ಮುಂದುವರಿಸಿ''.

ಮನೆಗೆ ಬಂದು ಹೆಂಡತಿಗೆ ವರದಿ ಒಪ್ಪಿಸಿದೆ.

''ಊತ ಇಳಿಯೋಕ್ಕೆ ಮೂರು ನಾಲ್ಕು ದಿವಸಗಳಾಗುತ್ತಂತ್ಯೆ? ಅಲ್ಲಿಗೆ ಮದುವೆ ಮುಗಿದು ಹೋಗಿ ಛತ್ರ ಬಿಟ್ಟು ಹೋಗಿರ್‍ತಾರಲ್ರೀ... ನಿಮಗೆ ಇದೇ ಸಮಯಕ್ಕೇ ಈ ಗ್ರಹಚಾರ ವಕ್ಕರಿಸಬೇಕೆ?'' ಅಂತ ಕೂಗಾಡಿದಳು.

ಸರಿ, ಇಲ್ಲಿಯ ತನಕ ನಡೆದ ಆಗು ಹೋಗುಗಳಲ್ಲಿ ನಂದೇನು ತಪ್ಪು ಅಂತ ಅರ್ಥವಾಗದೇ, ಪೆದ್ದಾಗಿ, ಡಾಕ್ಟ್ರು ಕೊಟ್ಟ ಔಷಧಿ ಶುಶ್ರೂಷೆಗಳನ್ನು ಪರಿಪಾಲಿಸಿ, ರಾತ್ರಿ ನಿದ್ದೆ ಹೋದೆ.

ಮೊದಲೇ ಹೇಳಲಿಲ್ಲವೆ? ನನ್ನ ಹೆಂಡತಿ ನನಗಿಂತ ಮುಂಚೆ ಏಳೋದು ಅಂತ? ಎದ್ದು "Wow! great!" ಅಂತ ಕೂಗಿದ್ಲು, ನಿನ್ನೆ ತರಹವೇ. ಗಾಬರಿಯಿಂದ ಎದ್ದು ''ಇವತ್ತು ಏನಾಯ್ತೇ? ನಿನ್ನೆ ಕಿರಾರ್ ಅಂತ ಅರಚಿಕೊಂಡೆ. ಇವತ್ತು ಗ್ರೇಟ್ ಅಂತ ಚಪ್ಪಾಳೆ ತಟ್ಟುತ್ತಿದ್ದಿ. ಏನಾದರೂ ಬಲಗಣ್ಣಿನ ಊತ ಇಳೀತೇನು?'' ಅಂತ ಕೇಳಿದೆ.

"Great ರೀ Great ಉ! ಬಲಗಣ್ಣು ಊತ ಹಾಗೇ ಇದೆ. ಅದಲ್ಲ ನಾನು ಹೇಳಿದ್ದು. ಇವತ್ತು ನಿಮ್ಮ ಎಡಗಣ್ಣು ಊದಿಕೊಂಡ ಹಾಗಿದೆ. ಅಯ್ಯೋದೇವರೇ, ಈ ಎಡಗಣ್ಣೂ ಚೆನ್ನಾಗಿ ನಾಳೆ ಒಳಗೆ ಬಲಗಣ್ಣು ತರಹಾನೇ ಊದಿಕೊಳ್ಳೋ ಹಾಗೆ ಮಾಡಪ್ಪಾ.... ನಿನಗೆ ತುಪ್ಪದ ದೀಪ ಹಚ್ತೀನೀ'' ಅಂತ ಪ್ರಾರ್ಥಿಸಿಕೊಂಡಳು. ''ನನಗೆ ಅರ್ಥವಾಗ್ತಿಲ್ಲ ಕಣೆ'' ಅಂತ ಅಂದೆ (ಓದುಗರೇ, ನಿಮಗೇನಾದರೂ ಅರ್ಥವಾಯ್ತೆ ನೀವೇ ಹೇಳಿ?).

''ಇಂತಹ ವಿಷಯಗಳು ನಿಮಗೆಲ್ಲಿ ಅರ್ಥವಾಗುತ್ತೆ? ಒಂದು ಕೆಲಸ ಮಾಡಿ, ಆ ಡಾಕ್ಟ್ರು ಕೊಟ್ಟಿರೋ ಔಷಧಿಗಳನ್ನು ನಾನು ಮನೇಲಿ ಎಲ್ಲೋ ಬಚ್ಚಿಡ್ತೀನಿ. ಈಗ ಅದ್ಯಾವುದನ್ನೂ ಉಪಯೋಗಿಸಬೇಡಿ. ಪಮ್ಮಿ ಮಗಳ ಮದುವೆ ಆದ ಮೇಲೆ ಕೊಡ್ತೀನಿ. ಆಗ ಟ್ರೀಟ್‌ಮೆಂಟ್ ಮುಂದುವರಿಸಿ'' ಅಂತ ನನ್ನ ಟೇಬಲ್ ಮೇಲಿದ್ದ ಟ್ಯಾಬ್ಲೆಟ್ಟುಗಳು, ಡ್ರಾಪ್ಸ್ ಎಲ್ಲವನ್ನೂ ಬಾಚಿ ತೊಗೊಂಡು ಹೊರಟು ಹೋದಳು.

ನಾನು ನಿಮಗೆ ಗೊತ್ತಿರೋ ಹಾಗೆ ದುಡುಕೋ ಮನುಷ್ಯ ಅಲ್ಲ. ಕೋಪಮಾಡಿಕೊಳ್ಳದೇ ನಿಧಾನವಾಗಿ ಯೋಚನೆ ಮಾಡ್ದೆ. ಪಮ್ಮಿ ಮಗಳ ಮದುವೆ - ನನ್ನ ಕಣ್ಣು ಊತ - ಇವಳ

ರೌದ್ರಾವತಾರ, ಇವೆಲ್ಲಕ್ಕೂ ಏನಾದರೂ ಸಂಬಂಧ ಇದೆಯೇ ಅಂತ. ಏನೂ ತಲೆಗೆ ಹೊಳೆಯಲಿಲ್ಲ. ದೇವ್ರೇ, ನೀನೇ ಗತಿ ಅಂತ ಸುಮ್ಮನಾದೆ. ಅಲ್ಲ, ಔಷಧಿಗಳನ್ನೇ ಮುಟ್ಟದೇ ಇದ್ದರೆ, ದೇವರು ತಾನೇ ಏನು ಮಾಡ್ತಾನೆ ನೀವೇ ಹೇಳಿ. ಅವನೇನು ನನ್ನ ಕಣ್ಣು ಡಾಕ್ಟ್ರಂತೆ MBBS, MS, DOMSಏ??

ಪಮ್ಮಿ ಮಗಳ ಮದುವೆ ದಿನ ನನ್ನ ಎಡಕಣ್ಣೂ ಬಲಕಣ್ಣಷ್ಟೇ ಊದಿಕೊಂಡಿತು. ನನ್ನ ಎರಡೂ ಕಣ್ಣುಗಳ ರೆಪ್ಪೆಗಳನ್ನು ತೆಗೆಯೋದಕ್ಕೇ ಕಷ್ಟವಾಯ್ತು. ಆದಷ್ಟೂ ಕಣ್ಣು ಬಿಟ್ಟು ನನ್ನ ಹೆಂಡ್ತಿ ಕಡೆ ನೋಡಿದೆ. ಪ್ರಸನ್ನವದನಳಾಗಿ ತೋರ್ತಿದ್ದಳು.

ಸರಿ, ಸಂಜೆ ಪಮ್ಮಿ ಮಗಳ (ಪಮ್ಮಿಗೂ ನಮಗೂ ಯಾವ ಸಂಬಂಧವೂ ಇಲ್ಲ; ಇನ್ನು ಅವಳ ಮಗಳ ವಿಷಯವಂತೂ ಕೇಳಲೇ ಬೇಡಿ) ಮದುವೆಗೆ ಹೋದ್ವಿ. ಪಾಪ, ತುಂಬಾ ಮೆಟ್ಟಿಲುಗಳಿರೋ ಕಡೆ, ಸ್ಟೇಜ್ ಮೇಲೆ ನನ್ನ ಕೈ ಹಿಡಿದುಕೊಂಡೇ ಕರೆದುಕೊಂಡು ಹೋದಳು ನನ್ನ ಹೆಂಡ್ತಿ. ಪಮ್ಮಿ ಮಗಳ ಅಜ್ಜ, ಅಜ್ಜಿ ಅಲ್ಲಿ ನಿಂತಿದ್ರಂತೆ; ಅವಳೇ ವಧು ಮತ್ತು ಅವಳ ಹೊಸಾ ಗಂಡ ಅಂತ ಕೈ ಕುಲುಕೋಕ್ಕೆ ಹೋಗಿದ್ದೆ. ದೇವರ ದಯದಿಂದ ಇವಳೇ ಅದನ್ನ ತಪ್ಪಿಸಿ, ನನ್ನನ್ನು ಡೈನಿಂಗ್ ರೂಮಿನಲ್ಲಿ ಕೂರಿಸಿ, ಎಲ್ಲರ ಹತ್ತಿರ ಸಾವಧಾನವಾಗಿ ಹರಟೆ ಕೊಚ್ಚಿ ಊಟ ಆದಮೇಲೆ ಮನೇಗೆ ಕರೆದುಕೊಂಡು ಬಂದಳು.

ಮನೆಗೆ ಬಂದಮೇಲೆ, ಅವಳಿಗೆ ಮೂರು ನಾಲ್ಕು ಫೋನ್‌ಕಾಲ್‌ಗಳು ಬಂದವು. ಮಾಡಿದವರಿಗೆಲ್ಲಾ ಥ್ಯಾಂಕ್ಯೂ ಕಣೆ, ಥ್ಯಾಂಕ್ಸ್ really ಅಂತ ಹೇಳ್ತಿದ್ದಳು. ಯಥಾಪ್ರಕಾರ ಯಾವುದಕ್ಕೆ ಥ್ಯಾಂಕ್ಸ್ ಹೇಳ್ತಿದ್ದಾಳೆ ಅಂತ ನನಗೆ ಅರ್ಥವಾಗಲಿಲ್ಲ. ಕೊನೆಗೆ ಅವಳೇ ಹೇಳಿದ್ದು: "ರೀ ನನ್ನ ಫ್ರೆಂಡ್ಸ್ ಎಲ್ಲಾ ನಿಮ್ಮನ್ನು ತುಂಬಾ ಹೊಗಳ್ತಾ ಇದ್ರು ಗೊತ್ತಾ? ನಿಮ್ಮ ಹಸ್ಬೆಂಡ್ ಮುಂಚೆ ಅದೇನೋ ಒಂದು ತರಹ ಇದ್ರು. ಈಗ ಮುಖ ಎಲ್ಲಾ ತುಂಬಿಕೊಂಡು ಆರೋಗ್ಯವಾಗಿ ಕಾಣ್ತಿದ್ದಾರೆ; ಒಳ್ಳೇ ಮಣಿಪುರದ ಕಡೆಯವರ ತರಹ, ಚೈನೀಸ್ ಫೇಸ್ ಕಟ್ ಇದೆ; ಎಷ್ಟು ಹ್ಯಾಂಡ್‌ಸಮ್ ಆಗಿ ಇದ್ದಾರೆ! ಅಂತೆಲ್ಲಾ,

"ಅದರಲ್ಲೂ ಆ ಶನಿ – ಅಯ್ಯೋ! ಆ ಶಾಲಿನೀ ರೀ – ಏನಂದಳು ಗೊತ್ತಾ? ಏನೇ, ನಿನ್ನ ಹಸ್ಬೆಂಡ್ ಡೆನ್‌ಜಿಲ್ ವಾಷಿಂಗ್ಟನ್ ಹಾಗೆ ಇದಾರಲ್ಲೇ, ಕಂಗ್ರಾಟ್ಸ್! ಅಂದ್ಲು. I am so happy ರೀ" ಅಂತ

ಅಷ್ಟೊತ್ತಿಗೆ, ನನ್ನ ತಲೆ ಬಿಸಿಯಾಗೋದಿರಲಿ, ಎರಡು ಕಣ್ಣುಗಳೂ ಉರಿಯೋಕ್ಕೆ ಶುರುಮಾಡಿದ್ವು. "ಆ ಡೆನ್‌ಜಿಲ್ ವಾಷಿಂಗ್ಟನ್, ಜಾರ್ಜ್ ವಾಷಿಂಗ್ಟನ್, ವಾಷಿಂಗ್ಟನ್ ಡಿ.ಸಿ. ಅವರ ಮನೆ ಹಾಳಾಯ್ತು, ಬೇಗ ನನ್ನ ಡ್ರಾಪ್ಸ್ ಕೊಡು" ಅಂತ ಗುಡುಗಿ, ಡ್ರಾಪ್ಸ್‌ನ ಹಾಕ್ಕೊಂಡು ಕಣ್ಣುಮುಚ್ಕೊಂಡು "ಕರುಣಾಳು ಬಾ ಬೆಳಕೆ, ಮುಸುಕಿದೀ ಲೈಫಿನಲಿ" ಅಂತ ಹೇಳ್ಕೊಂಡು ಮಲಗಿಕೊಂಡೆ!

❖

ಕಾಫಿ ಹೌಸ್

ಮನೆಯೊಂದು ಮೂರು ಬಾಗಿಲು ಅನ್ನೋ ಹಾಗೆ ಕುರ್ಚಿಯೊಂದು ನೂರು ಕಾಲು ಅಂತ ಈಗ ಅನ್ನಬಹುದು. ಏಕೆಂದರೆ ಕಡೇ ಪಕ್ಷ ಐವತ್ತು ಸಂಸದರಾದರೂ ನಾನು ನಾನು ಅಂತ ಪ್ರಧಾನ ಮಂತ್ರಿ ಕುರ್ಚಿಗೆ ಕಣ್ಣು ಹಾಕಿದಾರೆ. ಅದರಲ್ಲಿ ಎಷ್ಟು ಜನರಿಗೆ ಅರ್ಹತೆ ಇದೆ ಅನ್ನೋದು ಬೇರೆ ಮಾತು. ಅರ್ಹತೆ ಹುಡುಕಿಕೊಂಡು ಹೊರಟರೆ ಇಡೀ ಭಾರತದಲ್ಲಿ ಒಬ್ಬನೂ ಸಿಗಲಾರನೇನೋ. ಹಾಗಿದ್ದರೆ ಪ್ರಧಾನಮಂತ್ರಿ ಕುರ್ಚಿ ಅನಾಥವಾಗಿಬಿಡುತ್ತವೆ. ಕುರ್ಚಿ ಖಾಲಿ ಬಿಡೋ ಹಾಗಿಲ್ಲ. ಆದರೆ ಒಂದು ವೇಳೆ ಆಸೆಪಟ್ಟವರಿಗೆ ಕುರ್ಚಿ ಸಿಕ್ಕಿಬಿಟ್ಟರೆ ಅದೇನೂ ಹೂವಿನ ಹಾಸಿಗೆ ಅಲ್ಲ. ಬನ್ನಿ ಕೂತ್ಕೊಳಿ ಅನ್ನೋರ ಜೊತೆಗೇ ಇಳೀರೀ ಸಾಕು ಅನ್ನೋರೂ ಇರ್ತಾರೆ. ಎಂಥೆಂಥವರನ್ನು ಕೂರಿಸಿಕೊಂಡ ನಾನು ಈಗ ಎಂಥೆಂಥವರನ್ನೋ ಕೂರಿಸಿಕೊಳ್ಳಬೇಕಾಗಿದೆಯಲ್ಲ ಅಂತ ಕುರ್ಚಿ ಕಿರ್ ಅಂತಿರೋದು ಬಹುಶಃ ಯಾರಿಗೂ ಕೇಳಿಸಿರಲಾರದು. ಏಳು ಜನ್ಮದ ಪುಣ್ಯದಿಂದ ಕುರ್ಚಿ ಸಿಗಬಹುದು ಆದರೆ ಏಳು ಅನ್ನೋ ತನಕ ಮಾತ್ರ ಕೂರೋ ಅರ್ಹತೆ ಇರುತ್ತೆ ಅನ್ನೋದು ಸತ್ಯ. ಏಕೆಂದರೆ ಈಗಾಗಲೇ ಆರು ತಿಂಗಳಿಗೆ, ಒಂಭತ್ತು ತಿಂಗಳಿಗೆ ಪ್ರಧಾನ ಮಂತ್ರಿಯಾಗಿ ಹೋದೋರನ್ನು ಈ ಕುರ್ಚಿ ಕಂಡಿದೆ. ಇನ್ನು ಮೂರು ಮೂರು ತಿಂಗಳಿಗೆ ಪ್ರಧಾನಿಯಾಗೋರು ಬರದೇ ಇರಲಿ ಅನ್ನೋದೇ ಎಲ್ಲರ ಆಸೆ, ಕುರ್ಚಿಯ ಆಸೆಯೂ ಹೌದು.

- ಬೇಲೂರು ರಾಮಮೂರ್ತಿ

ಪ್ರಧಾನಿ ಆಗೋಕೆ ಅಷ್ಟೊಂದು ಜನ ಯಾಕೆ ಇಷ್ಟೊಂದು ಇಷ್ಟ ಪಡುತ್ತಿದ್ದಾರೆ? ಅದೂ ಎಲ್ಲಾ ವೆರಿ ಸೀನಿಯರ್ ಸಿಟಿಜನ್ಸ್? ಅನೇಕರನ್ನು ಕೈ ಹಿಡಿದು ನಡೆಸಬೇಕು. ಕಣ್ಣು ಕಾಣಿಸಿದರೂ ಅಂತರದೃಷ್ಟಿ ದೋಷ. ಆರೋಗ್ಯ ಸಹ ಹಾಗೇ ಹೇಳಿಕೊಳ್ಳುವಂತಹದ್ದಲ್ಲ. ವಿದ್ಯೆ ಬಗ್ಗೆ ಹೇಳಿಕೊಳ್ಳದಿರುವುದೇ ವಾಸಿ. ವೃದ್ಧಾಶ್ರಮದಲ್ಲೋ ಅಥವಾ ಅವರೇ ಕಟ್ಟಿಸಿರುವುವಂತಹ ಭವ್ಯವಾದ ತೋಟದ ಮನೆಯಲ್ಲೋ ರಾಮಾ ಕೃಷ್ಣ ಅಂತ ನೆಮ್ಮದಿಯಾದ ಜೀವನ ನಡೆಸುತ್ತಾ ಮುಗಿಯದ ಕುಡಿಕೆ ಹಣವನ್ನು ನಾಳೆಯ ಯೋಚನೆ ಇಲ್ಲದೆ ಖರ್ಚು ಮಾಡಿಕೊಂಡು ಇರುವ ಬದಲು ನಾನು ಪ್ರಧಾನಿಯಾಗೇ ಜನ ಸೇವೆ ಮಾಡ್ತೀನಿ ಅನ್ನೋ ಹಟ ಯಾಕೆ ಅಂತ ನನಗೆ ಅರ್ಥವಾಗ್ತಿಲ್ಲ. ಈ ಸಮಯದಲ್ಲಿ ಹಿಂದೆ ಕೇಳಿದ ಕತೆಯೊಂದನ್ನು ಪ್ರಸ್ತುತಕ್ಕೆ ಟ್ವಿಸ್ಟ್ ಮಾಡಿ ಹೇಳುವೆ: ಒಂದು ಸರ್ಕಸ್. ಅದರಲ್ಲಿ ಒಂದು ಕತ್ತೆ. ಈ ಪ್ರಾಣಿಯ ಹೆಗ್ಗಳಿಕೆ ಎಂದರೆ ಅಳೋದು. ಅದು ಅಳುವುದನ್ನು ನೋಡಲೆಂದೇ ಜನ ಐಪಿಎಲ್ ಪಂದ್ಯಗಳಿಗೆ ಹೋಗುವಂತೆ ಹೋಗುತ್ತಿದ್ದರು. ಹೀಗೆ ಜನ ಕಿಕ್ಕಿರಿದು ಸೇರಿರುವಾಗ ಒಂದು ದಿನ ಆ ಕತ್ತೆ ಏನು ಮಾಡಿದರೂ ಅಳಲಿಲ್ಲ. ಮಾಲೀಕ ಪ್ಯಾನಿಕ್. ಆಗ ಪ್ರೇಕ್ಷಕ ಗ್ಯಾಲರಿಯಿಂದ ಒಬ್ಬ ಮುಂದೆ ಬಂದು ನಾನು ಕತ್ತೆಯನ್ನ ಅಳಿಸುತ್ತೇನೆ ಎಂದ. ಹತಾಶನಾಗಿದ್ದ ಮಾಲೀಕ ಸರಿ ಪ್ರಯತ್ನಿಸು ಎಂದ. ಇವನು ಸೀದಾ ಕತ್ತೆಯ ಬಳಿ ಬಂದು ಅದರ ಕಿವಿಯಲ್ಲಿ ಏನೋ ಉಸುರಿದ. ಅದು ಗೊಳೋ ಎಂದು ಅಳಲಾರಂಭಿಸಿತು. ಜನ ಖುಷಿಯಿಂದ ಚಪ್ಪಾಳೆ ತಟ್ಟಿದರು. ಕತ್ತೆಯ ಕಿವಿಯಲ್ಲಿ ಏನು ಹೇಳಿದೆ ಎಂದು ಮಾಲೀಕ ಕೇಳಿದಾಗ ಇವನೆಂದ: ಏನಿಲ್ಲ ಲಾಲೂ, ಮಾಯಾವತಿ, ಪವಾರ್, ಪಾಸ್ವಾನ್ ಅಥವಾ ದೇವೇಗೌಡರು ಪ್ರಧಾನಿ ಆಗಬಹುದು ಎಂದೆ ಅಷ್ಟೆ

- ಆನಂದ

ಮುಂದಿನ ಪ್ರಧಾನಿ ಪಟ್ಟಕ್ಕೆ ಸೂಕ್ತ ವ್ಯಕ್ತಿಯನ್ನು ಹುಡುಕಿಕೊಂಡು ಹೊರಟಾಗ ನನಗನ್ನಿಸಿದ್ದು ಈ ಬಾರಿ ಫಾರ್ ಎ ಛೇಂಝ್ ಮಹಿಳೆ ಒಬ್ಬರು ಪ್ರಧಾನಿಯಾಗಲೇಬೇಕು ಅಂತ ! ಮಹಿಳೆಯರ ಲಿಸ್ಟ್ ತಗೊಂಡರೆ ನಮಗೆ ಕಾಣುವುದು ಬರೀ ಮಾಯಾವತಿ, ಸೋನಿಯಾ, ಮಮತಾ ಮಾತ್ರಾ. ಮಹಿಳೆ ಉತ್ತರದವ್ರಾಗಿರದೇ ದಕ್ಷಿಣದವ್ರಾಗಿರಲಿ ಅಂದರೆ ನಮಗೆ ಕಣ್ಣಿಗೆ ಬೀಳೋದು ಜಯಲಲಿತಾ ಬಿಟ್ಟರೆ ಬೇರೆ ಯಾರೂ ಇಲ್ಲ! ಮಹಿಳೆ ಉತ್ತರದವ್ರಾಗಿರದೇ ದಕ್ಷಿಣದವ್ರಾಗಿರಲಿ, ಅದರಲ್ಲೂ ನಮ್ಮ ಮಣ್ಣಿನ ಮಗಳಾಗಿರಲಿ ಅಂತ ಬಲವಾದ ಅಭಿಪ್ರಾಯ ಮೂಡಿಬಿಟ್ಟತ್ತೂ ರೀ... ಈ ಆ್ಯಂಗಲ್‌ನಲ್ಲಿ ನಮ್ಮ ನೇಟೀವ್ ಹೆಣ್ಣುಮಕ್ಕಳು ಎಲ್ಲರನ್ನೂ ತೂಗಿದೆ, ಪ್ರತಿಯೊಬ್ಬರಿಗೂ ಅವರ ರಾಜಕೀಯ ಹಿನ್ನೆಲೆ, ಪಾರಂಪರಿಕ ಅನುಭವ, ಸಾಂಸಾರಿಕ ಬೆಂಬಲ, ವಂಶ ಪಾರಮ್ಯ, ರಾಜಕೀಯ ಗುರುಗಳು, ಜನನ ಜಾತಕ (?).... ಮುಂತಾದ ಹತ್ತು ಹದಿನೆಂಟು ಪ್ಯಾರಾಮೀಟರುಗಳನ್ನು ತಯಾರಿಸಿ ಮಾರ್ಕುಗಳನ್ನು ಪ್ರೈಮರಿಶಾಲೆ ಮೇಷ್ಟ್ರು ಹಾಕುವಂತೆಯೇ ಹಾಕಿದೇರೀ... ರಿಸಲ್ಟು ಏನು ಬಂದಿದೆ ಗೊತ್ತಾ ?

ತೇಜಸ್ವಿನಿ ನಾಲ್ಕನೇ, ಮೋಟಮ್ಮ ಮೂರನೇ, ಕರಂದ್ಲಾಜೆ ಎರಡನೇ ಪ್ಲೇಸ್‌ಗೆ ಬಂದರೆ ಮೊದಲು ಯಾರು ಬಂದರು ಗೊತ್ತೇ? ಶ್ರೀಮತಿ ಅನಿತಾ ಕುಮಾರಸ್ವಾಮಿಯವರು ಮುಂದಿನ ಪ್ರಧಾನಿಯಾಗಲು ಸಕಲ ಅರ್ಹತೆಗಳನ್ನೂ ಹೊಂದಿದಾರೆ ಅಂತ ಈ ಅಂಕಪಟ್ಟಿ ತೋರಿಸಿದೆ! ಆದರಿಂದ ನನಗೆ ಅವಕಾಶ ಸಿಕ್ಕರೆ ನಾನು ಖಡಾಖಂಡಿತವಾಗಿ ಶ್ರೀಮತಿ ಅನಿತಾ ಕುಮಾರಸ್ವಾಮಿಯವರನ್ನೇ ಬೆಂಬಲಿಸುವವನು.

- ಎಚ್ .ಗೋಪಾಲಕೃಷ್ಣ

ಭಾವಿ ಪ್ರಧಾನಿಗಳು ಹೇಗಿರ್ಬೇಕೂಂತ ಕಲಿಸ್ಕೊಳ್ಳೋದೇ ಒಂದು ಚೆನ್ನ; ಆದರೆ ಹೇಗಿರ್ತಾರೆ ಅನ್ನೋದು ಮಾತ್ರ ಗೊತ್ತಿರೋ ಬಾಬ್ತೇ. ಹೇಳೀ ಕೇಳೀ ಮತ್ತೊಂದು ಸಮ್ಮಿಶ್ರವೇ ನಮ್ಮ ಮೇಲೆ ಘುತ್ತಂತ ಬೀಳಕ್ ರೆಡಿಯಾಗಿರೋ ಈ ಕಾಲ್ದಲ್ಲಿ ಪ್ರಧಾನಿ ಮುಖ ಯಾವ್ದಾದ್ರೇನು, ಆಳೋ ರೀತಿ ಮಾತ್ರ ನಮ್ಮ ಯಡ್ಯೂರಪ್ಪನವರು ಆಳ್ತಾ ಇರೋ ರೀತ್ಯೇ... ಯಾವ ಸುಧಾರಣೆಗ್ಲೂ ಇಲ್ದೇ, ಕುರ್ಚೀಗ್ ದಂಡ್ವಾಗಿ ಕೂರೋದೊಂದೇ ದಿಟ. ಲಿಕ್ಕರ್ ಲಾಬೀನೋ, ಗಣಿ ಗೂಂಡಾಗ್ಳೋ ಅವರವ್ರ್ ಕೆಲ್ಸ ಮಾಡಿಸ್ಕೊಂಡು ಕೊಬ್ಬಕ್ ಮಾತ್ರ ಇದು ಅನ್ಕೂಲ. ಪಾಪ, ಆ ಪ್ರಧಾನಿ ಪಾಡು ಯಾವ ಸರ್ಕಸ್ ಪ್ರಾಣೀಗೂ ಬೇಡ ಅಲ್ಲಿ ಒಬ್ನೇ ಒಬ್ಬ ರಿಂಗ್ ಮಾಸ್ಟರ್; ಇಲ್ಲಿ ಓ ಅಂದ್ರೆ ಟೋ ಅನ್ನೋಕ್ ಬರ್ದೇ ಇರೋವ್ರೂ ಪ್ರಧಾನಿ ಕುರ್ಚಿ ಅಲ್ಲಾಡಿಸ್ತಾನೆ. ಬಡಪಾಯಿ ಪ್ರಧಾನಿ ನಿದ್ರೆ ಮಾಡಬೇಕಾದ್ರೂ ಎಲ್ಲಾ ಪಕ್ಷಗಳ ಪರ್ಮಿಷನ್ ತೊಗೊಂಡು ನಿದ್ರಿಸ್ಬೇಕು. ಅದೂ ಎಂಥಾ ನಿದ್ರೆ? ಕೊಂಚ ಸದ್ದಾದರೂ ಏಳೋಮಟ್ಟಕ್ ಇರೋ ತರದ್ದು, ಅಪ್ಪಿತಪ್ಪಿ ಗಾಢವಾದ ನಿದ್ರೆ ಮಾಡಿದ್ನೋ ಏಳೋ ಹೊತ್ಗೆ ಮನೇಲಿರ್ಬೇಕಾಗತ್ತೆ, ಇನ್ಯಾರೋ ಆ ಜಾಗ್ದಲ್ಲಿ ಕೂತಿರ್ತಾರೆ. ಜಾರೋಬಂಡೆ ಜಗತ್ತಲ್ಲಿ ಜಾಗ ಮಾಡ್ಕೊಂಡು ಕೂಡೋದ್ರ ಬದ್ಲೂ ಝುಮ್ಮಂತ ಜನ್ಮಸ್ಥಳದಲ್ಲೇ ಇರೋದೇ ವಾಸೀನೋ ಏನೋ...

- ಎನ್. ರಾಮನಾಥ್

ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆ(2008)ಯಲ್ಲಿ ಮೆಚ್ಚುಗೆ ಪಡೆದ ಲೇಖನ

ಏ ನನ್ನ ಗುಲಾಬೀ...

- ಜಯದೇವ ಮೊಳೆಯಾರ

"ಏ ನನ್ನ ಗುಲಾಬೀ..." ಎಂದು ಉಲಿದದ್ದು ಗುಲಾಬಿಯಂತಹ ಮುದ್ದಿನ ಮೊಗದ, ಬಳ್ಳಿಯಂತೆ ಬಳುಕುವ, 70mm ಸ್ಕ್ರೀನಿನಲ್ಲಿ ಥಳುಕುವ ಮಾದಕ ಕಂಗಳ ಯಾವುದೇ ಆಮದಿತ ಸೆಕ್ಸೀ ಸ್ವರವಲ್ಲ. "ಏ ನನ್ನ ಗುಲಾಬೀ..." ಎಂದು ಒದರಿದ್ದು ಸಿಡುಕು ಮೊಗದ, ಕೆಡುಕು ಕಂಗಳ, ಒಂದು ಕೈ ಸೊಂಟದಲ್ಲಿರಿಸಿ, ಇನ್ನೊಂದು ಕೈಯಲ್ಲಿ ನನ್ನನ್ನು 'ಒಂದು ಕೈ' ನೋಡಲಾಹ್ವಾನಿಸುವ ನನ್ನ ವನ್ ಐನ್ಡ್ ದ ವನ್ಲೀ ಹೌಸ್ ವಾನರ್ ನನ್ನೆಂಡ್ತಿ!! ಅವಳು ಹಾಗಂದಿದ್ದು ಮೂರು ದಿನದಿಂದ ನೀರು ಕಾಣದ, ಬರಗಾಲ ಪೀಡಿತ, ಬಿಸಿಲಿಗೆ ಬಳಲಿ bend-ಆದ ಮುಡಿ ತಿರುಚಿದ, ಎಲೆ ಕರಟಿದ ಮನೆಯಂಗಳದಲ್ಲಿ ಪಾಟಸ್ಥ ನಮ್ಮ ಒಂದು ಗುಲಾಬಿ ಗಿಡವನ್ನು ನೋಡಿ.

ಇಷ್ಟರಲ್ಲೇ ನಿಮಗೆ ಆಗಿರುವ ಪ್ರಮಾದದ ಅರಿವು ಆಗಿರಬಹುದು. ಎಮ್ಮ ಮನೆಯಂಗಳದ ಗುಲಾಬಿ ಗಿಡವೊಂದು ನೀರು ಕಂಡು ಮೂರು ದಿನಗಳಾಗಿದ್ದವು; ಕಾಣದೆಯೂ ಮೂರು ದಿನಗಳೇ ಆಗಿದ್ದವು! ಬೇರೆಲ್ಲಾ ಗಿಡಗಳು ಕಾಲ ಕಾಲಕ್ಕೆ ನೀರುಂಡು ನಳ ನಳಿಸುತ್ತಿದ್ದರೂ, ಇದೊಂದು ಗೋಡೆಯಂಚಿನ ಗಿಡ ಮಾತ್ರ ನೀರಿಗಾಗಿ ಕಳ ಕಳಿಸುತ್ತಿತ್ತು; ಬೇಸಿಗೆಯ ಈ ಬಿಸಿಗೆ ಸಾಯುವ ಪರಿಸ್ಥಿತಿಯಲ್ಲಿ ಮುಖ ಕರಟಿ ರೋಧಿಸುತ್ತಿತ್ತು.

"ಏ ನನ್ನ ಗುಲಾಬೀ..." ಸ್ವರಾತಿರೇಕದಿಂದ ಬೊಬ್ಬಿಟ್ಟಾಗಲೇ ನಿಮಗೆಲ್ಲ ತಿಳಿದುಹೋಗಿರಬೇಕು ನಮ್ಮಿಬ್ಬರೊಳಗೆ ಅದರ ನೀರಾವರಿಯ ಉಸ್ತುವಾರಿ ಯಾರ ಮಡಿಲಿನ ಕೂಸೆಂದು. 'ಪಂಪ-ರನ್ನ' ಮಾಡಿ 'ಹನಿ ಹನಿ'ಯಾಗಿ ನೀರನ್ನ 'ಹಾಯ್ಸು'ವ ಕೆಲಸ ಅಲ್ಪಸ್ವಲ್ಪ ಸಾಹಿತ್ಯದಲ್ಲಿ ಆಸಕ್ತಿಯಿರುವ ನನಗೇ ಬಂದು ಸೇರಿದ್ದು ಆಶ್ಚರ್ಯವೆನಿಸಲಾರದು. ಪುರುಷ ಸ್ವಾತಂತ್ರ್ಯದ ಕಾಲವಿನ್ನೂ ಆರಂಭವಾಗದಿದ್ದರೂ ಪತ್ರಿಕೆಗಳಲ್ಲಿ ಇತ್ತೀಚೆಗೆ "ಪುರುಷ ಸಂಪದ' ಎಂಬ ಕಾಲಂ ಅಂತೂ ಆರಂಭವಾಗಿರುವ ಕಲಿಯುಗದ ಈ ಅಪೂರ್ವ ಕಾಲಘಟ್ಟದಲ್ಲಿ ಎಲ್ಲರ ಮನೆ ದೋಸೆಯಂತೆ ನಮ್ಮ ಮನೆಯಲ್ಲೂ ಮನೆಗೆಲಸಗಳೆಲ್ಲಾ ಲಿಂಗಾವಾರು ಪ್ರಾಂತ್ಯಗಳಾಗಿ ಹಂಚಿಹೋಗಿವೆ. ಕೆಲವು ಹಿಸ್ಸಾದರೆ ಇನ್ನು ಕೆಲವು ಹರ್ಸಾಗಿವೆ. ಇನ್ನೆಷ್ಟೋ ಕೆಲವು ಕೆಲಸಗಳು ಕಾಸರಗೋಡು-ಬೆಳಗಾವಿನಂತೆ ವಿವಾದಿತ ಪ್ರಾಂತ್ಯಗಳಾಗಿ ಲಾಗಾಯ್ತಿನಿಂದ ವಾರಸುದಾರರಿಲ್ಲದೆ ಕಂಗೊಳಿಸುತ್ತವೆ. ಆದರೆ ಸದ್ಯಕ್ಕೆ ಈ

ನೀರಾವರಿಯಂತೂ ಅವಿವಾದಾಸ್ಪದವಾಗಿಯೂ ನನ್ನದೇ ವರಿ ಎಂಬುದು ಅವಳು ಪ್ರಸ್ತುತಪಡಿಸಿದ ಡೆಸಿಬೆಲ್ಲಿನಿಂದಲೇ ಸ್ವಯಂವೇದ್ಯ!

ಹುಲಿಯನ್ನು ಕಂಡು ಜೀವದಾಸೆಯಿಂದ ಪ್ರಚೋದಿತವಾದ ಜಿಂಕೆಮರಿಯಂತೆ ಕೂಡಲೇ ನಾನು ಜಾಗ್ರತನಾದೆ. ನನ್ನ ಹೆಡ್ ಆಫೀಸು ಕೂಡಲೇ ದೇಶದ ಎಲ್ಲಾ ಹೆಡ್ ಆಫೀಸುಗಳಂತೆ ನಿಧಾನವಾಗಿ ಕೆಲಸ ಮಾಡಲು ಆರಂಭಿಸಿತು. ಆದರೆ, ನಮ್ಮೆರಡು ಕೈಗಳು ಭುಜಗಳಲ್ಲಿದ್ದರೂ ಇಂತಹ ತುರ್ತು ಪರಿಸ್ಥಿತಿಯಲ್ಲಿ ಕೆಲಸ ಮಾಡಲಾರದೇ ಕೈ ಕೊಡುವುದು ತಲೆಯೇ ಅಲ್ಲದೆ ಭುಜಗಳಲ್ಲ. ಆ ಕ್ಷಣದಲ್ಲಿ ಹೊಳೆದ ಕೆಲವು ಉತ್ತರಗಳನ್ನು ಆದಷ್ಟು ಕ್ಷಿಪ್ರವಾಗಿ ಒಂದು ತೌಲನಾತ್ಮಕ ಅಧ್ಯಯನಕ್ಕೆ ಒಳಪಡಿಸಿ ಬೆಸ್ಟಾಫ್ ಕಾರಣಾಸ್ ಎಂಬ ಒಂದನ್ನು ಹೆಕ್ಕಿ ಹೊರಕ್ಕೆಳೆದೆ – "ಗೋಡೆಯಂಚಿಗಿದೆಯಲ್ಲ..., ಹಾಗಾಗಿ ಪೈಪ್ ಅಲ್ಲಿಯವರೆಗೆ ಬರುವುದಿಲ್ಲ... ಪ್ಪೆ ಪ್ಪೆ ಪ್ಪೆ... ನೀರು ಹಾಯಿಸುವಾಗ ಬಹುಶಃ ಸರಿಯಾಗಿ ಬಿದ್ದಿರಲಿಕ್ಕಿಲ್ಲ... ಪ್ಪೆ ಪ್ಪೆ ಪ್ಪೆ...ಬ್ಬೆ ಬ್ಬೆ ಬ್ಬೆ!!"

"ವೆಲ್ ಟ್ರೈಡ್... ಕಮ್ ಔಟ್ ವಿದ್ ಅ ಬೆಟರ್ ವನ್ ನೆಕ್ಸ್ಟ್ ಟೈಮ್, ಡ್ಯೂಡ್" ಎಂಬಂತೆ ಲುಕ್ಕಿದಳು ಅಲ್ಲಲ್ಲ, ಸ್ಟೇರಿದಳು.

ಅರ್ಧಾಂಗಿಯೆದುರು ನಾನು ಕಾಲಂಗಿಯಾದೆ (ಕಾಲಂಗಿ ಕನ್ನಡ; ಅದರ ಇಂಗ್ಲೀಷ್ ರೂಪಾಂತರ–socks!!). ತಪ್ಪು ನನ್ನದೇ. ಗುಲಾಬಿಯು ಬಾಡಿತ್ತು, ಆಟವು ಮುಗಿದಿತ್ತು. ಬಲೀ ಕಾ ಬಕ್ರಾ ಎಂದಾದೊಡೆ ನನ್ನ ಕೊರಳ್ ಒಪ್ಪಿಸುವುದೇ ಲೇಸೆಂದಿದ್ದ ಸರ್ವಜ್ಞ!

ನಂಬಿದರೆ ನಂಬಿ, ಬಿಟ್ಟರೆ ಬಿಡಿ; ನನ್ನಪ್ಪಾಣೆಗೂ ಹೇಳ್ತೇನೆ... ನಾನಂತೂ ಒಂದು ಪೈಸೆ ವರದಕ್ಷಿಣೆ ತೆಗೆದುಕೊಂಡಿಲ್ಲ. ಪ್ರಮಾಣ ಬೇಕಿದ್ರೆ ಮಾಡ್ತೇನೆ. ಆದರೆ ತಿಂಗಳಿಗೊಮ್ಮೆ ನಾವು ಮಾವನ ಮನೆಗೆ ಹೋದಾಗ್ಲೆಲ್ಲ ಇನ್ಸ್ಟಾಲ್ಮೆಂಟೋಪಾದಿಯಲ್ಲಿ ಗುಲಾಬಿ ಗಿಡಗಳು ಪಾಟ್ ರೂಪೇಣ ನನ್ನ ಕಾರಿನ ಡಿಕ್ಕಿಯೇರಿ ನಕ್ಕದ್ದು ನಿಜ. ಇವು ವರದಕ್ಷಿಣೆಯೂ ಅಲ್ಲ; ವಾರದಕ್ಷಿಣೆಯೂ ಅಲ್ಲ, ಒಂಥರಾ ಮಾಸದಕ್ಷಿಣೆ ಎನ್ನಬಹುದು. ಆದರೆ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಸ್ವೀಕರಿಸಿರುವ ಈ ಮಾಸದಕ್ಷಿಣೆಗಳು ವರ್ಷಪೂರ್ತಿ ನನ್ನನ್ನು 'ದುಡಿಸಿಕೊಳ್ಳುವುದು' ಅಂತೂ ಪರಮ ಸತ್ಯ. ಗೇಟಿನೊಳಗೆ ಸಾಲಾಗಿ ಕುಳಿತು ಸಾಲಂ ಕೃತ ನನ್ನ ಮನೆಯನ್ನು ಸಾಲಂಕೃತಗೊಳಿಸುತ್ತವೆ. ಈ ಗುಲಾಬೀ ಕುಂಡಗಳು ಸಂಸಾರವೆಂಬ ಶೋಕಭೂಮಿಯಲ್ಲಿ ಅಗ್ನಿಕುಂಡಗಳಾಗಿ ಉರಿಯುತ್ತವೆ. ದಿನಾ ನೀರು ಹಾಕಿದರೂ ಆರದ ಜಗತ್ತಿನ ಏಕೈಕ ಟೈಪ್ ಆಫ್ ಕುಂಡವಾಗಿ ನನ್ನ ಹೊಟ್ಟೆ ಉರಿಸುತ್ತವೆ.

ಇಂದಿನ ಕೊಳ್ಳುಬಾಕ ಸಂಸ್ಕೃತಿಯ ಯಾವುದೇ ಸರಕಿನಂತೆ ಈ ಪಿಶಾಚಿಗಳೂ ಕೇವಲ ಅವೇ ಆಗಿ ಬರುವುದಿಲ್ಲ, ಜೊತೆಗೆ ಕೆಲವು ಸಲಹೆಗಳೂ ಉಚಿತವಾಗಿ ಬರುತ್ತವೆ. ಪ್ರತಿ ಬಾರಿ ಒಂದೊಂದು ಕುಂಡವನ್ನೂ ಬಿದಾಯಿನೋ ವಿದಾಯಿಯೋ ಮಾಡುವಾಗಲೂ ಅವಳ ಹೆಡ್ ಆಫೀಸು ಓನರ್ ಅಂದ್ರೆ ನನ್ನತ್ತೆ ಈ ಉಚಿತ ಕೊಡುಗೆಗಳನ್ನು ಪುಂಖಾನುಪುಂಖವಾಗಿ ನೀಡುತ್ತಲೇ ಬಂದಿದ್ದಾರೆ: "ದಿನಕ್ಕೆರಡು ಬಾರಿ ನೀರು ಹಾಕಬೇಕು..., ಸರೀ ನೀರು

ಹಾಕಬೇಕು...., ಸರೀ ಬಿಸಿಲು ಬೀಳಬೇಕು..., ಇರುವೆ ಬಾರದಂತೆ ನೋಡಿಕೊಳ್ಳಬೇಕು..., ಸೆಗಣಿ ಹಾಕಬೇಕು (ಎಲ್ಲಾ ನಾನೇ ಮಾಡಬೇಕೆ!!!!), ಹೌದು, ಈಚೀಚೆಗೆ ಅದರ ಬಗ್ಗೆ ಯಾವುದೇ ಸಂಶಯವೂ ಉಳಿದಿಲ್ಲ. ಅಂತಹ ಸಲಹಾರ್ಚನಾ ಸಂದರ್ಭಗಳಲ್ಲಿ ಕಾರಿನ ಬದಿ ಸೀಟಿನಲ್ಲಿ ಕೋಪ್ಸೈಲಟಿಗಳಾಗಿ ವಿರಾಣಿಮಾನವಾಗಿರುವ ಅವಳು ಕೇವಲ "ಗೊತ್ತಾಯಿತೇ..." ಎಂಬಂತೆ ನನ್ನನ್ನು ನೋಡಿ ಹುಬ್ಬೇರಿಸುವುದು ಮಾತ್ರ. ನಾನಂತೂ ಈ ಗು-lobbyಗೆ ಸಂಪೂರ್ಣವಾಗಿ ಶರಣಾಗಿದ್ದೇನೆ, ನನ್ನನ್ನು ನಾನು ಅರ್ಪಿಸಿಕೊಂಡಿದ್ದೇನೆ. ಈ ನಾಲ್ಕು ಮಾತುಗಳೊಂದಿಗೆ ಸೆರಗಿನಿಂದ ಕಣ್ಣೊರಸುತ್ತಾ ತಾವೇ ನೀರುಣಿಸಿ ಸಾಕಿ ಸಲಹಿದ ಗುಲಾಬಿ ಗಿಡವನ್ನು ಅತೀವ ದುಃಖದಿಂದ ಬೀಳ್ಕೊಡುವ ಆ ಮಹಾದಾನಿಗಳ ನೇತ್ರಾವತಿ ನನ್ನ ಹಾಲತ್ ಅನ್ನು ಕಂಡು ನನಗಾಗಿಯೇ ಹರಿಸಿದ್ದು ಎಂದು ನಾನು ಸುಳ್ಳೇ ಭಾವಿಸಿ ಸಮಾಧಾನ ಪಟ್ಟುಕೊಳ್ಳುತ್ತೇನೆ.

ಈ ಹೂ ಕುಂಡಗಳಿಗೂ ನನಗೂ ಯಾವ ಜನ್ಮದ ಮೈತ್ರಿಯೋ ನಾನರಿಯೆ. ನನಗಂತೂ ಈ ಹದಿನಾರನೇ ಶತಮಾನದ ಇಂಗ್ಲೀಷ್ ನಾಟಕಕಾರನು ಹೇಳಿದ್ದೆಲ್ಲವೂ ಶುದ್ಧ ನಾಟಕವೆಂದು ಖಚಿತವಾಗಿದೆ. ನನಗಾದರೋ, ಗುಲಾಬಿ ಬೇರಾವ ಹೆಸರಿನಿಂದಲೂ ಅಷ್ಟೇ ಅಪ್ರಿಯ, ಅಷ್ಟೇ ಭಯಾನಕ! ನಾಳೆಯಿಂದ ಅದನ್ನು ಕಮಲವೆಂದು ಕರೆದರೆ ಅದರಲ್ಲಿರುವ ಮುಳ್ಳುಗಳು ಮಾಯವಾಗುತ್ತವೇನು?

ಹಣದುಬ್ಬರದ ಅಬ್ಬರದ ಈ ಕಾಲದಲ್ಲಿ ಕುಟುಂಬಯೋಜನೆಗೆ ಯಾವುದೇ ಪ್ರಚಾರ ಬೇಕಿಲ್ಲ. ಹಣದ ಬೆಲೆ ಅರಿತಿರುವ ಯಾವನಾದರೂ ಬೇಕೂಫ ಕುಟುಂಬ ಯೋಜನೆಯ ಯೋಚನೆ ಮಾಡದಿರಲಾರ. ಹಾಗಾಗಿ ಮಕ್ಕಳನ್ನು ಸಾಕಿ ಹೆಚ್ಚು ಅನುಭವವಿಲ್ಲದಿದ್ದರೂ ಒಂದು ಸಣ್ಣ ಹೂತೋಟ ಎಮ್ಮ ಮನೆಯಂಗಳದಿ ರಾರಾಜಿಪುದು. ಅಲ್ಲದೆ ಅದಕ್ಕೆ ನಾನೇ ಮಾಲಿ ನಾನೇ ಮಾಲೀಕ. ನಿವೃತ್ತಿ ಜೀವನದಲ್ಲಿ ಒಂದು ವೃತ್ತಿ. ಸ್ವಯಂ ನಿವೃತ್ತಿಯನ್ನು ನಾನೇ ತೆಗೆದುಕೊಂಡಿದ್ದರೂ ಈ ಹೂತೋಟದಲ್ಲಿನ ವೃತ್ತಿ ನನ್ನ ಮೇಲೆ ಹೇರಲ್ಪಟ್ಟಿದ್ದು. ಈ ಮಾಲಿತನ ಕಮ್ ಮಾಲೀಕತನ ಪಟ್ಟ ನನಗೆ ನಂಬಾಸ್ ಅರ್ಥಾತ್ ನನ್ನೊಡತಿಯೇ ಕಟ್ಟಿದ್ದು ಎಂದು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆಯಿಲ್ಲವೆಂದು ಹೇಳತಕ್ಕಂಥಹ ಒಂದು ಮಾತನ್ನ ನಾನಿಲ್ಲಿ ಹೇಳಬಯಸುತ್ತೇನೆ.

ಮೊದಮೊದಲು ಈ ಪೂಕಳ ಕಾರ್ಯಕಾರೀ ವಿಷಯಗಳಲ್ಲಿ ನಮ್ಮೊಳಗೆ ಭಾರೀ ಮಾತುಕತೆಗಳಾಗುತ್ತಿದ್ದವು. ನೀರಿನ ಬಗ್ಗೆ ಗೊಬ್ಬರದ ಬಗ್ಗೆ, ಸಸ್ಯದ ಆರೈಕೆಯ ಬಗ್ಗೆ... ನಾನು ಲೆಫ್ಟಾದರೆ ಅವಳು ರೈಟು; ನಾನು ರೈಟಾದರೆ ಅವಳು ರಾಂಗು. ಹೂಗಳ ಸರ್ವತೋಮುಖ ಏಳ್ಗೆಗಾಗಿ ಅವಳು ಮಾಡಿದ ಕೆಲವು ನಿಸ್ವಾರ್ಥ ನಿರುಪದ್ರವೀ ಸಲಹೆಗಳು (ಸ್ವಘೋಷಿತ) ನನಗೆ ಕರ್ಣಕಠೋರವಾಗಿ ಕೇಳುತ್ತಿದ್ದವು. ನನ್ನ ಮೇಲೆ ನಡೆಯುವ ದಬ್ಬಾಳಿಕೆ ಎಂದೂ ತೋರುತ್ತಿದ್ದವು. ಕೆಲವೊಮ್ಮೆ ಮಾತಿಗೆ ಮಾತು ಜೋರಾಗಿ ಜಗಳಗಳಾಗಿ ಮಕ್ಕಳ ಮಧ್ಯಸ್ಥಿಕೆಯಿಲ್ಲದೆ ಪರಿಹರಿಸಲ್ಪಡುತ್ತಿರಲಿಲ್ಲ. ನಮ್ಮ ಮಾತುಗಳೆಲ್ಲ ಕತೆಗಳಾಗಿ ನೆರೆ ಹೊರೆಯ ಮನೆಗಳಲ್ಲಿ ಕರೆಂಟಿಲ್ಲದಾಗಲೋ, ಟಿ.ವಿ. ಕೆಟ್ಟೋದಾಗಲೋ ಆಡಿಕೊಳ್ಳಲು

ಬಳಕೆಯಾಗುತ್ತಿದ್ದವು. 'ಸಂಪೂರ್ಣ ಗುಲಾಬಾಯಣ ದರ್ಶನ'ದ ಅಬ್ಬರಿಗೆ ಅವಳು ತೀರ್ಮಾನಿಸಿದ್ದು ಹೀಗೆ:

1. ನೀರಾವರಿಯ ಸಂಪೂರ್ಣ ಹೊರೆ ನಿಮ್ಮದು.
2. ನೀರಾವರಿಯನ್ನು ಬೇಕಾಬಿಟ್ಟಿ ಮಾಡುವ ಪರಿಯೂ ನಿಮ್ಮದೇ.
3. ಆದರೆ, ಒಂದಾದರೂ ಗಿಡ ಬಾಡಿರುವ ಸ್ಥಿತಿಯಲ್ಲಿ ನನಗೆ ಕಾಣಬಾರದು.

ಇದು ಪುರುಷ ಸ್ವಾತಂತ್ರ್ಯಕ್ಕೆ ಅವಳು ಮಾಡಿದ ಅತ್ಯಂತ ಶ್ರೇಷ್ಠ ಸೇವೆ!

ಅಂತೂ ಜನ್ಮ ತಾಳಿತು ನಮ್ಮ ಕರಾರುವಾಕ್ಕಾದ ವಾಕ್-ಕರಾರು. ಇದನ್ನು ನಾನು ನಿಟಿಸಲಿಲ್ಲ. 'ಸಹಿ'ಸಲೂ ಇಲ್ಲ. ಆದರೂ ಈ ಉರುಳಿಗೆ ಕೊರಳ್ ಕೊಟ್ಟೆ. ಬೇ-ಸತ್ತಿದ್ದ ನನಗೆ ದಿನದಿಂದ ದಿನಕ್ಕೆ ಹದಗೆಡುತ್ತಿದ್ದ ಈ ಸಂಸದ್ ಅಧಿವೇಶನದಿಂದ ಒಟ್ಟಾರೆ ಹೊರಬಂದರೆ ಸಾಕಿತ್ತು. ಅಂದು ನನಗೆ ಅಷ್ಟರಲ್ಲೇ ವಿಜಯೋತ್ಸವ.

ಅಂದಿನಿಂದ ಆರಂಭವಾಯಿತು – ಸೊಂಟಕ್ಕೆ ಕೈ! ಒಪ್ಪಂದದಂತೆ ಒಪ್ಪ+ಅಂದವಾಗಿ ಗಿಡಗಳ ಸಂಪೂರ್ಣ ಜವಾಬ್ದಾರಿಯನ್ನು ನನ್ನ ಮಡಿಲಲ್ಲಿ ಡಂಪಿಸಿ ಅವಳು ಬರೇ ಮೇಲ್ವಿಚಾರಣೆ ಮಾಡತೊಡಗಿದಳು. ಆಫೀಸಿನಿಂದ ಬೇಗನೆ ಬಂದ ದಿನಗಳಲ್ಲೆಲ್ಲಾ ಕೈತೋಟವನ್ನು ಒಂದು ಸ್ಕ್ಯಾನ್ ಮಾಡುವಳು. (ವಾಹ್ ರೇ ನಸೀಬ್..., ಸೊಂಟಕ್ಕೂ ಕೈತೋಟಕ್ಕೂ ಕೈ!! ಸ್ಕ್ಯಾನ್ನಿಂಗಿನಲ್ಲಂತೂ ಅವಳದು ಎತ್ತಿದ ಕೈ!!) ಅವಳ ಕಣ್ಣುಗಳೇ ಒಂದು "ಬಾಡೋಮೀಟರ್" ಎಲ್ಲೆಲ್ಲಿ ಯಾವ ಗಿಡಗಳು ಬಾಡುತಿದೆಯೆಂದು ಕರಾರುವಾಕ್ಕಾಗಿ (ಅಂದ್ರೆ, ಆಸ್ ಪರ್ ಕೋಂಟ್ರಾಕ್ಟ್) ಹೇಳಬಲ್ಲಳು. ಯಾವ ಯಾವ ಗಿಡಗಳಿಗೆ ಎಷ್ಟು ಮಿಲಿ ನೀರು ಕಡಿಮೆ ಹನಿಸಿರುವೆ ಎಂದೂ ಗ್ರಹಿಸಬಲ್ಲಳು. "ಏ ನನ್ನ ಗುಲಾಬೀ..." ಎಂದು ಒದರಿದ್ದು ಅಂತಹುದೇ ಒಂದು ಸ್ಕ್ಯಾನ್ನಿಂಗಿನ ಬಳಿಕ.

"ಇದನ್ನು ಬದುಕಿಸಿ ಜೀವ ಮಾಡಿ ತೋರಿಸಿದರೆ ಸಾಕಲ್ಲವೇ? ಅದು ನನ್ನ ಜವಾಬ್ದಾರಿ" ಎಂದು ಖಂಡಿತ ಸ್ವರದಲ್ಲಿ ಹೇಳಿದೆ. ಏನೂ ಹೇಳದೆ ಸೀದಾ ಮನೆಯೊಳಗೆ ಧಿಮಿ ಧಿಮಿಸಿದಳು ಭಾರ್ಯಾಮಣಿ. ಹಾಗೆ ನಡೆಯುವಾಗ ಮನೆಯೊಳಗೆ ಯಾವುದೇ ಕಂಪನ – ಗಿಂಪನ ಉಂಟಾಗದಿದ್ದರೂ ನನ್ನ ಮನದೊಳಗೆ ಭೂಕಂಪ ಸ್ಫೋಟಿಸತೊಡಗಿತು. ನಾನು ಮಾಡಿದ ಚ್ಯಾಲೆಂಜ್...!! ಅದು ನಾನು ಮಾಡಿದ ಎರಡನೇ ತಪ್ಪು. ಒಂದು ತಪ್ಪನ್ನು ಒಪ್ಪ ಮಾಡಲು ಹೋಗಿ ಇನ್ನೊಂದು ತಪ್ಪು. (ಶಾಬ್ಬಾಶ್ ಬೇಟೇ!!) ಅಂತೂ ಚ್ಯಾಲೆಂಜ್ ಮಾಡಿಯಾಯಿತು, ಒಡನೇ ಕಾರ್ಯ ಪ್ರವೃತ್ತನಾದೆ. ಬಾಡಿದ ಗುಲಾಬಿ ಕುಂಡವನ್ನು ಡಾ|| ಮಾಲಿಯವರ ಐ.ಸೀ.ಯು.ಗೆ ಅಡ್ಮಿಟ್ ಮಾಡಿದೆ. ಗೋಡೆಯಂಚಿನಿಂದ ಸ್ಥಾನಪಲ್ಲಟಗೊಳಿಸಿ ಬಾಗಿಲೆದುರು ತಂದಿರಿಸಿದೆ. ತೀವ್ರ ಶುಶ್ರೂಶೆಗೆ ಒಳಪಡಿಸಿದೆ. ದಿನಕ್ಕೆ ನಾಲ್ಕು ಬಾರಿ ನೀರುಣಿಸತೊಡಗಿದೆ. ಅತ್ಯಂತ ಸೂಕ್ಷ್ಮವಾಗಿ ಪರೀಕ್ಷಿಸತೊಡಗಿದೆ. ಮೂರು ದಿನಗಳ ಬರಪೀಡೆಯಿಂದಾಗಿ ಎಲೆಗಳೆಲ್ಲವೂ ಒಣಗಿ ಉದುರಿತ್ತು. ಮಧ್ಯದ ಒಂದು ದಂಟು ಮಾತ್ರ ಉಳಿದಿತ್ತು. ಅದು ಕೂಡ ಅರೆಸತ್ತು ಹಸಿರು ಸಂಪೂರ್ಣ ಮಾಸಿ ಒಣಗಿದ

ಗಿಡವಾಗಿಯೇ ತೋರುತ್ತಿತ್ತು. ಬದುಕಿಸುವ ಆಶೆ ಹೆಚ್ಚು ಉಳಿದಿಲ್ಲ ಎಂಬುದು ಮಕ್ಕಳಿಗೂ ತೋರತೊಡಗಿತು. ಆದರೆ ರಣವೀಳ್ಯೆ ತೆಗೆದುಕೊಂಡಾಗಿತ್ತಲ್ಲವೇ? ಇನ್ನು ಎರಡೇ ದಾರಿ – ಮಾಡು ಇಲ್ಲವೇ ಮಾಡಿ!! ಬೇರೆ ದಾರಿ ಇಲ್ಲ. ಮುಂಬರುವ ಕಷ್ಟದಿನಗಳ ಮುನ್ಸೂಚನೆಗಳು ನನಗವಳ ನಡವಳಿಕೆಯಿಂದಲೇ ಮನದಟ್ಟಾಗತೊಡಗಿತು.

ಅವಳ ಕೋಪ ಹುಸಿಮುನಿಸಲ್ಲ ಮಾರಾಯ್ರೇ, ಹಸಿ ಮೆಣಸು! ಖಾರ ಅಂದ್ರೆ ಖಾರ. ಮಾತೂ ಇಲ್ಲ ಕತೆಯೂ ಇಲ್ಲ. ಪಲ್ಯಗಳ ಉಪ್ಪೇರತೊಡಗಿತು; ಕಾಫಿಗಳು ಸಕ್ಕರೆ ಕಾಣದ ಡಯಾಬಿಟಿಸ್ ರೋಗಿಗಳಂತೆ ಕಂಗಾಲಾಗಹತ್ತಿದವು. ಅಡಿಗೆ ಕೋಣೆಯಲ್ಲಿ ಪಾತ್ರೆಗಳು ಸದ್ದೇರಿಸಿ ಸಂಭಾಷಿಸಲಾರಂಭಿಸಿದವು. "ಭಲ್ಲಿರೇನಯ್ಯ, ಈ ಸತಿಪತಿಯ ಕಾಳಗವನ್ನು..." ಎಂದು 'ಗುಲಾಬಿ ಪುರಾಣ' ಎಂಬ ಪ್ರಸಂಗವನ್ನು ಯಕ್ಷಗಾನಿಸುವಂತೆ ಅನಿಸತೊಡಗಿತು. ಸ್ತ್ರೀವೇಷ ಸಡನ್ನಾಗಿ ರಾಕ್ಷಸ ವೇಷವಾಗಿ ಧಿಂಗಣಿಸುವಂತೆ ಕನಸುಬೀಳತೊಡಗಿತು. ಮಕ್ಕಳಿಗೂ ನಾನು ರಜದ ಮಜವಾದೆ. ಕುಡಿಯಲು ನೀರು ಬೇಕಾದಾಗ "ಅಪ್ಪಾ, ರೋಸ್ ವಾಟರ್" ಎಂದೋ, ಮನೆಯಲ್ಲಿ ಅತ್ತಿತ್ತ ಸುತ್ತು ಬರುವಾಗ "ರೋಜ್ ರೋಜ್ ಮಕೋನಿಸ..." ಎಂದು ಹಾಡುತ್ತಲೋ, ಅಥವಾ "ಇಕ್ ರೋಜ್ ಮೈ ತಷಷ್ಕರ್..." ಎಂದು ಅರಚುತ್ತಲೋ, ಅಮ್ಮ ಆಫೀಸಿನಿಂದ ಬಂದು ತೋಟ ನೋಡಿ ಗುಲಾಬಿವದನಗಳಾದಾಗ "ರೋಸೀ ಲಿಪ್ಸ್, ಡಿಂಪಲ್ ಚಿನ್..." ಎಂದು ಕನಲುತ್ತಲೋ, ತೊದಲುತ್ತಲೋ, ಮರುಗುತ್ತಲೋ ನನ್ನ ಏರುತ್ತಿರುವ ಬಿ.ಪಿ.ಗೆ ಶೃತಿ ಸೇರಿಸತೊಡಗಿದರು. ಪಕ್ಕವಾದ್ಯದಲ್ಲಿ ಬೀಟ್ಸ್‌ನೊಂದಿಗೆ ನನ್ನ ಹಾರ್ಟ್ ಸಹಕರಿಸತೊಡಗಿತು.

ಮಿಸೆಸ್ ದ್ರೌಪದಿಗೆ ಒಂದು ಬಾರಿ ಪಾರಿಜಾತ ಪುಷ್ಪ ಬೇಕೆಂದು ಆಸೆಯಾಯಿತಂತೆ. ಆಸೆ ಹಟವಾಗಿ ರೂಪಾಂತರಗೊಳ್ಳಲು ಎಷ್ಟು ಹೊತ್ತು ಬೇಕು? ಎದುರಿಗೆ ಸಿಕ್ಕವ ಬಡ/ಭಡಾ ಭೀಮಸೇನ! ಪಾಪ! ಗಂಡುಗಲಿ ಭೀಮ ಗೊಂಡಾರಣ್ಯದಲ್ಲಿ ಅಲೆದಲೆದು ಅರೆಸತ್ತ. ಅವನ ಪಾಡು ಯಾರಿಗೂ ಬೇಡ. ಅಂತಹ ಮಹಾ ಧೈರ್ಯಶಾಲಿ ನಿಷ್ಪುಷ್ಪಿತನಾಗಿ ಬರಿಗೈಯಲ್ಲಿ ಮಡದಿಯ ಮುಖ ಕಾಣಲು ಧೈರ್ಯ ಸಾಲದೆ ತಾನಿದ್ದ ಅರಣ್ಯದಲ್ಲೇ ಇನ್ನೊಂದು ಟೆಂಪರರಿ ಸತಿಗಾಗಿ ಅಲೆದಾಡಲಾರಂಭಿಸಿದ. ಪಾರಿಜಾತ ಪುಷ್ಪ ಸಿಗದಿದ್ದರೂ ಸುಲಭವಾಗಿ ಸಿಕ್ಕಳು ಹಿಡಿಂಬಿ ಎಂಬ ರಕ್ಕಸಿ! ಅವಳಾದರೂ ಸರಿ; ಮುನಿದ ನಾರಿಗಿಂತ ಒಲಿದ ಮಾರಿಯೇ ಲೇಸೆಂದು ಹಲವು ವರುಷ ಅವಳೊಂದಿಗೆ ಸಂಸಾರ ತೂಗಿಸಿದ. ವೀರಾಧಿವೀರ ಭೀಮಸೇನನೇ ಒಂದು ಕೇವಲ ಪಾರಿಜಾತ ಪುಷ್ಪಕ್ಕಾಗಿ ಇಷ್ಟು ಬವಣೆ ಪಟ್ಟಿರುವಾಗ ನಾನು ಒಂದು ಗುಲಾಬಿಗಾಗಿ ಪಡುವ ಕಷ್ಟ ಏನು ಮಹಾ! ಆಫ್ಟರಾಲ್, ಇಟ್ಸ್ ಎ ರೋಸ್ ಯು ನೋ! ನಾನು ಈ ವಿಷಯವನ್ನು ಹೇಳಿದಾಗೆಲ್ಲಾ ನಾನು ಪುರಾಣವನ್ನು ತಿರುಚಿದ್ದೇನೆ ಎಂದು ಅವಳು ಹೇಳುವಳು. ಮಹಾಭಾರತದಲ್ಲಿ ನಡೆದ ಘಟನೆ ಹಾಗಲ್ಲವೇ ಅಲ್ಲ ಎಂದು ವಾದಿಸುವಳು. ನನಗೆ ಅವಳೆದುರು ನನ್ನ ಇಷ್ಟು ಸಣ್ಣ ಮುಖ ತಿರುಚಲೇ ಧೈರ್ಯ ಸಾಲದು! ಇನ್ನು ಅಷ್ಟು ದೊಡ್ಡ ಪುರಾಣವನ್ನೆಂತು ತಿರುಚುವೆನು?

"ಅದು ಸತ್ತೇ ಹೋಗಿದೆ. ಇನ್ನು ಅದಿಕ್ಯಾಕೆ ನೀರು ವೇಸ್ಟ್ ಮಾಡೋದು? ನಿಮ್ಮ ಹತ್ರ ಹೇಳಿದ್ರೆ ಹೀಗೇ ಆಗೋದು. ನಾನು ಮೊದಲೇ ಹೇಳಿದ್ದೆ ದಿನ ನಿತ್ಯ ಸರೀ ನೀರು ಬಿದ್ದೇ ಬೀಳಬೇಕು ಗುಲಾಬಿಗೆ. ಹೇಳಿದ್ರೆ ಆಗಲ್ಲ, ಮಾಡ್ಲಿಕ್ಕೂ ಆಗಲ್ಲ. ಅವಸ್ಥೆ ಈಗ ನನ್ನ ಅಮ್ಮನಿಗೆ ಏನು ಉತ್ತರ ಹೇಳ್ಲಿ? ಆ ವೆರೈಟಿ ಸಿಗಲ್ಲ. ಅಷ್ಟು ದೂರ ಕೊಡೈಯಿಂದ ತಂದಿದ್ರು..." ಎಂದು ನನ್ನ ಪರ್ಫಾರ್ಮೆನ್ಸ್ ಅಪ್ರೈಸಲನ್ನು ಸುಶ್ರಾವ್ಯವಾಗಿ ವಾಚಿಸತೊಡಗಿದಳು. ಒಟ್ಟಿನಲ್ಲಿ ಆ ಗುಲಾಬಿ ಗಿಡ ಅತ್ಯಂತ ವಿರಳವೆಂದೂ, ಅವಳ ಅಮ್ಮನ ಪ್ರೀತಿಯ ಕೊಡುಗೆಯೆಂದೂ, ನಾನು ಎಂದಿನಂತೆ ನನ್ನ ಅಹಂಕಾರದಿಂದ ಅದರ ಜೀವ ತೆಗೆದು ಹಾಕಿದೆನೆಂದೂ, ಅವಳ ತಂಗಿಗೆ ಆ ಗಿಡದಲ್ಲಿ ಮನಸ್ಸಿತ್ತೆಂದೂ, ಮತ್ತ್ಯಾವುದೋ ಚಾಣಾಕ್ಷ ರಾಜಕೀಯದಿಂದಾಗಿ ಅವಳು ಅದನ್ನು ಗಿಟ್ಟಿಸಿಕೊಂಡಿದ್ದಳೆಂದೂ ಅದನ್ನು ತಂಗಿಗಾದರೂ ಕೊಟ್ಟಿದ್ದರೆ ಗಿಡವಾದರೂ ಎಲ್ಲಾದರೂ ಒಂದು ಕಡೆ ಜೀವದಲ್ಲಿ ಇರುತ್ತಿತ್ತೆಂದೂ (ಮೊದಲು ಉದರ ಬುದ್ಧಿ ಈಗ ಉದಾರ ಬುದ್ಧಿ. ವಾವ್!!) ಈಗ ಅವಳು ನನ್ನಿಂದಾಗಿ ತನ್ನ ಹೆಡ್ಡಾಫೀಸಿನಲ್ಲಿ ಮುಖ ತೋರಿಸಲು ಹೇಗೆ 'ಲಾಯಖ್ ನಹೀ ರಹೀ' ಎಂದೂ ಬುಸುಗುಟ್ಟತೊಡಗಿದಳು.

ಗುಲಾಬಿ ಗಿಡದ ಹಿಂದಿನ ರಾಜಕೀಯ ನನಗೆ ಈಗ ಪರಿಚಯವಾಗತೊಡಗಿತು. ಒಟ್ಟಿನಲ್ಲಿ, ಒಂದು ಗುಲಾಬಿ, ಬರೇ ಗುಲಾಬಿಯಲ್ಲ; ಗುಲಾಬಿಯಲ್ಲ; ಗುಲಾಬಿಯಲ್ಲ!!! ಎಂಬ ಪರಮ ಸತ್ಯದ ದರ್ಶನವಾಗತೊಡಗಿತು. ನಾನು ಅರಿಯದೆಯೇ ಯಾವ ಹುತ್ತಕ್ಕೆ ಕೈ ಹಾಕಿದೆನೋ ಎಂದು ಪರಿತಪಿಸತೊಡಗಿದೆ. ಗುಲಾಬಿ ಗಿಡದ ಜೀವಕ್ಕಿಂತ ತನ್ನಮ್ಮನ ಬಳಿ ಹೇಗೆ ಮುಖ ತೋರಿಸುವುದೆಂಬ ಸಮಸ್ಯೆಯೇ ಎಲ್ಲದರಿಂದ ಮಿಗಿಲಾಗಿ ಅವಳಿಗಿದ್ದಂತೆ ತೋರತೊಡಗಿತು. ಅದರೇನು ಮಾಡೋಣ? ಮಾಡದ್ದನ್ನು ಉಣ್ಣಲಾದೀತೇ? ಮಾಡಿದ್ದನ್ನು ಉಣ್ಣದಿರಲಾದೀತೇ?

ಆ ಭಗವಂತನಿಗೂ ನನ್ನಲ್ಲಿ ಕರುಣೆ ಬಾರದ ಕಾರಣ ದಿನೇ ದಿನೇ ಓ ನನ್ನ ಗುಲಾಬಿಯು ನನ್ನ ಮಡಿಲೆಂಬ ಐ.ಸಿ.ಯು.ನಲ್ಲಿ ಕೊನೆಯುಸಿರೆಳೆಯತೊಡಗಿತು. ಒಂದು ವೇಳೆ ಇದು ಇಹಲೋಕ ತ್ಯಜಿಸಿ ಪರಂಧಾಮಕ್ಕೆ ವಿಮಾನವೇರಿದರೆ ಮುಂದೆ ಮನೆಯಲ್ಲಿ ಒಂದು ಯಃಕಶ್ಚಿತ್ ರೋಜಿಗಾಗಿ ರೋಜಾನಾ ನಡೆಯಲಿರುವ ಕುರುಕ್ಷೇತ್ರದ ಸವಿಗಲ್ಪನೆಯಲ್ಲೇ ನಡುಗತೊಡಗಿದೆ. ಈಗಾಗಲೇ ಹೂ, ಎಲೆಗಳನ್ನು ಉದುರಿಸಿಕೊಂಡು ಬರೇ ಮುಳ್ಳುಗಳನ್ನು ಹೊತ್ತು ನಿಂತು ಜೀವನ್ಮರಣಗಳ ಮಧ್ಯೆ ತುಯ್ದಾಡುತ್ತಿರುವ ಗಿಡ ನನಗೆ ಮುಂಬರುವ ದಿನಗಳ ಭೀಕರ ಕಲ್ಪನೆಯಾಗಿ ಚುಚ್ಚತೊಡಗಿದವು. "ಮೆಸರ್ಸ್ ಗುಲಾಬ್ ಚಂದ್ ಅನ್ಡ್ ಸನ್ಸ್" ಪ್ರಾಯೋಜಿತ ಧಾರಾವಾಹಿಯ ಎಪಿಸೋಡುಗಳ ಟ್ರೈಲರ್‌ಗಳು ಮನದಲ್ಲಿ ಮೂಡತೊಡಗಿದವು. ಹದಿಹರೆಯದಲ್ಲಿಯೂ ಕಟ್ಟುನಿಟ್ಟಾಗಿ ನಿಯತ್ತು ಪಾಲಿಸಿದ ನನಗೆ ಈಗ ಈ ವಯಸ್ಸಿನಲ್ಲಿ ಸೊಂಟಗಳೂ ಕೈಗಳೂ ಬಂದು ನಿದ್ದೆಯಲ್ಲಿ ಕಾಡತೊಡಗಿದವು.

ಹೇಗಾದರೂ ಮಾಡಿ ಗಿಡವನ್ನು ಬದುಕಿಸಬೇಕು, ಜೊತೆಗೆ ಅವಳ ಅಮ್ಮನ ಮನೆಯಲ್ಲಿ ನಡೆಯಲಿರುವ ಮರ್ಯಾದೆಯ ಹರಾಜನ್ನು ನಿಲ್ಲಿಸಬೇಕೆಂದು ನಾನು ಯಾವತ್ತೂ ಕಾಣದ ಯಾವತ್ತೂ ಬೇಡದ (ಪ್ರಾರ್ಥಿಸದ) ದೇವರಲ್ಲೆಲ್ಲಾ ಬೇಡತೊಡಗಿದೆ. ಹೇಗಾದರೂ

ಅವಳಮ್ಮನಿಗೆ ಈ ಸುದ್ದಿ ಮುಟ್ಟುವ ಮೊದಲೇ ಗಿಡಕ್ಕೆ ಜೀವ ತುಂಬಿ ಆ ಮೂಲಕ ನನ್ನ ಜೀವವನ್ನೂ ಕಾಪಿಡುವ ಬಗ್ಗೆ ಚಿಂತಿಸತೊಡಗಿದೆ.

ಇಹ ಪರದ ತೊಳಲಾಟದಲ್ಲಿ ದಿನಗಳೆರಡು ಉರುಳಿದವು; ರಾತ್ರಿಗಳು ಹೊರಳಿದವು; ಕೋಪ-ರೋಷಗಳು ಕೆರಳಿದವು; ಕೆಂಗಣ್ಣುಗಳು ಅರಳಿದವು; ಕದನಗಳು ಮರಳಿದವು; ಉರುಳೊಳು ಕೊರಳುಗಳು ನರಳಿದವು;

ಅಂತಹ ಒಂದು ಸುದಿನ ನಾನು ನನ್ನ ರೋಜಿಯೆದುರು ಸುಡುವ ಬಿಸಿಲಲ್ಲಿ ಕುಳಿತು 'ಮಂಡೆಬಿಸಿ' ಮಾಡುತ್ತಿರುವಾಗ ಮನೆಯೆದುರು ಕಾರು ಬಂದು ನಿಂತ ಸದ್ದು ಕೇಳಿಸಿತು. ಕಾರಿನಿಂದ ಇಳಿದದ್ದು ಅವಳಮ್ಮ!! ಇಳಿದ ಕೂಡಲೇ ಅವರ ಸ್ವಾನೀಗಣ್ಣಿಗೆ ಕಂಡಿದ್ದು ಸತ್ತು ಸುಣ್ಣವಾಗಿ ಇಹ ತ್ಯಜಿಸಿ ಇನ್ನಿಲ್ಲವಾದ, ಕೊಡೈ ಸಂಜಾತ, ಅಪರೂಪದ ಗುಲಾಬಿ ಗಿಡದ ಪಾರ್ಥಿವ ಶರೀರ!! ಹೈ ಕಮಾಂಡಿನ ಮುಖಚರ್ಯೆ ಬದಲಾಗುವುದಕ್ಕೂ, ನನ್ನ ಮನೆ ವಾಸರೆಸ್ ನನ್ಹೆಂಡ್ತಿ ಕಾರಿನ ಸದ್ದಿಗೆ ಹೊರಬಂದು ಆ ಚರ್ಯೆಯನ್ನು ಗುರುತಿಸುವುದಕ್ಕೂ ಸರಿ ಹೋಯಿತು. ಒಂದೆಡೆಯಲ್ಲಿ ತಾಯಿ-ಮಗಳ ಈ ಅಪೂರ್ವ ಸಮಾಗಮ, ಇನ್ನೊಂದೆಡೆಯಲ್ಲಿ ಸತ್ತು ಕರಟಿ ಸ್ವರ್ಗವಾಸಿಯಾದ ಗುಲಾಬಿ ಗಿಡದ ಎದುರಿನಲ್ಲಿ ಪೆಕರನಂತೆ ನಿಂತ ಬಕರನಾದ ನಾನು.....!!!

..... ನಾನು ಇನ್ನೇನೂ ಹೇಳಲಾರೆ. ಇಲ್ಲಿಗೆ ನನ್ನ ಕಥೆ ಮುಗಿಯಿತು ಸ್ವಾಮಿ!!!

❖

ವಕ್ರ ಪದಬಂಧ - ಸರಿಯುತ್ತರಗಳು

1 ತಿ	ರು	2 ಮಂ	ತ್ರ	■	3 ಕೋ	ಲ್ಮಿಂ	4 ಚು
■	■	ಗ	■	5 ಕು	ಲ	■	ನಾ
6 ಅಂ	7 ಗ	ಳ	■	ವ	■	8 ಕ	ವ
9 ಮ	ಜಾ	■	10 ವ	ರ	ದ	ಕ್ಷಿ	ಣೆ
■	11 ನ	12 ಗ	■	■	■	■	■
13 ಮಾ	ನ	ಮ	ರ್ಯಾ	ದೆ	14 ನಾ	ಚಿ	15 ಕೆ
ಸಿ	■	ನ	■	■	ರ	■	ಸ
16 ಕ	ಳ್ಳು	■	17 ವಿ	ವಾ	ದ	■	ರು

Mailing Date
5th of every month
Mailed at Rajajinagar PO

CPMG/KA/BGW-544/2006-2008
RNI-KAR-KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. **Printed at:** Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor : M. SHIVAKUMAR